**ಸಂಪುಟ:** 05 **ಸಂಚಿಕೆ:** 243 **ಪುಟಗಳು:** 08 **ಸೋಮವಾರ** 17 **ನವೆಂಬರ್** 2025

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 +91 8035841833 ₹5

**ಮುಂಜಾನೆ ಮಾತು**

ನಿಮ್ಮ ಧ್ಯೇಯದಲ್ಲಿ ಯಶಸ್ವಿಯಾಗಲು, ನೀವು ನಿಮ್ಮ ಗುರಿಯ ಬಗ್ಗೆ ಏಕ ಮನಸ್ಸಿನ ಭಕ್ತಿ ಹೊಂದಿರಬೇಕು

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ವೈದ್ಯಕೀಯ ಸೀಟು: ಎನ್‌ಆರ್‌ಐ ಕೋಟಾ ಕೈಬಿಡಲು ಆಗ್ರಹ

• **ಉದಯವಾಹಿನಿ, ಬೆಂಗಳೂರು**

ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಲಭ್ಯವಿರುವ ಸೀಟುಗಳಲ್ಲಿ ಶೇ15ರಷ್ಟನ್ನು ಅನಿವಾಸಿ ಭಾರತೀಯ (ಎನ್‌ಆರ್‌ಐ) ಕೋಟಾ ಎಂದು ನಿಗದಿ ಮಾಡಿರುವ ನಿರ್ಧಾರವನ್ನು ರಾಜ್ಯ ಸರ್ಕಾರವು ಕೂಡಲೇ ಹಿಂಪಡೆಯಬೇಕು ಎಂಬ ಒತ್ತಾಯ ಎಐಡಿಎಸ್‌ಒ ವಿದ್ಯಾರ್ಥಿ ಸಮಾವೇಶದಲ್ಲಿ ವ್ಯಕ್ತವಾಯಿತು. ಎಲ್ಲರೂ, ಶೇ15ರಷ್ಟು ಎನ್‌ಆರ್‌ಐ ನೀತಿಯು ಬಡ ಕುಟುಂಬದ ವಿದ್ಯಾರ್ಥಿಗಳ ಓದುವ ಹಕ್ಕನ್ನು ಕಸಿದುಕೊಳ್ಳುತ್ತದೆ ಎಂದು ಕಳವಳ ವ್ಯಕ್ತಪಡಿಸಿದರು. ಈ ನೀತಿಯ ವಿರುದ್ಧ ಹೋರಾಟ ಸಂಘಟಿಸುವ ನಿರ್ಣಯವನ್ನು ಸಮಾವೇಶದಲ್ಲಿ ತೆಗೆದುಕೊಳ್ಳಲಾಯಿತು.

ಭಾರತೀಯ ವೈದ್ಯಕೀಯ ಸಂಘಟನೆಯ ಕರ್ನಾಟಕ ವೃತ್ತಪರರ ರಕ್ಷಣಾ ಕಾರ್ಯಕ್ರಮದ ಅಧ್ಯಕ್ಷ ಡಾ.ಮಧುಸೂದನ ಕರಿಗನೂರು, 'ಸರ್ಕಾರದ ಈ ನಡೆಯಿಂದ ವೈದ್ಯಕೀಯ ಸೀಟುಗಳ ಶುಲ್ಕ 25 ಲಕ್ಷದಷ್ಟಾಗುತ್ತದೆ. ಇದರಿಂದ ವೈದ್ಯಕೀಯ ಶಿಕ್ಷಣ ಇನ್ನಷ್ಟು ವ್ಯಾಪಾರೀಕರಣ ಆಗಲಿದೆ. ಅಷ್ಟು ದುಡ್ಡು ಕೊಟ್ಟು ವೈದ್ಯಕೀಯ ಪದವಿ ಪಡೆದವರು, ಜನರ ಸೇವೆ ಮಾಡುತ್ತಾರೆ ಎಂದು ನಿರೀಕ್ಷಿಸಲಾಗುವುದೇ' ಎಂದು ಪ್ರಶ್ನಿಸಿದರು.

## ರಾಜ್ಯದ ಅನೇಕ ಜಿಲ್ಲೆಗಳಲ್ಲಿ 'ಚಳಿ ಹೆಚ್ಚಳ': ಹವಾಮಾನ ಇಲಾಖೆ

• **ಉದಯವಾಹಿನಿ, ಬೆಂಗಳೂರು**

ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಚಳಿ ಹೆಚ್ಚಾಗುತ್ತಿದ್ದು, ಮುಂದಿನ 2 ದಿನಗಳ ವರೆಗೆ ವಿವಿಧ ಭಾಗಗಳಲ್ಲಿ ಹಾಗೂ ಉತ್ತರ ಒಳನಾಡಿನಲ್ಲಿ ಚಳಿಯ ಪ್ರಮಾಣ ಹೆಚ್ಚಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಬೆಂಗಳೂರು ನಗರದಲ್ಲಿ ಕನಿಷ್ಠ ತಾಪಮಾನ 17.2 ಡಿಗ್ರಿ ಸೆಲ್ಸಿಯಸ್ ದಾಖಲಾಗಿದ್ದು, ಎಚ್‌ಎಎಲ್ ವಿಮಾನ ನಿಲ್ದಾಣದ ವೀಕ್ಷಣಾಲಯದಲ್ಲಿ ಕ್ರಮವಾಗಿ 1 ಡಿಗ್ರಿ ಸೆಲ್ಸಿಯಸ್ ಮತ್ತು 0.7 ಡಿಗ್ರಿ ಸೆಲ್ಸಿಯಸ್ ಇಳಿಕೆಯಾಗಿ 16.9 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ. ಬೆಳಗಾವಿ ವಿಮಾನ ನಿಲ್ದಾಣದ ವೀಕ್ಷಣಾಲಯದಲ್ಲಿ ಕನಿಷ್ಠ 11.6 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದ್ದು, ಸಾಮಾನ್ಯಕ್ಕಿಂತ 4.8 ಡಿಗ್ರಿ ಸೆಲ್ಸಿಯಸ್ ಕುಸಿತವಾಗಿದೆ. ವಿಜಯಪುರ ಮತ್ತು ಧಾರವಾಡದಲ್ಲಿ ಕ್ರಮವಾಗಿ 12.4 ಮತ್ತು 12 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ. ಮೈಸೂರು ಮತ್ತು ಶಿವಮೊಗ್ಗದಲ್ಲಿ ಕ್ರಮವಾಗಿ 17.8 ಮತ್ತು 15.8 ಡಿಗ್ರಿ ಸೆಲ್ಸಿಯಸ್ ಕನಿಷ್ಠ ತಾಪಮಾನ ದಾಖಲಾಗಿದೆ.

## ಸರ್ದಾರ್ ಪಟೇಲ್ ಜನ್ಮದಿನ ನ.19ರಂದು ಏಕತಾ ನಡಿಗೆ

• **ಉದಯವಾಹಿನಿ, ಬೆಳಗಾವಿ**

ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ 150ನೇ ಜನ್ಮದಿನ ಅಂಗವಾಗಿ. ನಗರದಲ್ಲಿ 'ಮೈ ಭಾರತ' ಕೇಂದ್ರದ ಸಹಯೋಗದೊಂದಿಗೆ ನ.19ರಂದು 'ಏಕತಾ ನಡಿಗೆ' ಹಮ್ಮಿಕೊಂಡಿದ್ದೇವೆ' ಎಂದು ಸಂಸದ ಜಗದೀಶ ಶೆಟ್ಟರ್ ಹೇಳಿದರು. 'ಅಂದು ಬೆಳಿಗ್ಗೆ 7ಕ್ಕೆ ಶಹಾಪುರದ ಶಿವಾಜಿ ಉದ್ಯಾನದಿಂದ ಆರಂಭವಾಗುವ ನಡಿಗೆ ಪಾಟೀಲ ಗಲ್ಲಿಯ ಶನಿ ಮಂದಿರ, ಟಿಳಕ ಚೌಕ್, ರಾಮಲಿಂಗಖಿಂಡ ಗಲ್ಲಿ ಮಾರ್ಗವಾಗಿ ಸಾಗಿ, ಧರ್ಮವೀರ ಸಂಭಾಜಿ ವೃತ್ತ ತಲುಪಲಿದೆ' ಎಂದು ಇಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. 'ಪ್ರಧಾನಿ ನರೇಂದ್ರ ಮೋದಿ ನಾಯಕತ್ವದ ಬಗ್ಗೆ ದೇಶದಲ್ಲಿ ಜನರಲ್ಲಿ ವಿಶ್ವಾಸವಿದೆ. ಹಾಗಾಗಿ ಬಿಹಾರ ವಿಧಾನಸಭೆ ಚುನಾವಣೆಯಲ್ಲಿ ನಮ್ಮನ್ನು ಗೆಲ್ಲಿಸಿದ್ದಾರೆ. ಆದರೆ, ಸೋಲಿನಿಂದ ಕಂಗೆಟ್ಟ ಕಾಂಗ್ರೆಸ್‌ನವರು ಆಧಾರ ರಹಿತವಾಗಿ ನಮ್ಮ ಪಕ್ಷವನ್ನು ಟೀಕಿಸುತ್ತಿದ್ದಾರೆ' ಎಂದು ದೂರಿದರು.

## ಸಂಪುಟ ವಿಸ್ತರಣೆ ಸೇರಿದಂತೆ ಎಲ್ಲವನ್ನು ತೀರ್ಮಾನ ಮಾಡುವುದು ಹೈಕಮಾಂಡ್

• **ಉದಯವಾಹಿನಿ, ಬೆಂಗಳೂರು**

ರಾಜ್ಯದಲ್ಲಿ ಸಚಿವ ಸಂಪುಟ ವಿಸ್ತರಣೆ ಸೇರಿದಂತೆ ಎಲ್ಲವನ್ನು ತೀರ್ಮಾನ ಮಾಡುವುದು ಹೈಕಮಾಂಡ್. ಹೀಗಾಗಿ, ಅವರು ಯಾವ ತೀರ್ಮಾನ ಮಾಡಲಿದೆ ಎಂದು ಕಾದು ನೋಡೋಣ ಎಂದು ಬಮೂಲ್ ಅಧ್ಯಕ್ಷ ಡಿ.ಕೆ.ಸುರೇಶ್ ಹೇಳಿದ್ದಾರೆ. ರವಿವಾರ ಇಲ್ಲಿನ ಸದಾಶಿವನಗರ ನಿವಾಸದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಚಿವ ಸಂಪುಟ ವಿಸ್ತರಣೆ ಬಗ್ಗೆ ಮಾಧ್ಯಮಗಳಲ್ಲಿ ವರದಿ ನೋಡಿದ್ದೇನೆ. ಇದು ಮುಖ್ಯಮಂತ್ರಿ ಹಾಗೂ ಹೈಕಮಾಂಡ್ ನಾಯಕರಿಗೆ ಬಿಟ್ಟ ವಿಚಾರ ಆಗಿದ್ದು, ಕಾದು ನೋಡೋಣ ಎಂದರು.

ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಪ್ರಸ್ತಾಪವನ್ನು ಹೈಕಮಾಂಡ್ ಮುಂದೆ ಇಟ್ಟಿರುವ ಬಗ್ಗೆ ಪ್ರತಿಕ್ರಿಯಿಸಿ, ಹೈಕಮಾಂಡ್ ತೀರ್ಮಾನ, ಸಲಹೆಯನ್ನು ಶಿವಕುಮಾರ್ ಅವರು ಕೇಳುತ್ತಾರೆ. ಶಿವಕುಮಾರ್ ಅವರು ಮಾತ್ರವಲ್ಲ, ಎಲ್ಲರೂ ಕೇಳುತ್ತಾರೆ. ಅದರಲ್ಲಿ ಯಾವುದೇ ಅನುಮಾನ ಬೇಡ. ಅಧ್ಯಕ್ಷ ಸ್ಥಾನದಲ್ಲೇ ಮುಂದುವರಿಯಬೇಕು ಎಂಬ ಆಸೆ ಶಿವಕುಮಾರ್ ಅವರಿಗಿಲ್ಲ. ಪಕ್ಷ ಮುಂದುವರಿಯಲು ಹೇಳಿದೆ, ಎಷ್ಟು ದಿನ ಅವಕಾಶ ನೀಡುತ್ತಾರೋ ಅಷ್ಟು ದಿನ ಪಕ್ಷದ ಕೆಲಸ ಮಾಡಿಕೊಂಡು ಇರುತ್ತಾರೆ ಎಂದು ಹೇಳಿದರು.

---

**RSS ಪಥಸಂಚಲನ ಶಕ್ತಿ ಪ್ರದರ್ಶನ**

**ತೀವ್ರ ಸಂಚಲನ ಮೂಡಿಸಿದ್ದ ಚಿತ್ತಾಪುರ ಆರ್‌ಎಸ್‌ಎಸ್ ಪಥಸಂಚಲನ ಕೊನೆಗೂ ಶನಿವಾರ ಯಶಸ್ವಿಯಾಗಿ ನಡೆದಿದೆ. ಐಟಿ ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ತವರಿನಲ್ಲಿ ಭಗವಾಧ್ವಜ ಹಾರಿಸಿ ಆರ್‌ಎಸ್‌ಎಸ್ ಕಾರ್ಯಕರ್ತರು ಹೆಜ್ಜೆ ಹಾಕಿದರು. ಚಿತ್ತಾಪುರದ ಬಜಾಜ್ ಕಲ್ಯಾಣ ಮಂಟಪದಿಂದ ಆರಂಭವಾಗಿ ಅಂಬೇಡ್ಕರ್ ಸರ್ಕಲ್, ಬಸವ ಆಸ್ಪತ್ರೆ, ಎಚ್‌ಡಿಎಫ್‌ಸಿ ಬ್ಯಾಂಕ್ ರಸ್ತೆ, ಬಸವೇಶ್ವರ ಸರ್ಕಲ್ ಮೂಲಕ ಸಾಗಿ ಬಜಾಜ್ ಕಲ್ಯಾಣ ಮಂಟಪದಲ್ಲಿ ಮುಕ್ತಾಯವಾಯಿತು.**

**ಚಿತ್ತಾಪುರದಲ್ಲಿ ಪಥಸಂಚಲನ ಯಶಸ್ವಿ ಆರ್‌ಎಸ್‌ಎಸ್ ಕಾರ್ಯಕರ್ತರ ಹೆಜ್ಜೆ**




**ನಾನು ಆರ್‌ಎಸ್‌ಎಸ್ ಪಥಸಂಚಲನ ಎಂದಿಗೂ ವಿರೋಧಿಸಿಲ್ಲ**



**ಮೊಳಗಿದ ರಾಷ್ಟ್ರ ಘೋಷಣೆ**

# ಖರ್ಗೆ ಕೋಟೆ ಆರ್‌ಎಸ್‌ಎಸ್ ಬೇಟೆ

**ಸಚಿವ ಪ್ರಿಯಾಂಕ್ ತವರಲ್ಲಿ RSS ಪಥ ಸಂಚಲನ**

• **ಉದಯವಾಹಿನಿ, ಕಲಬುರಗಿ**

ಹೈಕೋರ್ಟ್ ಆದೇಶದಂತೆ 300 ಜನ ಗಣವೇಶಧಾರಿಗಳು ಹಾಗೂ 50 ಜನ ಬ್ಯಾಂಡ್ ವಾದಕರಿಗೆ ಮಾತ್ರ ಭಾಗಿಯಾಗಲು ಅವಕಾಶ ನೀಡಲಾಗಿತ್ತು.

ಆರ್‌ಎಸ್‌ಎಸ್ 100 ವರ್ಷದ ಸಂಭ್ರಮಾಚರಣೆಯ ಹಿನ್ನೆಲೆ ನಡೆದ ಪಥಸಂಚಲನದಲ್ಲಿ ಭಾಗಿಯಾದ ಗಣವೇಷಧಾರಿಗಳಿಗೆ ಮಹಿಳೆಯರು, ಮಕ್ಕಳು, ಸಾರ್ವಜನಿಕರು ಪುಷ್ಪಾರ್ಚನೆ ಮಾಡಿ ಭವ್ಯ ಸ್ವಾಗತ ನೀಡಿದರು. ರಸ್ತೆಯ ಎರಡೂ ಬದಿಯಲ್ಲಿ ನಿಂತು ಗಣವೇಷಧಾರಿಗಳ ಮೇಲೆ ಹೂವಿನ ಮಳೆ ಸುರಿಸಿದರು. ಮಧ್ಯಾಹ್ನ 3:45ಕ್ಕೆ ಆರಂಭವಾದ ಪಥ ಸಂಚಲನ 4:22ಕ್ಕೆ ಮುಕ್ತಾಯವಾಯಿತು. ಸರಿಸುಮಾರು 47 ನಿಮಿಷಗಳ ಕಾಲ ಒಟ್ಟು 1.25 ಕಿ.ಮೀ ಪಥಸಂಚಲನ ನಡೆಯಿತು.

1. **ಚಿತ್ತಾಪುರದಲ್ಲಿ ಶಾಂತಿಯುತವಾಗಿ ನಡೆದ RSS ಪಥಸಂಚಲನ**
2. **ಗಣವೇಶಧಾರಿಗಳಿಗೆ ಪುಷ್ಪ ಅರ್ಪಿಸಿ ಸ್ವಾಗತ ಕೋರಿದ ಜನರು**
3. **ಯಾವುದೇ ಅಹಿತಕರ ಘಟನೆ ನಡೆಯದಂತೆ ಪೊಲೀಸ್ ಬಿಗಿ ಭದ್ರತೆ**

**ಬಿಗಿ ಭದ್ರತೆ:** ಪಥಸಂಚಲನ ನಡೆಯುವ 1.25 ಕಿ.ಮೀ. ಸಾಗುವ ದಾರಿಯಲ್ಲಿ ಪೊಲೀಸರು ಬಿಗಿ ಭದ್ರತೆ ಕಲ್ಪಿಸಿದ್ದರು. ಕಲಬುರಗಿ ಎಸ್‌ಪಿ ಅಡ್ಡೂರು ಶ್ರೀನಿವಾಸಲು ನೇತೃತ್ವದಲ್ಲಿ ಪೊಲೀಸ್ ಇನ್‌ಸ್ಪೆಕ್ಟರ್, ಕೆಎಸ್‌ಆರ್‌ಪಿ ಡಿಎಆರ್ ತುಕಡಿ ಸೇರಿದಂತೆ 650ಜನ ಪೋಲಿಸರು 250ಜನ ಹೋಮ್ ಗಾರ್ಡ್ ನಿಯೋಜನೆ ಮಾಡಲಾಗಿತ್ತು. ಪಥಸಂಚಲನ ನಡೆಯುವ ಮಾರ್ಗದಲ್ಲಿ ಪುರಸಭೆಯಿಂದ 12 ಹಾಗೂ ಪೊಲೀಸ್ ಇಲಾಖೆಯಿಂದ 44 ಸಿಸಿ ಟಿವಿ ಕ್ಯಾಮರಾ ಅಳವಡಿಸಲಾಗಿತ್ತು. 5 ಡ್ರೋಣ್ ಕ್ಯಾಮರಾ ಮೂಲಕ ಜನರ ಚಲನವಲನದ ಮೇಲು ಖಾಕಿ ಪಡೆ ಹದ್ದಿನ ಕಣ್ಣಿಟ್ಟಿತ್ತು. ಒಟ್ಟು 200 ಧ್ವಜ ಹಾಗೂ ಬಂಟಿಂಗ್, ಫ್ಲೆಕ್ಸ್, ಕಟ್ಟಲು ಪುರಸಭೆ ಅನುಮತಿ ನೀಡಿತ್ತು. ಪಥಸಂಚಲನದಲ್ಲಿ ಭಾಗಿಯಾಗಲು ಬೇರೆ ಕಡೆಯಿಂದಲೂ ಕಾರ್ಯಕರ್ತರು ಆಗಮಿಸಿದ್ದರು. ಆರ್‌ಎಸ್‌ಎಸ್ ಮೊದಲೇ ಪಟ್ಟಿಯಲ್ಲಿ ನೀಡಿದ್ದ ವ್ಯಕ್ತಿಗಳಿಗೆ ಮಾತ್ರ ಪೊಲೀಸರು ಅನುಮತಿ ನೀಡಿದ್ದರು. ಚಿತ್ತಾಪುರ ಹೊರತು ಪಡಿಸಿ ಬೇರೆ ಕಡೆಯಿಂದ ಆಗಮಿಸಿದ ಕಾರ್ಯಕರ್ತರಿಗೆ ಪಥಸಂಚಲನದಲ್ಲಿ ಭಾಗಿಯಾಗಲು ಅವಕಾಶ ನೀಡಿರಲಿಲ್ಲ.

**ಜನರಿಂದ ಭವ್ಯ ಸ್ವಾಗತ:** ಪಥಸಂಚಲನಕ್ಕೆ ಜಿಲ್ಲಾಡಳಿತ ಷರತ್ತುಬದ್ದ ಅನುಮತಿ ನೀಡಿದ್ದು, ಸುಮಾರು 300ಕ್ಕೂ ಹೆಚ್ಚು ಗಣವೇಶಧಾರಿಗಳು ಹಾಗೂ 50 ಘೋಷ ವಾದಕರು ಭಾಗವಹಿಸಿದ್ದರು. ಪಟ್ಟಣದ ಬಜಾಜ್ ಕಲ್ಯಾಣ ಮಂಟಪದಿಂದ ಪ್ರಾರಂಭವಾದ ಆರ್ ಎಸ್ ಎಸ್ ಪಥ ಸಂಚಲನ ವೀಕ್ಷಿಸಲು ಚಿತ್ತಾಪುರದ ರಸ್ತೆಗಳ ಇಕ್ಕೆಲುಗಳಲ್ಲಿ ಜನತೆ ಕಿಕ್ಕಿರಿದು ತುಂಬಿದ್ದು ಕಂಡು ಬಂತು. ಮಾರ್ಗದುದ್ದಕ್ಕೂ ಜನರು ಗಣವೇಶಧಾರಿಗಳಿಗೆ ಪುಷ್ಪಗಳನ್ನು ಚೆಲ್ಲುವ ಮೂಲಕ ಸ್ವಾಗತ ಕೋರಿ, ಸಂಘದ ಶಿಸ್ತುಬದ್ಧ ಕಾರ್ಯಕ್ರಮಕ್ಕೆ ಬೆಂಬಲ ಸೂಚಿಸಿದರು. ಬಿಗಿ ಭದ್ರತಾ ಕ್ರಮಗಳು ಮತ್ತು ಹೈಕೋರ್ಟ್‌ನ ಷರತ್ತುಗಳ ನಡುವೆಯೂ ಕಾರ್ಯಕ್ರಮ ಯಶಸ್ವಿಯಾಗಿ ಮತ್ತು ಶಾಂತಿಯುತವಾಗಿ ನಡೆದಿದ್ದು, ಜಿಲ್ಲಾಡಳಿತದ ಕಾರ್ಯವೈಖರಿಗೆ ಮೆಚ್ಚುಗೆ ವ್ಯಕ್ತವಾಗಿದೆ.

ತೀವ್ರ ವಿವಾದ, ರಾಷ್ಟ್ರ ಮಟ್ಟದಲ್ಲಿ ಚರ್ಚೆಗೀಡಾದ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಪಥಸಂಚಲನವೂ ಚಿತ್ತಾಪುರದಲ್ಲಿ ಸಹಸ್ರಾರು ಸಂಘ ಹಿತೈಷಿಗಳು, ನೂರಾರು ಗಣವೇಷಧಾರಿಗಳ ನೇತೃತ್ವದಲ್ಲಿ ಅದ್ದೂರಿಯಾಗಿ, ಸಂಭ್ರಮದಿಂದ ನೆರವೇರಿತು. ಸಚಿವ ಪ್ರಿಯಾಂಕ್ ಖರ್ಗೆ ಅವರ ಭದ್ರಕೋಟೆ ಚಿತ್ತಾಪುರ ಪಟ್ಟಣದಲ್ಲಿ ಆರ್‌ಎಸ್‌ಎಸ್ ತನ್ನ ಸಂಘ ಶಕ್ತಿ ಪ್ರದರ್ಶಿಸಿದ್ದು, ಯಾವುದೇ ಅಹಿತಕರ ಘಟನೆ ನಡೆಯದಂತೆ ಪೊಲೀಸ್ ಸರ್ಪಗಾವಲು ಮಧ್ಯೆ ಸಂಚಲನ ಯಶಸ್ವಿಯಾಗಿ ನೆರವೇರಿತು. ಪಥಸಂಚಲನಕ್ಕೆ ಜಿಲ್ಲಾಡಳಿತ ಷರತ್ತುಬದ್ದ ಅನುಮತಿ ನೀಡಿದ್ದು, ಸುಮಾರು 300ಕ್ಕೂ ಹೆಚ್ಚು ಗಣವೇಷಧಾರಿಗಳು ಹಾಗೂ 50 ಘೋಷವಾದಕರು ಭಾಗವಹಿಸಿದ್ದರು. ಪಥಸಂಚಲನ ಗಣವೇಷಧಾರಿಗಳಿಂದ ಆರ್‌ಎಸ್‌ಎಸ್ ಗೀತೆ ಮೊಳಗಿತು.



**ಸಂತಸ ವ್ಯಕ್ತಪಡಿಸಿದ ಆರ್‌ಎಸ್‌ಎಸ್ ಜಿಲ್ಲಾ ಪ್ರಮುಖ ಅಶೋಕ ಪಾಟೀಲ್**

**ಅದೇ ಬಜಾಜ್ ಕಲ್ಯಾಣ ಮಂಟಪದಲ್ಲಿ ಸುಮಾರು 45 ನಿಮಿಷಗಳ ವೇದಿಕೆ ಕಾರ್ಯಕ್ರಮ ಜರಗಿತು. ಈ ವೇಳೆ ಗಣವೇಷಧಾರಿಗಳನ್ನ ಉದ್ದೇಶಿಸಿ ಆರ್‌ಎಸ್‌ಎಸ್ ಕರ್ನಾಟಕ ಪ್ರಾಂತ ಪ್ರಮುಖ ಕೃಷ್ಣ ಜೀ ಜೋಶಿ ಮಾತನಾಡಿದರು. ಅಲ್ಲದೇ ಕೊನೆಗೂ ಸಾಕಷ್ಟು ಅಡ್ಡಿ ಆತಂಕಗಳ ಮಧ್ಯೆ ಅದ್ದೂರಿ ಹಾಗೂ ಶಾಂತಿಯುತವಾಗಿ ಪಥಸಂಚಲನ ನಡೆದಿದ್ದಕ್ಕೆ ಕೋರ್ಟ್‌ಗೆ ಅರ್ಜಿ ಹಾಕಿದ್ದ ಆರ್‌ಎಸ್‌ಎಸ್ ಜಿಲ್ಲಾ ಪ್ರಮುಖ ಅಶೋಕ ಪಾಟೀಲ್ ಮಾತನಾಡಿ ಖುಷಿ ವ್ಯಕ್ತಪಡಿಸಿದರು. ಇನ್ನು ಇದಕ್ಕೂ ಮುನ್ನ ಚಿತ್ತಾಪುರದಲ್ಲಿ ಆರ್‌ಎಸ್‌ಎಸ್ ಪಥಸಂಚಲನ ನಡೆಸಲು ಜಿಲ್ಲಾಡಳಿತ 10 ಷರತ್ತುಗಳನ್ನ ಹಾಕಿ ಅನುಮತಿ ನೀಡಿತ್ತು. ಪಥಸಂಚಲನದಲ್ಲಿ ಕೇವಲ ಸ್ಥಳೀಯರು ಮಾತ್ರ ಪಾಲ್ಗೊಳ್ಳಬೇಕು. 300 ಜನ ಗಣವೇಷಧಾರಿಗಳು ಮಾತ್ರ ಭಾಗಿಯಾಗಬೇಕು ಎಂಬ ನಿಯಮದ ಜೊತೆಗೆ ಮಧ್ಯಾಹ್ನ 3:30 ರಿಂದ 5:45 ರೊಳಗೆ ಮುಕ್ತಾಯ ಮಾಡಬೇಕು ಎಂಬ ನಿಯಮ ಹಾಕಿತ್ತು.**

**ಪೊಲೀಸರ ಸರ್ಪಗಾವಲಿನಲ್ಲಿ ಗಣವೇಷಧಾರಿಗಳು ಹೆಜ್ಜೆ**

ಇಡೀ ರಾಜ್ಯ ಗಮನ ಸೆಳೆದಿದ್ದ ಚಿತ್ತಾಪುರ ಆರ್‌ಎಸ್‌ಎಸ್ ಪಥಸಂಚಲನಕ್ಕೆ ಅದ್ದೂರಿ ಚಾಲನೆ ಸಿಕ್ಕಿತ್ತು. ಹಲವು ವಿರೋಧದ ನಡುವೆ ಕೋರ್ಟ್ ಷರತ್ತುಬದ್ಧ ಅನುಮತಿ ನೀಡಿದ ಬಳಿಕ ಆರ್‌ಎಸ್‌ಎಸ್ ಪಥಸಂಚಲನ ತಯಾರಿ ಮಾಡಿಕೊಳ್ಳಲಾಗಿತ್ತು. ಒಟ್ಟು 350 ಗಣವೇಷಧಾರಿಗಳು ಮತ್ತು 50 ಜನ ಬ್ಯಾಂಡ್ ವಾದಕರು ಪಥಸಂಚಲನಲದಲ್ಲಿ ಭಾಗಿ ಆಗಿದ್ದರು. ಪಥಸಂಚಲನದ ವೇಳೆ ಯಾವುದೇ ಅಹಿತಕರ ಘಟನೆ ನಡೆಯದಂತೆ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಿಕೊಳ್ಳಲಾಗಿತ್ತು. ಸುಮಾರು ಸಾವಿರಕ್ಕೂ ಹೆಚ್ಚು ಪೊಲೀಸರನ್ನ ಭದ್ರತೆಗೆ ನೀಯೋಜನೆ ಆಗಿತ್ತು. ಗಣವೇಷಧಾರಿಗಳು ಚಿತ್ತಾಪುರದ ಬಸ್ ನಿಲ್ದಾಣ, ಅಂಬೇಡ್ಕರ್ ಸರ್ಕಲ್, ಕೆನರಾ ಬ್ಯಾಂಕ್ ವೃತ್ತ, ಮಾರ್ಗವಾಗಿ ಪುನಃ ಬಜಾಜ್ ಕಲ್ಯಾಣಕ್ಕೆ ಮರಳಿದರು.

---


## ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ನಾನೇಕೆ ರಾಜೀನಾಮೆ ನೀಡಲಿ

### • ನನ್ನ ಮಾನಸಿಕ, ದೈಹಿಕ ಆರೋಗ್ಯ ಸರಿಯಾಗಿದೆ: ಡಿಕೆ ಶಿವಕುಮಾರ್

• **ಉದಯವಾಹಿನಿ, ಬೆಂಗಳೂರು**

ನಾನು ಪಕ್ಷದ ಶಿಸ್ತಿನ ಸಿಪಾಯಿ. ಯಾವತ್ತೂ ಕಾಂಗ್ರೆಸ್ ಪಕ್ಷಕ್ಕೆ ಬ್ಲಾಕ್ ಮೇಲ್ ಮಾಡುವವನಲ್ಲ. ನಾನು ಹಗಲು ರಾತ್ರಿ ದುಡಿದು ಪಕ್ಷ ಕಟ್ಟಿದ್ದೇನೆ. ಮುಂದೆಯೂ ಕಟ್ಟುತ್ತೇನೆ ಎಂದು ಡಿಸಿಎಂ ಡಿಕೆ ಶಿವಕುಮಾರ್ ಅವರು ಹೇಳಿದ್ದಾರೆ.

ದೆಹಲಿಯಲ್ಲಿ ಮಾಧ್ಯಮಗಳ ಪ್ರಶ್ನೆಗಳಿಗೆ ಶಿವಕುಮಾರ್ ಅವರು ಭಾನುವಾರ ಪ್ರತಿಕ್ರಿಯೆ ನೀಡಿದರು. ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ರಾಜಿನಾಮೆ ನೀಡಿದ್ದೀರಿ ಎಂಬ ಸುದ್ದಿ ಹರಿದಾಡುತ್ತಿರುವ ಬಗ್ಗೆ ಕೇಳಿದಾಗ, ನನ್ನ ಮಾನಸಿಕ, ದೈಹಿಕ ಹಾಗೂ ರಾಜಕೀಯ ಆರೋಗ್ಯ ಸರಿಯಾಗಿದೆ. ನಾನು ಖರ್ಗೆ ಸಾಹೇಬರನ್ನು ಭೇಟಿ ಮಾಡಲು ಹೋಗುತ್ತಿದ್ದೇನೆ. ಡಿಸೆಂಬರ್ ತಿಂಗಳ ಒಳಗಾಗಿ ನೂರು ಕಾಂಗ್ರೆಸ್ ಕಚೇರಿಗಳಿಗೆ ಶಂಕುಸ್ಥಾಪನೆ ಮಾಡಲೇಬೇಕಾಗಿದೆ. ಗಾಂಧಿ ಭಾರತ ಎಂಬ ಪುಸ್ತಕ ರಚಿಸಿದ್ದೇನೆ. ಇದರ ಬಿಡುಗಡೆಗೆ ದಿನಾಂಕ ನಿಗದಿ ಮಾಡಬೇಕಾಗಿದೆ. ಸದ್ಯದಲ್ಲೇ ಸಂಸತ್ ಅಧಿವೇಶನ ಆರಂಭವಾಗಲಿದೆ. ಕಾಂಗ್ರೆಸ್ ಸಂಸ್ಥಾಪನಾ ದಿನ ಆಚರಣೆ ಮಾಡಬೇಕು. ಇದೆಲ್ಲವನ್ನು ಯಾರು ಮಾಡಬೇಕು ನಾನೇ ಮಾಡಬೇಕು. ನಾನೇಕೆ ರಾಜಿನಾಮೆ ನೀಡಲಿ. ಈಗ ಅಂತಹ ಸಂದರ್ಭವಿಲ್ಲ ಎಂದು ತಿಳಿಸಿದರು.



**ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆಯವರಿಂದ ಶಂಕು ಸ್ಥಾಪನೆ:** ಸಚಿವ ಸಂಪುಟ ಪುನಾರಚನೆ ಬಗ್ಗೆ ಚರ್ಚೆಯಾಗುತ್ತಿದೆ, ಖರ್ಗೆ ಅವರ ಭೇಟಿ ವೇಳೆ ಈ ಬಗ್ಗೆ ಚರ್ಚೆ ಮಾಡುತ್ತೀರಾ ಎಂದು ಕೇಳಿದಾಗ, ಅದೆಲ್ಲಾ ಮುಖ್ಯಮಂತ್ರಿಗಳಿಗೆ ಬಿಟ್ಟ ವಿಚಾರ. ಅವರು ಹೈಕಮಾಂಡ್ ಬಳಿ ಚರ್ಚೆ ಮಾಡುತ್ತಾರೆ. ನನ್ನನ್ನು ಕರೆದರೆ ನಾನು ಹೋಗುತ್ತೇನೆ. ನಾನು ಕೇವಲ ಪಕ್ಷದ ಕಚೇರಿಗಳ ಶಂಕುಸ್ಥಾಪನೆಗೆ ದಿನಾಂಕ ನಿಗದಿ ಮಾಡಲು ಹೋಗುತ್ತಿರುವೆ. ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಅವರು ಒಟ್ಟಾಗಿ ಶಂಕುಸ್ಥಾಪನೆ ಮಾಡಬೇಕು ಎಂಬುದು ನನ್ನ ಆಸೆ. ಡಿ. 1 ರಿಂದ ಸಂಸತ್ ಅಧಿವೇಶನ ಆರಂಭವಾಗಲಿದ್ದು, ಅಷ್ಟರೊಳಗೆ, ಯಾವುದಾದರೂ ವಾರಾಂತ್ಯದಲ್ಲಿ ಬಂದು ಹೋಗಿ ಎಂದು ಮನವಿ ಮಾಡುತ್ತೇನೆ ಎಂದು ತಿಳಿಸಿದರು.

**ಪಕ್ಷ ಅಧಿಕಾರಕ್ಕೆ ಬರುವಂತೆ ದುಡಿಯುವವನು ನಾನು**

**ಕಾಂಗ್ರೆಸ್ ಪಕ್ಷ ಎಲ್ಲಿಯವರೆಗೂ ಈ ಸ್ಥಾನದಲ್ಲಿ ಕೆಲಸ ಮಾಡಲು ಹೇಳುತ್ತಾರೋ ಅಲ್ಲಿಯವರೆಗೆ ನಾನು ಪಕ್ಷದ ಶಿಸ್ತಿನ ಸಿಪಾಯಿಯಂತೆ ಕೆಲಸ ಮಾಡಿಕೊಂಡು ಹೋಗುತ್ತೇನೆ. ಮುಂದೆಯೂ ಪಕ್ಷ ಅಧಿಕಾರಕ್ಕೆ ಬರುವಂತೆ ದುಡಿಯುವವನು ನಾನು ಎಂದು ಸ್ಪಷ್ಟಪಡಿಸಿದರು.**

**ಕೆಪಿಸಿಸಿ ನೂರು ಕಚೇರಿ ನಿರ್ಮಾಣ ಕಾರ್ಯ:** ಕಾಂಗ್ರೆಸ್ ಕಚೇರಿ ನಿರ್ಮಾಣದ ಕಟ್ಟಡ ನಕ್ಷೆ ಅನುಮೋದನೆಗೆ ನಾನು 2.30 ಕೋಟಿ ಹಣವನ್ನು ಪಾವತಿಸುತ್ತಿದ್ದೇನೆ. ರಾಮಲಿಂಗಾರೆಡ್ಡಿ ಅವರ ಮುಂದಾಳತ್ವದಲ್ಲಿ ಒಂದು ಕಚೇರಿ ನಿರ್ಮಿಸಲಾಗುತ್ತಿದೆ. 75 -8 0 ಕಡೆ ಕಚೇರಿ ನಿರ್ಮಾಣಕ್ಕೆ ಜಾಗ ಕೂಡ ಸಿದ್ಧವಾಗಿವೆ. ನೂರು ಕಚೇರಿ ನಿರ್ಮಾಣ ಕಾರ್ಯ ಮಾಡುತ್ತೇವೆ ಎಂದು ತಿಳಿಸಿದರು.

---

## ಬೆಂಗಳೂರು, ಮೈಸೂರು ಬಳಿಕ ಮಂಗಳೂರಲ್ಲೂ ಡಾಗ್ ಡೆಡ್ಲಿ ಅಟ್ಯಾಕ್

### ▸ ಕರ್ನಾಟಕ ರಾಜ್ಯವೊಂದರಲ್ಲಿ 2.86 ಲಕ್ಷಕ್ಕೂ ಅಧಿಕ ಮಂದಿ ಮೇಲೆ ದಾಳಿ, 26 ಮಂದಿ ಬಲಿ!

• **ಉದಯವಾಹಿನಿ, ಬೆಂಗಳೂರು**




ಬೆಂಗಳೂರು, ಮೈಸೂರಿನಲ್ಲಿ ಬೀದಿ ನಾಯಿಗಳ ದಾಳಿ ಸುದ್ದಿ ಕರಾವಳಿ ಜಿಲ್ಲೆಗೂ ಲಗ್ಗೆಯಿಟ್ಟಿದೆ. ಕುಂಪಲದಲ್ಲಿ ಶನಿವಾರ ಮುಂಜಾನೆ ಬೀದಿ ನಾಯಿಯೊಂದು ವ್ಯಕ್ತಿಯೊಬ್ಬನ ಮೇಲೆ ದಾಳಿ ನಡೆಸಿದ್ದು, ಗಂಭೀರ ಗಾಯಗೊಂಡ ವ್ಯಕ್ತಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ.



ರಾಜ್ಯದಲ್ಲಿ ಈ ವರ್ಷ 2,86,649 ಜನರಿಗೆ ನಾಯಿ ಕಚ್ಚಿರುವುದಾಗಿ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಂಕಿ ಅಂಶ ಬಿಡುಗಡೆ ಮಾಡಿದೆ. ಬೀದಿ ನಾಯಿಗಳ ದಾಳಿ ಜಿಲ್ಲೆಯಾದ್ಯಂತ ಹೆಚ್ಚಾಗಿದ್ದು, ಒಂಟಿಯಾಗಿ ಹೋಗುವ ಮಕ್ಕಳು, ಹಿರಿಯರ ಮೇಲೆ ಏಕಾಏಕಿ ದಾಳಿ ನಡೆಸುತ್ತಿವೆ. ನಾಯಿ ದಾಳಿಗೆ ಒಳಗಾದ ಕೆಲವರು ರೇಬಿಸ್‌ಗೆ ತುತ್ತಾಗಿ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಹೀಗಾಗಿ ಬೀದಿ ನಾಯಿಗಳನ್ನು ಹಿಡಿದು ಅವುಗಳನ್ನು ಆಶ್ರಯ ಕೇಂದ್ರಕ್ಕೆ ಸೇರಿಸಬೇಕೆಂದು ಸುಪ್ರೀಂಕೋರ್ಟ್ ಆದೇಶಿಸಿದೆ. ರಾಜ್ಯದಲ್ಲಿ 2025ರ ಜನವರಿಯಿಂದ ಅಕ್ಟೋಬರ್ ವರೆಗೆ ಸುಮಾರು 26 ಮಂದಿ ಬೀದಿ ನಾಯಿ ದಾಳಿಗೆ ತುತ್ತಾಗಿ ಜೀವ ತೆತ್ತಿದ್ದಾರೆ.

**ಆರೋಗ್ಯ ಇಲಾಖೆಯಿಂದ ಆತಂಕದ ಮಾಹಿತಿ**

**ದೇಶದಲ್ಲಿ ನಾಯಿಗಳ ಕಡಿತ ಸಂಖ್ಯೆ**

2018ರಲ್ಲಿ ದೇಶಾದ್ಯಂತ 75.7 ಲಕ್ಷ ನಾಯಿ ಕಡಿತ, 2020ರಲ್ಲಿ47.6 ಲಕ್ಷ ಪ್ರಕರಣ, 2021ರಲ್ಲಿ 32.4 ಲಕ್ಷ ಪ್ರಕರಣಗಳು ವರದಿಯಾಗಿವೆ. 2023ರಲ್ಲಿ 30.5 ಲಕ್ಷ, 2024ರಲ್ಲಿ 37 ಲಕ್ಷಕ್ಕೂ ಹೆಚ್ಚು ನಾಯಿ ಕಡಿತದ ಪ್ರಕರಣಗಳು ವರದಿಯಾಗಿವೆ.

**ರಾಜ್ಯದಲ್ಲಿ ನಡೆದ ಪ್ರಮುಖ ದಾಳಿ**

- **2025ರ ಅ.21ರಂದು ಬೆಂಗಳೂರಿನಲ್ಲಿ ಜಾಗಿಂಗ್ ತೆರಳಿದ್ದ ವಿದೇಶಿ ಉದ್ಯಮಿ ಒಲಿವರ್ ಜಾನ್ಸ್ ಎಂಬವರ ಮೇಲೆ ಬೀದಿ ನಾಯಿ ದಾಳಿ ಮಾಡಿತ್ತು.**
- **2025ರ ಅ.5ರಂದು ಹಾಸನದಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ ತೆರಳಿದ್ದ ಶಿಕ್ಷಕಿಯೊಬ್ಬರ ಮೇಲೆ ನಾಯಿ ದಾಳಿ ನಡೆಸಿರುವುದು ರಾಜ್ಯಾದ್ಯಂತ ಭಾರಿ ಸುದ್ದಿಯಾಗಿತ್ತು.**
- **2025ರ ಅ.6ರಂದು ಬೆಳಗ್ಗೆ ಬಜಪೆ ಸೌಹಾರ್ದ ನಗರ ಎಂಬಲ್ಲಿ ಅಹಿಲ್ ಎಂಬ ಬಾಲಕ ಮದ್ರಸದಿಂದ ಮನೆಗೆ ತೆರಳುತ್ತಿದ್ದ ವೇಳೆ ನಾಯಿ ದಾಳಿ ಮಾಡಿತ್ತು.**
- **ಬೆಂಗಳೂರಿನ ಕೆಂಗೇರಿ ವಿವಿ ಆವರಣದಲ್ಲಿ ಅ.10ರಂದು ಇಬ್ಬರು ಕಾಲೇಜು ವಿದ್ಯಾರ್ಥಿಗಳ ಮೇಲೆ ನಾಯಿ ದಾಳಿ ಮಾಡಿತ್ತು.**

**ರಾತ್ರಿ ಪಾಳಿಯವರಿಗೆ ಭಯ:** ಬೆಂಗಳೂರು, ಮೈಸೂರು, ಹುಬ್ಬಳ್ಳಿ, ಮಂಗಳೂರು, ಶಿವಮೊಗ್ಗ ಸೇರಿದಂತೆ ಮುಂದುವರಿದ ನಗರಗಳಲ್ಲಿ ರಾತ್ರಿ ಪಾಳಿಗೆ ಉದ್ಯೋಗಕ್ಕೆ ಹೋಗುವವರ ಸಂಖ್ಯೆ ಹೆಚ್ಚಿದೆ. ಕೆಲವರು ರಾತ್ರಿ ಪಾಳಿ ಕೆಲಸ ಮುಗಿಸಿ ವಾಹನದಿಂದ ಇಳಿದು ನಡೆದುಕೊಂಡು ಹೋಗುವಾಗ ನಾಯಿಗಳು ಗುಂಪಾಗಿ ಅಡ್ಡಗಟ್ಟುವುದು, ವಾಹನಗಳನ್ನು ಬೆನ್ನಟ್ಟುವುದು, ದಾಳಿ ಮಾಡುವುದು ಸಾಮಾನ್ಯವಾಗಿದೆ.

**ಸಂತಾನ ಶಕ್ತಿ ಹರಣ ಚಿಕಿತ್ಸೆಗೆ ಹಣವಿದೆ:** ರಾಜ್ಯದ ಪ್ರತಿ ಮಹಾನಗರ ಪಾಲಿಕೆಗಳು ಶ್ವಾನಗಳ ಸಂತಾನ ಶಕ್ತಿ ಹರಣ ಶಸ್ತ್ರಚಿಕಿತ್ಸೆಗೆ 25ರಿಂದ 50 ಲಕ್ಷ ರೂ. ಮೀಸಲಿಡುತ್ತದೆ. ಈ ಹಣವನ್ನು ಸರಿಯಾಗಿ ಬಳಕೆ ಮಾಡದ ಕಾರಣ ಬೀದಿ ನಾಯಿಗಳ ಸಂತತಿ ಒಂದೇ ಸವನೆ ಹೆಚ್ಚಾಗುತ್ತಿದೆ. ಮಂಗಳೂರು ಮಹಾನಗರ ಪಾಲಿಕೆಯ ಸೆಂಟ್ರಲ್ ಮಾರ್ಕೆಟ್, ಕರಂಗಲ್ಪಾಡಿ, ಉರ್ವ, ಮಲ್ಲಿಕಟ್ಟೆ, ಕಾವೂರು, ಬಿಕರ್ನಕಟ್ಟೆ ಕೈಕಂಬ, ಸೂಟರ್‌ಪೇಟೆ, ಕಂಕನಾಡಿ ಮಾರ್ಕೆಟ್ ಬಳಿ 50ಕ್ಕೂ ಅಧಿಕ ಬೀದಿ ನಾಯಿಗಳಿವೆ. ಮಧ್ಯರಾತ್ರಿಯ ಬಳಿಕ ಈ ವ್ಯಾಪ್ತಿಯಲ್ಲಿ ಸಂಚರಿಸುವುದೇ ಅಪಾಯವಾಗಿದೆ.

## ಸಂಪುಟ ಪುನರ್‌ರಚನೆಯಾದರೆ ನಾಯಕತ್ವ ಬದಲಾವಣೆ ಇಲ್ಲ

• **ಉದಯವಾಹಿನಿ, ಬೆಂಗಳೂರು**



ಸಂಪುಟ ಪುನರ್ರಚನೆಗೆ ಹೈಕಮಾಂಡ್ ಒಪ್ಪಿಗೆ ನೀಡಿದರೆ ನಾಯಕತ್ವ ಬದಲಾವಣೆ ಆಗುವುದಿಲ್ಲ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು. 'ಮುಖ್ಯಮಂತ್ರಿ ಮತ್ತು ಹೈಕಮಾಂಡ್‌ಗೆ ಎಲ್ಲಾ ವಿಚಾರ ಗೊತ್ತಿದೆ. ಸಂಪುಟ ಪುನರ್‌ರಚನೆಗೆ ಅನುಮತಿ ಸಿಕ್ಕಿದೆಯೆಂದು ಮಾಧ್ಯಮಗಳಲ್ಲಿ ನೋಡಿದ್ದೇನೆ. ಸಂಪುಟ ಪುನರ್‌ರಚನೆಯಾದರೆ ಒಳ್ಳೆಯದೇ ಎಂದರು. ಸಚಿವರಾಗಬೇಕೆಂಬ ಅಪೇಕ್ಷೆ ಹಲವು ಶಾಸಕರಿಗಿದೆ. ಸಂಪುಟ ಪುನರ್‌ರಚನೆಗೆ ಅನುಮತಿ ಕೊಟ್ಟಿದ್ದರೆ, ಮುಖ್ಯಮಂತ್ರಿ ಬದಲಾವಣೆ ವಿಚಾರವನ್ನು ನೀವೇ (ಮಾಧ್ಯಮಗಳು) ಊಹೆ ಮಾಡಿಕೊಳ್ಳಿ' ಎಂದರು. ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಬಗ್ಗೆ ಸಮಯ, ಸಂದರ್ಭ ನೋಡಿ ಹೈಕಮಾಂಡ್‌ನವರು ತೀರ್ಮಾನಿಸುತ್ತಾರೆ. ನಾನು ದೆಹಲಿಗೆ ಸದ್ಯಕ್ಕೆ ಹೋಗಿಲ್ಲ. ಹೋಗುವುದೂ ಇಲ್ಲ ಎಂದು ತಿಳಿಸಿದರು. ಕಬ್ಬು ಇಳುವರಿ ಮೇಲಿನ ದರದ ಬಗ್ಗೆ ಪ್ರಧಾನಿ ಜೊತೆ ಚರ್ಚೆಗೆ ಮುಖ್ಯಮಂತ್ರಿ ಸಮಯ ಕೇಳಿದ್ದರು. ಪ್ರಧಾನಿ ಸಮಯ ಕೊಟ್ಟಿದ್ದಾರೆ. ಹೀಗಾಗಿ, ಅವರು ದೆಹಲಿಗೆ ಸೋಮವಾರ ತೆರಳಲಿದ್ದಾರೆ. ಕಬ್ಬು ಬೆಳೆಗಾರರ ವಿಷಯ. ಮೇಕೆದಾಟು ಯೋಜನೆಗೆ ಸುಪ್ರೀಂ ಕೋರ್ಟ್ ಒಪ್ಪಿಗೆ ನೀಡಿರುವ ಬಗ್ಗೆ ಪ್ರಧಾನಿ ಜೊತೆ ಮುಖ್ಯಮಂತ್ರಿ ಚರ್ಚೆ ಮಾಡಲಿದ್ದಾರೆ ಎಂದರು.

---

**ಈ ದಿನದ ದರ** ಪೆಟ್ರೋಲ್: 103.50 ₹/L ಡೀಸೆಲ್ : 90.03 ₹/L ಬಂಗಾರ: ₹12,508/Gram24ct ₹11,465/Gram22ct ಬೆಳ್ಳಿ: ₹169.00/Gram

# ಬೆಂಗಳೂರಿನಲ್ಲಿ ನಿರ್ಮಾಣವಾಗಲಿದೆ ಅತಿ ಉದ್ದದ ಫ್ಲೈಓವರ್

• **ಉದಯವಾಹಿನಿ, ಬೆಂಗಳೂರು**



ಉದಯವಾಹಿನಿ ಚಿತ್ರ

ಟ್ರಾಫಿಕ್ ದಟ್ಟಣೆಯಿಂದ ಸಾಕಾಗಿರುವ ಬೆಂಗಳೂರು ಜನರಿಗೆ ಗುಡ್‌ನ್ಯೂಸ್. ನಮ್ಮ ಮೆಟ್ರೋ 3 ನೇ ಹಂತದಲ್ಲಿ ನಗರದ ಅತಿ ಉದ್ದದ ಡಬಲ್ ಡೆಕ್ಕರ್ ಫ್ಲೈಓವರ್ ನಿರ್ಮಾಣವಾಗುತ್ತಿದೆ. ಜೆಪಿ ನಗರ 4 ನೇ ಹಂತದ ಡೆಲ್ಮಿಯಾ ವೃತ್ತದಿಂದ ಹೆಬ್ಬಾಳದವರೆಗೆ 28.4 ಕಿ.ಮೀ ವಿಸ್ತರಿಸಲಿದೆ. ಡಬಲ್ ಡೆಕ್ಕರ್ ಫ್ಲೈಓವರ್ ಅಂದರೆ, ಮೇಲ್ಭಾಗದಲ್ಲಿ ಮೆಟ್ರೋ ಮಾರ್ಗ, ಕೆಳಭಾಗದಲ್ಲಿ ವಾಹನ ಸಂಚಾರಕ್ಕೆ ಮೇಲ್ಸೇತುವೆ ಇರಲಿದೆ. ಇದರಿಂದ ಔಟರ್ ರಿಂಗ್ ರಸ್ತೆಯಲ್ಲಿ ಉಂಟಾಗುತ್ತಿದ್ದ ಸಂಚಾರ ದಟ್ಟಣೆಯು ಸಾಕಷ್ಟು ತಗ್ಗಲಿದೆ. ಮಾರ್ಗ ಮಧ್ಯೆ ಪ್ರಮುಖ ಪ್ರದೇಶಗಳಿಗೆ ಪ್ರವೇಶ, ನಿರ್ಗಮನಕ್ಕೆ ಲೂಪ್, ರ್‍ಯಾಂಪ್‌ಗಳನ್ನು ನೀಡಲಾಗುತ್ತಿದೆ. ಈ ಯೋಜನೆಯು ಬೆಂಗಳೂರಿನ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಿ, ನಗರದ ಅಭಿವೃದ್ಧಿಗೆ ಮತ್ತಷ್ಟು ಉತ್ತೇಜನ ನೀಡಲಿದೆ. ನಮ್ಮ ಮೆಟ್ರೋ 3ನೇ ಹಂತದ ಯೋಜನೆಯಲ್ಲಿ 2 ಮಾರ್ಗ ನಿರ್ಮಾಣ ಮಾಡಲಾಗುತ್ತಿದೆ. 1ನೇ ಮಾರ್ಗ ಜೆಪಿ ನಗರ 4ನೇ ಹಂತದಿಂದ ಹೆಬ್ಬಾಳದ ಕೆಂಪಾಪುರದವರೆಗೂ, 2ನೇ ಮಾರ್ಗ ಹೊಸಹಳ್ಳಿ ಮೆಟ್ರೋ ನಿಲ್ದಾಣದಿಂದ ಕಡಬಗೆರೆವರೆಗೂ ಇರಲಿದೆ. ಈ 2 ಮಾರ್ಗದಲ್ಲಿಯೂ ಒಟ್ಟು 37 ಕಿ.ಮೀ ಡಬಲ್ ಡೆಕ್ಕರ್ ಫ್ಲೈ ಓವರ್ ನಿರ್ಮಾಣ ಮಾಡಲಾಗುತ್ತಿದೆ. ಈ 2 ಮಾರ್ಗಗಳಿಗೆ ಹೊಂದಿಕೊಂಡಂತೆ ಮಾಗಡಿ ರಸ್ತೆ ಮಾರ್ಗದಲ್ಲಿ ಕೆ.ಎಚ್.ಬಿ. ಕಾಲನಿ ಮತ್ತು ಕಡಬಗೆರೆ ನಡುವೆ 8.635 ಕಿ.ಮೀ, ಡೆಲ್ಮಿಯಾ ವೃತ್ತದಿಂದ ಹೆಬ್ಬಾಳದವರೆಗೆ 28.4 ಕಿ.ಮೀ ಡಬಲ್ ಡೆಕ್ಕರ್ ಫ್ಲೈಓವರ್‌ಗೆ ಯೋಜನೆ ರೂಪಿಸಲಾಗಿದೆ. ಹಲವು ಪ್ರವೇಶ, ನಿರ್ಗಮನಕ್ಕೆ ಐದು ರ್‍ಯಾಂಪ್‌ಗಳು ಮತ್ತು 9 ಲೂಪ್‌ಗಳು ಇರಲಿವೆ. ಇವುಗಳನ್ನು ವಿಶೇಷವಾಗಿ ಔಟರ್ ರಿಂಗ್ ರೋಡ್ ಮತ್ತು ಮಾಗಡಿ ರಸ್ತೆಗಳ ಸ್ಥಳೀಯ ಸಂಚಾರ ಮಾದರಿಗಳಿಗೆ ಅನುಗುಣವಾಗಿ ವಿನ್ಯಾಸಗೊಳಿಸಲಾಗಿದೆ ಎಂದು ಡೆಕ್ಕನ್ ವರದಿ ಮಾಡಿದೆ.

**ಈಗಿರುವ ಮೇಲ್ಸೇತುವೆಗಳ ಕತೆ ಏನು?:** ಡೆಲ್ಮಿಯಾ ವೃತ್ತದಿಂದ ಹೆಬ್ಬಾಳದವರೆಗಿನ ಫ್ಲೈಓವರ್‌ನಲ್ಲಿ ಲೂಪ್‌ಗಳು ಸುಮಯ್ಯನಹಳ್ಳಿ ಜಂಕ್ಷನ್ ಮತ್ತು ನೈಸ್ ರಸ್ತೆಯಲ್ಲಿ ನಿರ್ಮಾಣವಾಗಲಿವೆ. ಡೆಲ್ಮಿಯಾ ವೃತ್ತವನ್ನು ಹೊರತುಪಡಿಸಿ, ಹೊಸ ಡಬಲ್ ಡೆಕ್ಕರ್ ಫ್ಲೈಓವರ್ ಹೊಸಕೆರೆಹಳ್ಳಿ, ಮೈಸೂರು ರಸ್ತೆ, ನಾಗರಭಾವಿ ಮತ್ತು ಸುಮನಹಳ್ಳಿ ಪ್ರಸ್ತುತವಿರುವ ಫ್ಲೈಓವರ್‌ಗಳ ಪಕ್ಕದಲ್ಲಿ, ಮೇಲಾಗಿ ನಿರ್ಮಾಣವಾಗಲಿದೆ ಎಂದು ಮೆಟ್ರೋ ಅಧಿಕಾರಿಗಳು ತಿಳಿಸಿದ್ದಾರೆ. ಕೆ.ಎಚ್.ಬಿ. ಕಾಲನಿ, ಕಡಬಗೆರೆ ನಡುವಿನ ಫ್ಲೈ ಓವರ್‌ನಲ್ಲಿ ಕೆ.ಎಚ್.ಬಿ. ಕಾಲನಿ, ಸುಂಕದಕಟ್ಟೆ, ಕಡಬಗೆರೆಗಳಲ್ಲಿ ರ್‍ಯಾಂಪ್‌ಗಳನ್ನು ಅಳವಡಿಸಲಾಗುವುದು. ಸುಂಕದಕಟ್ಟೆಯಲ್ಲಿ, ಡಿಪೋಗೆ ಎರಡು ಕಡೆಗಳಲ್ಲಿ ರ್‍ಯಾಂಪ್‌ಗಳನ್ನು ಅಳವಡಿಸಲು ಯೋಜನೆ ಹಾಕಿಕೊಳ್ಳಲಾಗಿದೆ.

**ಡಬಲ್ ಡೆಕ್ಕರ್ ಫ್ಲೈ ಓವರ್ ಉಚಿತವಲ್ಲ?:** ಫ್ಲೈಓವರ್‌ಗಳಲ್ಲಿ ಸಂಚರಿಸುವ ವಾಹನಗಳಿಗೆ ಸರ್ಕಾರ ಟೋಲ್ ವಿಧಿಸುವ ಯೋಜನೆ ಹೊಂದಿದೆ. ನಿಖರವಾದ ದರವನ್ನು ಇನ್ನೂ ನಿರ್ಧರಿಸಬೇಕಿದೆ.

**ಯಾವಾಗ ಆರಂಭ ಆಗಬಹುದು?:** ಕೇಂದ್ರ ಸರ್ಕಾರವು 2024 ಆಗಸ್ಟ್ 16 ರಂದು ಫೇಸ್ 3 ಗೆ ಅನುಮೋದನೆ ನೀಡಿದೆ. ಡಬಲ್ ಡೆಕ್ಕರ್ ರಚನೆಗಾಗಿ ವಿನ್ಯಾಸವನ್ನು ಮರುರೂಪಿಸುವ ಕಾರಣ ಸಿವಿಲ್ ಕಾಮಗಾರಿಗಳಲ್ಲಿ ವಿಳಂಬವಾಗಿದೆ. ಈ ಮೆಟ್ರೋ ಹಂತಕ್ಕೆ ಮೇ 2031 ರ ಗಡುವು ನಿಗದಿಪಡಿಸಲಾಗಿದೆ. ಆದರೆ, ಡಬಲ್ ಡೆಕ್ಕರ್ ಫ್ಲೈಓವರ್ 2030ರ ವೇಳೆಗೆ ಪೂರ್ಣಗೊಳಿಸುವ ನಿರೀಕ್ಷೆಯಿದೆ.

## ಸಿದ್ಧಸೂಕ್ತಿ



**ಡಾ ಆರೂಢಭಾರತೀ ಸ್ವಾಮೀಜಿ**
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

### ಚರ್ಚ್ ಮಸೀದಿ ಲಿಂಗ ಮೂರ್ತಿ

ದೇವರು ನಿರಾಕಾರ ಎಂದಾದರೆ ಶಿವ ಪಾರ್ವತಿ ಬ್ರಹ್ಮ ವಿಷ್ಣು ಲಕ್ಷ್ಮೀ ಸರಸ್ವತೀ ದುರ್ಗೆ ಗಣೇಶ ಲಿಂಗ ಬಸವಾದಿಗಳೇನು? ಉತ್ತರ ಅವೂ ದೇವರು. ನಿರ್ಗುಣ ನಿರಾಕಾರ ದೇವರು. ಸಗುಣ ಸಾಕಾರ ದೇವರು ಹೇಗೆ? ಉತ್ತರ ಎಲ್ಲೆಡೆಯಲ್ಲಿರುವುದು ದೇವರೆಂದ ಬಳಿಕ ಎಲ್ಲವೂ ದೇವರೇ! ಬಂಗಾರದಿಂದಾಗುವ ಸರ ಉಂಗುರಗಳೆಲ್ಲ ಬಂಗಾರ. ನೀರಿನಿಂದಾಗುವ ನೊರೆ ಸುಳಿ ತರಂಗಗಳೆಲ್ಲ ನೀರು. ತನ್ನ ಬಿಟ್ಟು ದೇವರಿಲ್ಲ, ಮಣ್ಣ ಬಿಟ್ಟು ಮಡಕೆ ಇಲ್ಲ. ಸಾಕಾರ ನಿರಾಕಾರ ಪರಸ್ಪರ ವಿರುದ್ಧವಲ್ಲವೇ? ಉತ್ತರ ಹೌದಾದರೆ ಹೌದು ಅಲ್ಲವಾದರೆ ಅಲ್ಲ. ಎಲ್ಲಾ ತಿಳುವಳಿಕೆಯಂತೆ. ಯಥಾ ದೃಷ್ಟಿಃತಥಾ ಸೃಷ್ಟಿಃ = ದೃಷ್ಟಿಯಂತೆ ಸೃಷ್ಟಿ. ದ್ರವ ಘನ ವಿರುದ್ಧ. ನೀರು ದ್ರವ, ತಂಪಾದರೆ ಮಂಜುಗಡ್ಡೆ ಘನ. ಕೀಲಿಕೈಯಿಂದ ಕೀಲಿ ಹಾಕಲೂಬಹುದು ತೆರೆಯಲೂಬಹುದು. ಪದ್ಧತಿ ಬೇರೆ. ಕನಸಿನಲ್ಲಿ ಕನಸು ನಿಜ, ಕನಸಿನಾಚೆ ಅದು ಸುಳ್ಳು. ನಾಟಕ ಸಿನೇಮಾ ತನ್ಮಯತೆಯಿಂದ ನಿಜ, ಪ್ರತ್ಯೇಕತೆಯಿಂದ ಕೃತ್ರಿಮ. ಯದ್ಭಾವಂ ತದ್ಭವತಿ = ಭಾವದಂತೆ ತೋರುವುದು. ಮನಸ್ಸಿನಂತೆ ಮಹಾದೇವ. ಚರ್ಚ್ ಮಸೀದಿ ಗುಡಿ ಗುಂಡಾರ ಇಷ್ಟಲಿಂಗ ಬಸವಮೂರ್ತಿ ವಿವಿಧದೇವರುಗಳೆಲ್ಲ ನಿಜ ಎನಿಸಿರುವುದು ನಮ್ಮ ಭಾವನೆಗಳಿಂದ. ಇವೆಲ್ಲ ನಮಗಾಗಿ ನಮ್ಮ ಸೃಷ್ಟಿ. ನಿಜಾರ್ಥದಲ್ಲಿ ದೇಹವೇ ದೇಗುಲ ಜೀವವೇ ದೇವರು!

# ವಾರಾಂತ್ಯ ಬೆಂಗಳೂರು ಗ್ರಾಮಾಂತರ, ನಗರ ಮಳೆ ಮುನ್ಸೂಚನೆ

## ಬಂಗಾಳಕೊಲ್ಲಿಯಲ್ಲಿ ವಾಯುಭಾರ ಕುಸಿತ: ಕರಾವಳಿ, ದಕ್ಷಿಣ ಒಳನಾಡಿನ ಈ ಕೆಲವು ಜಿಲ್ಲೆಗಳಿಗೆ ಮಳೆ ಮುನ್ಸೂಚನೆ

• **ಉದಯವಾಹಿನಿ, ಬೆಂಗಳೂರು**



ಉದಯವಾಹಿನಿ ಚಿತ್ರ

**ಸದ್ಯಕ್ಕೆ ರಾಜ್ಯದಲ್ಲಿ ಒಣಹವೆ**

ಬಂಗಾಳಕೊಲ್ಲಿಯಲ್ಲಿ ಉಂಟಾಗಿರುವ ವಾಯುಭಾರ ಕುಸಿತದ ಪರಿಣಾಮವಾಗಿ, ಕರ್ನಾಟಕದ ಹವಾಮಾನದಲ್ಲಿ ಮುಂದಿನ ದಿನಗಳಲ್ಲಿ ಬದಲಾವಣೆಯಾಗುವ ಸಾಧ್ಯತೆಯಿದೆ. ಸದ್ಯಕ್ಕೆ ರಾಜ್ಯದಲ್ಲಿ ಒಣಹವೆ ಇದ್ದು, ನವೆಂಬರ್ 17 ರಿಂದ ದಕ್ಷಿಣ ಒಳನಾಡಿನ ಕೆಲವು ಭಾಗಗಳಲ್ಲಿ ಮತ್ತು ನವೆಂಬರ್ 18 ರಿಂದ ಕರಾವಳಿ ಜಿಲ್ಲೆಗಳಲ್ಲಿ ಮಳೆ ಆರಂಭವಾಗಲಿದೆ ಎಂದು ಬೆಂಗಳೂರಿನ ಹವಾಮಾನ ಕೇಂದ್ರ ಮುನ್ಸೂಚನೆ ನೀಡಿದೆ.

**ಮುಂದಿನ ಏಳು ದಿನಗಳ ಹವಾಮಾನ ಮುನ್ಸೂಚನೆ:** ಕರಾವಳಿ, ಉತ್ತರ ಒಳನಾಡು, ದಕ್ಷಿಣ ಒಳನಾಡು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಒಣಹವೆ ಮುಂದುವರೆಯಲಿದೆ.

**ಸೋಮವಾರ ಹಗುರ ಮಳೆ ಮುನ್ಸೂಚನೆ; ದಕ್ಷಿಣ ಒಳನಾಡು:** ಕೋಲಾರ, ಚಾಮರಾಜನಗರ, ಮೈಸೂರು ಮತ್ತು ರಾಮನಗರ ಜಿಲ್ಲೆಗಳ ಒಂದೆರಡು ಕಡೆಗಳಲ್ಲಿ ಹಗುರ ಮಳೆಯಾಗುವ ಸಾಧ್ಯತೆಯಿದೆ. ಉಳಿದಂತೆ ಬೆಂಗಳೂರು (ಗ್ರಾಮಾಂತರ ಮತ್ತು ನಗರ), ಚಿಕ್ಕಬಳ್ಳಾಪುರ ಸೇರಿದಂತೆ ಇತರ ಜಿಲ್ಲೆಗಳಲ್ಲಿ ಒಣಹವೆ ಇರಲಿದೆ. ಕರಾವಳಿ ಮತ್ತು ಉತ್ತರ ಒಳನಾಡು ಸಂಪೂರ್ಣವಾಗಿ ಒಣಹವೆ ಮುಂದುವರೆಯಲಿದೆ.

**ನವೆಂಬರ್ 18, ಮಂಗಳವಾರ:** ಕರಾವಳಿ ಕರ್ನಾಟಕ ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳ ಒಂದೆರಡು ಕಡೆಗಳಲ್ಲಿ ಹಗುರದಿಂದ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ಉತ್ತರ ಕನ್ನಡದಲ್ಲಿ ಒಣಹವೆ ಇರಲಿದೆ.

**ದಕ್ಷಿಣ ಒಳನಾಡು:** ಬೆಂಗಳೂರು (ಗ್ರಾಮಾಂತರ ಮತ್ತು ನಗರ), ಚಿಕ್ಕಬಳ್ಳಾಪುರ, ಕೋಲಾರ, ಚಾಮರಾಜನಗರ, ಮಂಡ್ಯ, ಮೈಸೂರು, ಹಾಸನ ಮತ್ತು ಕೊಡಗು ಜಿಲ್ಲೆಗಳ ಒಂದೆರಡು ಕಡೆ ಹಗುರ ಮಳೆಯಾಗಬಹುದು. **ಉತ್ತರ ಒಳನಾಡು:** ಎಲ್ಲಾ ಜಿಲ್ಲೆಗಳಲ್ಲಿ ಒಣಹವೆ ಮುಂದುವರೆಯಲಿದೆ.

**ಕರಾವಳಿ ಕರ್ನಾಟಕ:** ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಮಳೆ ಮುಂದುವರೆಯಲಿದೆ.

**ದಕ್ಷಿಣ ಒಳನಾಡು:** ಮಂಡ್ಯ, ಮೈಸೂರು, ಚಾಮರಾಜನಗರ, ಕೊಡಗು, ಹಾಸನ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಹಗುರ ಮಳೆಯ ನಿರೀಕ್ಷೆಯಿದೆ.

### ಬೆಂಗಳೂರಲ್ಲಿ ಚಳಿ ಹೆಚ್ಚಳ

**ಮುಂದಿನ 24 ಗಂಟೆಗಳು ಮುಖ್ಯವಾಗಿ ಶುಭ್ರ ಆಕಾಶವಿರಲಿದೆ. ಕೆಲವು ಪ್ರದೇಶಗಳಲ್ಲಿ ಮುಂಜಾನೆ ಮಂಜು ಕವಿಯುವ ಸಾಧ್ಯತೆಯಿದೆ. ಗರಿಷ್ಠ ತಾಪಮಾನ 28°C ಮತ್ತು ಕನಿಷ್ಠ ತಾಪಮಾನ 17°C ಇರುವ ಸಂಭವವಿದೆ, ಹೀಗಾಗಿ ಹೆಚ್ಚು ಚಳಿಯ ಅನುಭವ ಇರಲಿದೆ. ಮುಂದಿನ 48 ಗಂಟೆಗಳು ಭಾಗಶಃ ಮೋಡ ಕವಿದ ವಾತಾವರಣವಿರಲಿದ್ದು, ಮುಂಜಾನೆ ಮಂಜು ಮುಂದುವರೆಯಲಿದೆ. ತಾಪಮಾನದಲ್ಲಿ ಯಾವುದೇ ಗಮನಾರ್ಹ ಬದಲಾವಣೆ ಇರುವುದಿಲ್ಲ.**

ಬೆಂಗಳೂರು ಸೇರಿದಂತೆ, ದಕ್ಷಿಣ ಕರ್ನಾಟಕದ ಉಳಿದ ಜಿಲ್ಲೆಗಳಲ್ಲಿ ಹಾಗೂ ಉತ್ತರ ಕರ್ನಾಟಕದಲ್ಲಿ ಒಣಹವೆ ಇರಲಿದೆ. ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಹಗುರದಿಂದ ಸಾಧಾರಣ ಮಳೆ ಮುಂದುವರೆಯಲಿದೆ.

**ದಕ್ಷಿಣ ಒಳನಾಡು:** ಚಿಕ್ಕಮಗಳೂರು, ಕೊಡಗು ಮತ್ತು ಮೈಸೂರು ಜಿಲ್ಲೆಗಳ ಕೆಲವೆಡೆ ಹಗುರ ಮಳೆಯಾಗುವ ಸಾಧ್ಯತೆಯಿದೆ.

**ಉತ್ತರ ಒಳನಾಡು:** ಎಲ್ಲಾ ಜಿಲ್ಲೆಗಳಲ್ಲಿ ಒಣಹವೆ ಮುಂದುವರೆಯಲಿದೆ.

### ಸೈಕ್ಲೋನಿಕ್ ಸುಳಿಗಾಳಿ ಮುಂದು

**ನೈಋತ್ಯ ಬಂಗಾಳಕೊಲ್ಲಿಯ ಶ್ರೀಲಂಕಾ ಕರಾವಳಿಯಲ್ಲಿ ವಾಯುಭಾರ ಕುಸಿತ ಮುಂದುವರಿದಿದೆ. ಇದರೊಂದಿಗೆ ಸಂಬಂಧಿಸಿದ ಸೈಕ್ಲೋನಿಕ್ ಮಾರುತಗಳು ಸಮುದ್ರ ಮಟ್ಟದಿಂದ 7.6 ಕಿ.ಮೀ ಎತ್ತರದವರೆಗೆ ವ್ಯಾಪಿಸಿದ್ದು, ಮುಂದಿನ 24 ಗಂಟೆಗಳಲ್ಲಿ ನಿಧಾನವಾಗಿ ಪಶ್ಚಿಮ-ವಾಯುವ್ಯ ದಿಕ್ಕಿನತ್ತ ಚಲಿಸುವ ಸಾಧ್ಯತೆಯಿದೆ. ಇದಲ್ಲದೆ, ಆಗ್ನೇಯ ಅರಬ್ಬೀ ಸಮುದ್ರ ಮತ್ತು ದಕ್ಷಿಣ ಕೇರಳ ಕರಾವಳಿಯಲ್ಲೂ ಸೈಕ್ಲೋನಿಕ್ ಸುಳಿಗಾಳಿ ಮುಂದುವರಿದಿದೆ.**

**ಕರಾವಳಿ ಕರ್ನಾಟಕ:** ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಹಲವೆಡೆ ಹಗುರದಿಂದ ಸಾಧಾರಣ ಮಳೆ ಮುಂದುವರೆಯಲಿದೆ.

**ದಕ್ಷಿಣ ಒಳನಾಡು:** ಬೆಂಗಳೂರು (ಗ್ರಾಮಾಂತರ ಮತ್ತು ನಗರ), ಚಿಕ್ಕಬಳ್ಳಾಪುರ, ಕೋಲಾರ, ಚಾಮರಾಜನಗರ, ಮಂಡ್ಯ, ಮೈಸೂರು, ಹಾಸನ ಮತ್ತು ಕೊಡಗು ಜಿಲ್ಲೆಗಳ ಒಂದೆರಡು ಕಡೆಗಳಲ್ಲಿ ಹಗುರದಿಂದ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ.

# ಸುಧೀಂದ್ರನಗರ ರಾಯರ ಮಠದಲ್ಲಿ ಟಿಟಿಡಿ ಕಾರ್ಯಕ್ರಮ

• **ಉದಯವಾಹಿನಿ, ಬೆಂಗಳೂರು**



ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್ ವತಿಯಿಂದ ಮಲ್ಲೇಶ್ವರದ ಈಜುಕೊಳದ ಬಡಾವಣೆಯ ಸುಧೀಂದ್ರನಗರದ 6ನೇ ಅಡ್ಡರಸ್ತೆಯಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ನವೆಂಬರ್ 18 ರಿಂದ 21ರ ವರೆಗೆ ವಿವಿಧ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು **ಅವುಗಳ ವಿವರಗಳು ಈ ರೀತಿ ಇವೆ:** ಭಜನಾ ಕಾರ್ಯಕ್ರಮ- (ಪ್ರತಿದಿನ ಸಂಜೆ 6 ರಿಂದ 7): ನ. 18- ವಿಜಯನಗರದ ಪವಿತ್ರ ಗಾನ ವೃಂದ, ನವೆಂಬರ್ 19-ಸುಧೀಂದ್ರನಗರದ ಶ್ರೀ ವಿಜಯ ವಿಠಲ ಭಜನಾ ಮಂಡಳಿ, ನವೆಂಬರ್ 20-ಶೇಷಾದ್ರಿಪುರದ ಶ್ರೀ ಸುಶಮೀಂದ್ರ ಭಜನಾ ಮಂಡಳಿ. ಪ್ರವಚನ ಕಾರ್ಯಕ್ರಮ- ನ. 18 ರಿಂದ 20 ಪ್ರತಿದಿನ ಸಂಜೆ 7 ರಿಂದ 8: ಶ್ರೀ ಪ್ರಸನ್ನಾಚಾರ್ ತಂತ್ರಸಾರ ಇವರಿಂದ ಕಾರ್ತೀಕ ಮಾಸ ಮಹಾತ್ಮೆ ವಿಷಯವಾಗಿ ಧಾರ್ಮಿಕ ಪ್ರವಚನ.

**ಹರಿನಾಮ ಸಂಕೀರ್ತನೆ :** ನವೆಂಬರ್ 21, ಶುಕ್ರವಾರ ಸಂಜೆ 6-30ಕ್ಕೆ ಶ್ರೀ ಪ್ರಾಣೇಶ ಪಿ. ಭಾರಧ್ವಾಜ್ (ಗಾಯನ), ಶ್ರೀ ರಾಜೇಂದ್ರ ಬೆಂಡೆ (ಕೀ-ಬೋರ್ಡ್), ಶ್ರೀ ಶ್ರೀನಿವಾಸ ಕಾಖಂಡಕಿ (ತಬಲಾ).

ಈ ಎಲ್ಲಾ ಕಾರ್ಯಕ್ರಮಗಳಲ್ಲಿಯೂ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಟಿಟಿಡಿ ಹೆಚ್.ಡಿ.ಪಿ.ಪಿ. ಸಂಚಾಲಕರಾದ ಡಾ. ಪಿ. ಭುಜಂಗರಾವ್ ವಿನಂತಿಸಿದ್ದಾರೆ.



ಉದಯವಾಹಿನಿ ಚಿತ್ರ

• **ಉದಯವಾಹಿನಿ, ಬೆಂಗಳೂರು**

**ಭಾನುವಾರ ಮಲ್ಲೇಶ್ವರಂನ ಎಂ.ಎಲ್.ಎ ಕಾಲೇಜಿನಲ್ಲಿ ಶ್ರೀ ಸೋಂದಾ ಸ್ವರ್ಣವಲ್ಲಿ ಮಹಾಸಂಸ್ಥಾನ ಮಠದ ವತಿಯಿಂದ ಆಯೋಜಿಸಿದ್ದ ಜಿಲ್ಲಾ ಮಟ್ಟದ ಶ್ರೀಮದ್ ಭಗವದ್ಗೀತಾ ಸ್ಪರ್ಧೆಯಲ್ಲಿ ಕುಮಾರಿ ವೈನವಿ.ಬಿ.ಸಿ ಭಾಷಣ ವಿಭಾಗದಲ್ಲಿ ಪ್ರಥಮ ಸ್ಥಾನ ಹಾಗೂ ಗೀತಾ ಗಾಯನ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಕಾರ್ಯಕ್ರಮದಲ್ಲಿ ಶ್ರೀ ಜೀ.ವಿ.ಹೆಗಡೆ (ಸ್ವರ್ಣವಲ್ಲಿ ಸೇವಾ ಪ್ರತಿಷ್ಠಾನ ಅಧ್ಯಕ್ಷರು, ಡಾ. ಗಣಪತಿ ಹೆಗಡೆ (ಪ್ರಾಂಶುಪಾಲರು) ಶ್ರೀಮತಿ ಲಕ್ಷ್ಮಿ ನಾಗೇಶ್ (ಕಾರ್ಯದರ್ಶಿಗಳು) ಹಾಗೂ ಕೃಷ್ಣ ದುರ್ಗದ್ (ಸ್ಪರ್ಧಾ ಸಂಚಾಲಕರು ) ಇನ್ನು ಅನೇಕರು ಉಪಸ್ಥಿತರಿದ್ದರು.**

# ಸಹಕಾರ ಸಂಘಗಳಿಂದ ರೈತರ ಬದುಕು ಸುಧಾರಣೆ: ಕೆ.ಎಚ್.ಮುನಿಯಪ್ಪ

• **ಉದಯವಾಹಿನಿ, ದೇವನಹಳ್ಳಿ**

ಸಹಕಾರ ಸಂಘಗಳು ರೈತರಿಗೆ ಕಾಲಕಾಲಕ್ಕೆ ಸಾಲ ಸೌಲಭ್ಯ ನೀಡಿ ರೈತರ ಬೆನ್ನೆಲುಬಾಗಿ ನಿಂತಿವೆ. ಸಹಕಾರ ಸಂಸ್ಥೆಗಳು ಬೆಳೆಯುವುದರಿಂದ ರೈತರ ಬದುಕು ಸುಧಾರಣೆಗೊಳ್ಳುತ್ತದೆ ಎಂದು ಸಚಿವ ಕೆ.ಎಚ್.ಮುನಿಯಪ್ಪ ತಿಳಿಸಿದರು.

ಪಟ್ಟಣದ ಖಾಸಗಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ 72ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಸಹಕಾರ ಸಂಘಗಳಿಂದ ರೈತರ ಅಭಿವೃದ್ಧಿ ಸಾಧ್ಯ, ಪಹಣಿ ಇದ್ದರೆ ಸಾಕು 3 ಲಕ್ಷ ವರೆಗೆ ಸಾಲ ಪಡೆಯಬಹುದು. ಜಿಲ್ಲೆಯ ಸಹಕಾರ ಸಂಘಗಳಿಗೆ ಸರ್ಕಾರದಿಂದ ಸಿಗಬೇಕಾದ ಸೌಲಭ್ಯಗಳನ್ನು ಒದಗಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದರು. ಬೆಂಗಳೂರು ಹಾಲು ಒಕ್ಕೂಟದ ನಿರ್ದೇಶಕ ಎಸ್.ಪಿ.ಮುನಿರಾಜು, ಸಹಕಾರ ಕ್ಷೇತ್ರದಲ್ಲಿ ಗುಡಿ ಕೈಗಾರಿಕೆಗಳಿಂದ ಹಿಡಿದು ಬೃಹತ್ ಕೈಗಾರಿಕೆ ಸ್ಥಾಪಿಸಲು ಅವಕಾಶವಿದೆ. ಕೃಷಿಯನ್ನು ಉದ್ಯಮವಾಗಿ ಪರಿಗಣಿಸಿ ಕೃಷಿ ಉತ್ಪನ್ನಗಳು ಹಾಗೂ ಹೈನೋದ್ಯಮವನ್ನು ಪ್ರೋತ್ಸಾಹಿಸುವಲ್ಲಿ ಸಹಕಾರಿ ಸಂಸ್ಥೆಗಳ ಪಾತ್ರ ಹಿರಿದು ಎಂದು ತಿಳಿಸಿದರು. ಇದೇ ವೇಳೆ ರಾಜ್ಯ ಸಹಕಾರಿ ರತ್ನ ಪ್ರಶಸ್ತಿ ಪುರಸ್ಕೃತ ವಿ.ಪ್ರಸನ್ನ ಕುಮಾರ್ ಅವರನ್ನು ಸತ್ಕರಿಸಲಾಯಿತು.

# ಬೆಸ್ಕಾಂ ತುರ್ತು ಕಾಮಗಾರಿಯ ಹಿನ್ನೆಲೆ ವಿದ್ಯುತ್ ಕಡಿತ

• **ಉದಯವಾಹಿನಿ, ಬೆಂಗಳೂರು**



ಬೆಸ್ಕಾಂ ತುರ್ತು ಕಾಮಗಾರಿಯು ನಡೆಯುತ್ತಿದ್ದು, ಬೆಂಗಳೂರಿನ ಕೆಲ ಬಡಾವಣೆಗಳಲ್ಲಿ ನ. 18 (ಮಂಗಳವಾರ) ಬೆಳಿಗ್ಗೆಯಿಂದ ಸಂಜೆವರೆಗೂ ವಿದ್ಯುತ್ ಕಡಿತವಾಗಲಿದೆ. ಈ ಬಗ್ಗೆ ಬೆಸ್ಕಾಂನಿಂದ ಮಾಧ್ಯಮ ಮಾಹಿತಿ ನೀಡಲಾಗಿದೆ.

18.11.2025 ಬೆಳಿಗ್ಗೆ 11:00 ಗಂಟೆಯಿಂದ ಸಾಯಂಕಾಲ 5:00 ಗಂಟೆಯವರೆಗೆ 66/11 ಕೆ.ವಿ ಶೋಭಾ ಸಿಟಿ ಉಪ-ಕೇಂದ್ರದಲ್ಲಿ ತುರ್ತುನಿರ್ವಹಣಾ ಕೆಲಸಗಳನ್ನು ನಿರ್ವಹಿಸುವುದರಿಂದ ಸುತ್ತಮುತ್ತಲಿನ ಸ್ಥಳಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗುವುದು ಎಂದು ಬೆಸ್ಕಾಂ ತಿಳಿಸಿದೆ.

**ವಿದ್ಯುತ್ ವ್ಯತ್ಯಯವಾಗುವ ಸ್ಥಳಗಳು:** ''ಶೊಭಾ ಸಿಟಿ, ಚೊಕ್ಕನಹಳ್ಳಿ, ಡೋಮಿನೊ ಪಿಜ್ಜಾ ಇನ್ ಪ್ಯಾರಡೈಸ್ ನೂರ್ ನಗರ, ಎಕ್ಸ್ ಸರ್ವಿಸ್‌ಮೆನ್ ಲೇಔಟ್, ಪೋಲೀಸ್ ಕ್ವಾಟ್‌ರ್ಸ್, ಆರ್.ಕೆ. ಹೆಗ್ಡೆ ನಗರ, ಶಬರಿ ನಗರ, ಹೊಸ ಶಾಂತಿ ನಗರ, ಕೆಂಪೇಗೌಡ ಲೇಯು, ನಾಗೇನಹಳ್ಳಿ ಗ್ರಾಮ, ರೀಜೆನ್ಸಿ ಪರ್ಕ್, ಎಸ್ತರ್ ಹರಮೋನಿಕ್ ಲೇಔಟ್, ಬಾಲಾಜಿ ಲೇಔಟ್, ನಾಗೇನಹಳ್ಳಿ ಜಿಮ್, ಸ್ಲಮ್‌ಬೋರ್ಡ್, ಬೆಂಚ್ ರಾಯಲ್ ವುಡ್, ಅರ್ಕಾವತಿ ಲೇಔಟ್ ಥಣಿಸಂದ್ರ, ಆರ್ ಕೆ ಹೆಗಡೆ ನಗರ, ಬೆಳ್ಳಹಳ್ಳಿ ಗ್ರಾಮ, ತಿರುಮೇನಹಳ್ಳಿ ಗ್ರಾಮ, ಮಿತ್ತಗಾನಹಳ್ಳಿ ಮತ್ತು ಕೋಗಿಲು ಗ್ರಾಮ, ಬೆಲಹಳ್ಳಿ, ವಿಧಾನಸೌಧ ಲೇಔಟ್, ಕರ್ನಾಟಕ ಕಾಲೇಜು, ಸುತ್ತಮುತ್ತಲಿನ ಪ್ರದೇಶಗಳು.

# ಕ್ಯಾನ್ಸರ್ ಪೀಡಿತರ ಚಿಕಿತ್ಸೆಗೆ ಹೆಚ್ಚುವರಿ ಹಾಸಿಗೆ

• **ಉದಯವಾಹಿನಿ, ಬೆಂಗಳೂರು**




ಉದಯವಾಹಿನಿ ಚಿತ್ರ

ಕ್ಯಾನ್ಸರ್ ಪೀಡಿತರ ಸಂಖ್ಯೆ ಏರಿಕೆಯಾಗುತ್ತಿರುವ ಕಾರಣ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ಹಾಸಿಗೆಗಳ ಸಂಖ್ಯೆ ಹೆಚ್ಚಿಸಲಾಗುತ್ತಿದ್ದು, ನೂತನ ಬ್ಲಾಕ್ ನಿರ್ಮಾಣಕ್ಕೆ ಹಾಲಿ ಕಟ್ಟಡಗಳ ಸ್ಥಿರತೆ ಬಗ್ಗೆ ಅಧ್ಯಯನ ಕೈಗೊಳ್ಳಲಾಗಿದೆ. ಸಂಸ್ಥೆಯು ಕ್ಯಾನ್ಸರ್ ಚಿಕಿತ್ಸೆಯ ಜತೆಗೆ ಶಿಕ್ಷಣ, ಸಂಶೋಧನೆ ಹಾಗೂ ರೋಗದ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯದಲ್ಲಿಯೂ ತೊಡಗಿಕೊಂಡಿದೆ. ಇಲ್ಲಿನ ಹೊಂಬೇಗೌಡ ನಗರದಲ್ಲಿರುವ ಸಂಸ್ಥೆಗೆ ಕ್ಯಾನ್ಸರ್ ಚಿಕಿತ್ಸೆಗಾಗಿ ರಾಜ್ಯದ ವಿವಿಧ ಭಾಗಗಳ ಜತೆಗೆ ಹೊರ ರಾಜ್ಯಗಳಿಂದಲೂ ಪ್ರತಿನಿತ್ಯ ಸಾವಿರಾರು ಸಂಖ್ಯೆಯಲ್ಲಿ ರೋಗಿಗಳು ಬರುತ್ತಾರೆ. ದಾಖಲಾತಿ ಹಾಗೂ ಚಿಕಿತ್ಸೆ ವಿಳಂಬವಾದಲ್ಲಿ ರೋಗ ಉಲ್ಬಣಗೊಳ್ಳುವ ಕಾರಣ, ಸಂಸ್ಥೆಗೆ ಭೇಟಿ ನೀಡುವ ಕ್ಯಾನ್ಸರ್ ಪೀಡಿತರನ್ನು ಕೂಡಲೇ ದಾಖಲಿಸಿಕೊಂಡು ಚಿಕಿತ್ಸೆ ಒದಗಿಸಲು ಹೊಸದಾಗಿ 450 ಹಾಸಿಗೆ ಸೇರ್ಪಡೆ ಮಾಡಲಾಗುತ್ತಿದೆ. ಇದರಿಂದಾಗಿ ಒಟ್ಟು ಹಾಸಿಗೆಗಳ ಸಂಖ್ಯೆ ಸಾವಿರದ ಗಡಿ ದಾಟಲಿದೆ. ಸಂಸ್ಥೆಯ ದಾಖಲಾತಿ ಪ್ರಕಾರ, ಶೇಕಡ 50ರಷ್ಟು ರೋಗಿಗಳು ಕ್ಯಾನ್ಸರ್ ಚಿಕಿತ್ಸೆಗೆ ಮೂರು, ನಾಲ್ಕನೇ ಹಂತದಲ್ಲಿ ಬರುತ್ತಿದ್ದಾರೆ. ಶೇ 14.3ರಷ್ಟು ಮಂದಿಗೆ ಮಾತ್ರ ಮೊದಲ ಹಾಗೂ ಎರಡನೇ ಹಂತದಲ್ಲಿ ಕ್ಯಾನ್ಸರ್ ಪತ್ತೆಯಾಗುತ್ತಿದೆ. ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ದುಬಾರಿ ಆಗಿರುವ ಕಾರಣ, ಸಂಸ್ಥೆಯಲ್ಲಿ ಹಾಸಿಗೆಗೆ ಬೇಡಿಕೆ ಹೆಚ್ಚುತ್ತಿದೆ. ಇನ್ನೊಂದೆಡೆ ತಡವಾಗಿ ರೋಗ ಪತ್ತೆಯಿಂದ ಚಿಕಿತ್ಸೆ ಅವಧಿಯೂ ಹೆಚ್ಚುತ್ತಿದೆ. ಆದ್ದರಿಂದ ವೈದ್ಯಕೀಯ ಶಿಕ್ಷಣ ಇಲಾಖೆಯು ಸಂಸ್ಥೆಯಲ್ಲಿ ಹೊಸ ಬ್ಲಾಕ್ ನಿರ್ಮಾಣಕ್ಕೆ ಕ್ರಮ ಕೈಗೊಂಡಿದೆ.

**ನಾಲ್ಕು ಮಹಡಿ:** ಹೆಚ್ಚುವರಿ ಹಾಸಿಗೆಗಳ ಸೇರ್ಪಡೆಗೆ ನಾಲ್ಕು ಮಹಡಿ ನಿರ್ಮಿಸಲು ನಿರ್ಧರಿಸಲಾಗಿದ್ದು, ಈ ಸಂಬಂಧ ಸಂಸ್ಥೆಯ ಹಾಲಿ ಕಟ್ಟಡಗಳ ಸ್ಥಿರತೆ ಬಗ್ಗೆ ಅಧ್ಯಯನ ಕೈಗೊಳ್ಳಲಾಗಿದೆ.

# ಸಿಎಂ ಸಿದ್ದರಾಮಯ್ಯ ಅವರ ಸ್ಥಾನ ಅಬಾಧಿತ

• **ಉದಯವಾಹಿನಿ, ಬೆಂಗಳೂರು**

ಸಚಿವ ಸಂಪುಟ ಪುನರ್ ರಚನೆಯಾದರೆ ನಾಯಕತ್ವ ಬದಲಾವಣೆಯಾಗುವುದಿಲ್ಲ. ಸಿಎಂ ಸಿದ್ದರಾಮಯ್ಯ ಅವರ ಸ್ಥಾನ ಅಬಾಧಿತ ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ್ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿಎಂ ಸಿದ್ದರಾಮಯ್ಯ ದೆಹಲಿಗೆ ಹೋಗುವ ಮುನ್ನ, ನಾನು ಅವರನ್ನು ಭೇಟಿ ಮಾಡಿ ಚರ್ಚಿಸಿದ್ದೆ. ಅನಂತರದ ವಿದ್ಯಮಾನಗಳ ಬಗ್ಗೆ ಮಾಹಿತಿ ಇಲ್ಲ. ಆದರೆ ಸಚಿವ ಸಂಪುಟ ಪುನರ್‌ರಚನೆಗೆ ಅನುಮತಿಸಲಾಗಿದೆ ಎಂಬ ವರದಿಯನ್ನು ನೋಡಿದ್ದೇನೆ ಎಂದರು.

ಬಹಳಷ್ಟು ಮಂದಿ ಶಾಸಕರಿಗೆ ಸಚಿವರಾಗಬೇಕು ಎಂದು ಬಹಳಷ್ಟು ದಿನಗಳಿಂದಲೂ ಬೇಡಿಕೆ ಇದೆ. ಅವರಿಗೆ ಅವಕಾಶ ಸಿಗಬೇಕು. ಸಂಪುಟ ಪುನರ್ ರಚನೆ ಮುಖ್ಯಮಂತ್ರಿ ಅವರ ಪರಮಾಧಿಕಾರ. ಹೈಕಮಾಂಡ್ ಜೊತೆ ಚರ್ಚೆ ಮಾಡಿ ಸೂಕ್ತ ನಿರ್ಧಾರ ಕೈಗೊಳ್ಳುತ್ತಾರೆ. ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಬಗ್ಗೆ ವಿವರ ಗೊತ್ತಿಲ್ಲ. ಸಮಯ ಸಂದರ್ಭ ನೋಡಿ ಹೈಕಮಾಂಡ್ ನಿರ್ಧಾರ ತೆಗೆದುಕೊಳ್ಳುತ್ತದೆ ಎಂದರು.

ಸಂಪುಟ ಪುನರ್‌ರಚನೆ ಹಿನ್ನೆಲೆಯಲ್ಲಿ ತಾವು ದೆಹಲಿಗೆ ಹೋಗಿಲ್ಲ, ಹೋಗುವುದೂ ಇಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಕಬ್ಬಿಗೆ ಎಫ್‌ಆರ್‌ಪಿ ನಿಗದಿ ಮಾಡುವುದು ಕೇಂದ್ರ ಸರ್ಕಾರದ ಜವಾಬ್ದಾರಿ.

2024-25, 2025-26ನೇ ಸಾಲಿಗೆ ಪ್ರತಿ ಟನ್‌ಗೆ 3,300 ರೂ.ಗಳನ್ನು ನಿಗದಿ ಮಾಡಿದೆ. ನಮ ರೈತರು ಇನ್ನಷ್ಟು ಹೆಚ್ಚು ಕೇಳುತ್ತಿದ್ದಾರೆ. ಹೆಚ್ಚುವರಿ ದರವನ್ನು ಕಾರ್ಖಾನೆಗಳು ಕೊಡಬೇಕು, ಸರ್ಕಾರಗಳು ನೀಡಬೇಕಿದೆ. ರಾಜ್ಯ ಸರ್ಕಾರ ರೈತರ ಹಿತದೃಷ್ಟಿಯಿಂದ ಪ್ರತಿ ಟನ್‌ಗೆ 50 ರೂ. ಹೆಚ್ಚುವರಿ ಹಣ ನೀಡಲು, ಕಾರ್ಖಾನೆಗಳಿಂದ 50 ರೂ. ಕೊಡಿಸಲು ದರ ನಿಗದಿಪಡಿಸಲಾಗಿದೆ.

> **ಕಬ್ಬಿನ ಉಪ ಉತ್ಪನ್ನಗಳ ಆಧಾರದ ಮೇಲೆ ದರ ಕೊಡುವಂತೆ ರೈತರು ಬೇಡಿಕೆ ಮಂಡಿಸಿದ್ದರು. ಈ ಎಲ್ಲಾ ವಿಚಾರಗಳ ಚರ್ಚೆ ಮಾಡಲು ಸಿಎಂ ಅವರು ಪ್ರಧಾನಮಂತ್ರಿಯವರ ಸಮಯ ಕೇಳಿದ್ದರು. ಈಗ ಸಮಯ ಸಿಕ್ಕಿದೆ, ಇಂದು ಭೇಟಿಯಾಗುತ್ತಾರೆ, ಪ್ರಧಾನಿ ಭೇಟಿಯ ವೇಳೆ ಮೇಕೆದಾಟು ಅಣೆಕಟ್ಟು ನಿರ್ಮಾಣಕ್ಕೆ ಅನುಮತಿಸಿರುವುದು ಮತ್ತಿತರ ವಿಚಾರಗಳ ಕುರಿತು ಚರ್ಚೆ ನಡೆಸುವ ಸಾಧ್ಯತೆ ಇದೆ.**
> -ಡಾ.ಜಿ.ಪರಮೇಶ್ವರ್
> ಗೃಹ ಸಚಿವ



# ವಿಚಾರಣಾ ಕೋರ್ಟ್‌ಗೆ ಎಲ್‌ಒಸಿ ಹೊರಡಿಸುವ ಅಧಿಕಾರವಿಲ್ಲ: ಹೈಕೋರ್ಟ್

• **ಉದಯವಾಹಿನಿ, ಬೆಂಗಳೂರು**

ಜೀವನಾಂಶ ನೀಡಬೇಕೆಂಬ ಆದೇಶ ಪಾಲನೆ ಮಾಡದ ಪತಿಯ ವಿರುದ್ಧ ಮಂಗಳೂರಿನ ಕೌಟುಂಬಿಕ ನ್ಯಾಯಾಲಯ ಹೊರಡಿಸಿದ್ದ ಲುಕ್ ಔಟ್ ಸರ್ಕ್ಯುಲರ್ ರದ್ದುಗೊಳಿಸಿರುವ ಹೈಕೋರ್ಟ್, ಕೌಟುಂಬಿಕ ನ್ಯಾಯಾಲಯಕ್ಕೆ ಈ ರೀತಿಯ ಎಲ್‌ಒಸಿ ಹೊರಡಿಸುವಂತಹ ಯಾವುದೇ ಅಧಿಕಾರ ಇಲ್ಲ ಎಂದು ಸ್ಪಷ್ಟಪಡಿಸಿದೆ. ಮಂಗಳೂರಿನ ಕೌಟುಂಬಿಕ ನ್ಯಾಯಾಲಯದ ಪ್ರಧಾನ ನ್ಯಾಯಾಧೀಶರ ಆದೇಶ ಪ್ರಶ್ನಿಸಿ ಕುವೈತ್ ನಲ್ಲಿರುವ ಪತಿ (53) ಸಲ್ಲಿಸಿದ್ದ ರಿಟ್ ಅರ್ಜಿಯನ್ನು ವಿಚಾರಣೆ ನಡೆಸಿದ ನ್ಯಾಯಮೂರ್ತಿ ಲಲಿತಾ ಕನ್ನೆಗಂಟಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ. ಅರ್ಜಿದಾರರು ವಿಚಾರಣಾ ನ್ಯಾಯಾಲಯದ ಮುಂದೆ ಹಾಜರಾಗಿ 2 ಲಕ್ಷ ಠೇವಣಿ ಇರಿಸಬೇಕು ಎಂಬ ಷರತ್ತು ವಿಧಿಸಿರುವ ನ್ಯಾಯಪೀಠ, ಎಲ್‌ಒಸಿ ಅನುಷ್ಠಾನಕ್ಕೆ ಮಧ್ಯಂತರ ತಡೆ ನೀಡಿದೆ. ಯಾವುದೇ ಪ್ರಕರಣಗಳಲ್ಲಿ ನ್ಯಾಯಾಲಯ ಎಲ್‌ಒಸಿ ರದ್ದುಗೊಳಿಸಿದರೆ ಅಂತಹ ಸಂದರ್ಭಗಳಲ್ಲಿ ರಾಜ್ಯ ಪೊಲೀಸ್ ಮಹಾ ನಿರ್ದೇಶಕರು ಅದರ ಬಗ್ಗೆ ಬ್ಯೂರೊ ಆಫ್ ಇಮಿಗ್ರೇಷನ್‌ಗೆ ಮಾಹಿತಿ ನೀಡಬೇಕು ಮತ್ತು ಯಾವ ಅಧಿಕಾರಿ ಎಲ್‌ಸಿ ಜಾರಿಗೊಳಿಸುತ್ತಾರೋ ಅಂತಹವರಿಗೆ ಹೊಣೆಗಾರಿಕೆ ನಿಗದಿಪಡಿಸಬೇಕು ಎಂದು ನ್ಯಾಯಪೀಠ ರಾಜ್ಯ ಪೊಲೀಸ್ ಮಹಾ ನಿರ್ದೇಶಕರಿಗೆ ತಾಕೀತು ಮಾಡಿದೆ. ಒಂದು ವೇಳೆ ಆ ಅಧಿಕಾರಿ ನ್ಯಾಯಾಲಯದ ಆದೇಶವನ್ನು ಪಾಲನೆ ಮಾಡದೇ ಇದ್ದರೆ ಅಂತಹ ಅಧಿಕಾರಿಯ ವಿರುದ್ಧ ಇಲಾಖಾ ಶಿಸ್ತು ಕ್ರಮ ಜರುಗಿಸಬೇಕು ಎಂದೂ ಆದೇಶಿಸಿದೆ.

ದಂಡ ಪ್ರಕ್ರಿಯಾ ಸಂಹಿತೆ-1973ರ ಕಲಂ 125ರಡಿ ಕೌಟುಂಬಿಕ ನ್ಯಾಯಾಲಯಕ್ಕೆ ಎಲ್‌ಸಿ ಹೊರಡಿಸಿರುವ ಯಾವುದೇ ಅಧಿಕಾರವಿಲ್ಲ. ಜೀವನಾಂಶ ನೀಡುವ ಕುರಿತಾದ ಕಲಂ 125 ಅನ್ನು ನ್ಯಾಯಾಲಯ ಇತರೆ ಆದೇಶಗಳ ಮೂಲಕ ಜಾರಿಗೊಳಿಸಬಹುದು.

## ಸಚಿವ ಸಂಪುಟ ಪುನರ್‌ರಚನೆಗೆ ಕಾಂಗ್ರೆಸ್ ಹೈಕಮಾಂಡ್ ಹಸಿರು ನಿಶಾನೆ ತೋರಿಸಿರುವ ಹಿನ್ನೆಲೆ

# ಮಂತ್ರಿಗಿರಿ ಗಿಟ್ಟಿಸಿಕೊಳ್ಳಲು ಶಾಸಕರ ದೆಹಲಿ ಯಾತ್ರೆ

• **ಉದಯವಾಹಿನಿ, ಬೆಂಗಳೂರು**



ಉದಯವಾಹಿನಿ ಚಿತ್ರ

**ಸಂಪುಟ ಪುನರ್ ರಚನೆ ಕಷ್ಟಸಾಧ್ಯ**

ಸಚಿವ ಸಂಪುಟ ಪುನರ್‌ರಚನೆಗೆ ಕಾಂಗ್ರೆಸ್ ಹೈಕಮಾಂಡ್ ಹಸಿರು ನಿಶಾನೆ ತೋರಿಸಿರುವ ಹಿನ್ನೆಲೆಯಲ್ಲಿ ಅವಕಾಶ ಗಿಟ್ಟಿಸಲು ಶಾಸಕರು ದೆಹಲಿಯಾತ್ರೆ ಆರಂಭಿಸಿದರೆ, ಹಾಲಿ ಸಚಿವರಿಗೆ ಹುದ್ದೆ ಕಳೆದುಕೊಳ್ಳುವ ಆತಂಕ ಹೆಚ್ಚಾಗಿದೆ. ಬಿಹಾರ ವಿಧಾನಸಭೆ ಚುನಾವಣೆ ಸೋಲಿನ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ಅವರ ದೆಹಲಿ ಭೇಟಿಯ ವೇಳೆ ಹೆಚ್ಚಿನ ಚರ್ಚೆಯಾಗಿಲ್ಲ. ಆದರೆ, ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿದ ವೇಳೆ ಸಂಪುಟ ಪುನರ್‌ರಚನೆಗೆ ಹಸಿರು ನಿಶಾನೆ ತೋರಿಸಿದ್ದಾರೆ ಎಂದು ಹೇಳಲಾಗಿದೆ. ಸರ್ಕಾರ ಎರಡೂವರೆ ವರ್ಷ ಪೂರೈಸಿರುವ ಹಿನ್ನೆಲೆಯಲ್ಲಿ ಸಂಪುಟ ಪುನರ್‌ರಚನೆ ಕೈಗೊಳ್ಳಬಹುದು ಎಂದು ರಾಹುಲ್‌ಗಾಂಧಿ ಹೇಳಿದ್ದು, ಇನ್ನು ಮುಂದೆ ಯಾರನ್ನು ಕೈಬಿಡಬೇಕು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ, ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ.ವೇಣುಗೋಪಾಲ್, ರಣದೀಪ್‌ಸಿಂಗ್ ಸುರ್ಜೇವಾಲ ಅವರ ಜೊತೆ ಚರ್ಚೆ ನಡೆಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ. ಶಾಸಕರಾದ ಪಿ.ಎಂ ಅಶೋಕ್. ಎ.ಎಸ್.ಪೊನ್ನಣ್ಣ, ಬಸವರಾಜ ರಾಯರೆಡ್ಡಿ, ಅಪ್ಪಾಜಿನಾಡಗೌಡ ಮತ್ತಿತರರು ಮುಖ್ಯಮಂತ್ರಿ ಅವರ ಜೊತೆ ದೆಹಲಿಯಲ್ಲಿ ಬೀಡು ಬಿಟ್ಟಿದ್ದು, ಸಚಿವ ಸ್ಥಾನ ಗಿಟ್ಟಿಸಲು ಲಾಬಿ ನಡೆಸುತ್ತಿದ್ದಾರೆ. ಜೇವರ್ಗಿ ಶಾಸಕ ಅಜಯ್‌ಸಿಂಗ್, ದಿಢೀರ್ ದೆಹಲಿಗೆ ತೆರಳಿದ್ದು ವರಿಷ್ಠರನ್ನು ಮನವೊಲಿಸಿ ಅವಕಾಶ ಗಿಟ್ಟಿಸುವ ಪ್ರಯತ್ನ ನಡೆಸುತ್ತಿದ್ದಾರೆ. ಸಚಿವ ಸಂಪುಟ ಪುನರ್ ರಚನೆಯಲ್ಲಿ ಬಹಳಷ್ಟು ಮಂದಿ ಸಚಿವರನ್ನು ಕೈ ಬಿಡುವ ಸಾಧ್ಯತೆಯೂ ಇದೆ. ಮೂಲಗಳ ಪ್ರಕಾರ ಕೆ. ಎಚ್. ಮುನಿಯಪ್ಪ, ಎಚ್.ಸಿ. ಮಹದೇವಪ್ಪ, ಕೆ. ವೆಂಕಟೇಶ್, ಶರಣಬಸಪ್ಪ ದರ್ಶನಪುರ್, ಶಿವಾನಂದ ಪಾಟೀಲ್, ಆರ್.ಬಿ. ತಿಮಾಪುರ್, ಡಾ. ಶರಣಪ್ರಕಾಶ್ ಪಾಟೀಲ್, ಲಕ್ಷ್ಮೀ ಹೆಬ್ಬಾಳ್ಕರ್, ರಹೀಂಖಾನ್, ಡಿ. ಸುಧಾಕರ್ ಅವರು ಅವಕಾಶ ಕಳೆದುಕೊಳ್ಳುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಕೆಲವು ಸಚಿವರು ದೆಹಲಿಗೆ ಭೇಟಿ ನೀಡುತ್ತಿದ್ದು ಕುರ್ಚಿ ಭದ್ರಪಡಿಸಿಕೊಳ್ಳಲು ಹೈಕಮಾಂಡ್ ನಾಯಕರ ಮೇಲೆ ಒತ್ತಡ ಹೇರುತ್ತಿದ್ದಾರೆ. ಸಚಿವ ಸಂಪುಟ ಪುನರ್ ರಚನೆ ಹಸಿರು ನಿಶಾನೆ ಸಿಕ್ಕಿರುವ ಹಿನ್ನೆಲೆಯಲ್ಲಿ ನಾಯಕತ್ವದ ಚರ್ಚೆ ನೇಪಥ್ಯಕ್ಕೆ ಸರಿದಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸ್ಥಾನ ಅಭಾದಿತ ಎನ್ನಲಾಗುತ್ತಿದೆ. ಮೂಲಗಳ ಪ್ರಕಾರ ಹೈಕಮಾಂಡ್ ಒಪ್ಪಿದರೂ ಸ್ಥಳೀಯ ಪರಿಸ್ಥಿತಿಯಲ್ಲಿ ಸಂಪುಟ ಪುನರ್‌ರಚನೆ ಕಷ್ಟಸಾಧ್ಯ ಎನ್ನಲಾಗುತ್ತಿದೆ. ರಾಜ್ಯ ರಾಜಕಾರಣದಲ್ಲಿ ಮೂರ್ನಾಲ್ಕು ಶಕ್ತಿ ಕೇಂದ್ರಗಳು ಸೃಷ್ಟಿಯಾಗಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಂಪುಟ ಪುನರ್ ರಚನೆಯ ಪರಮಾಧಿಕಾರ ಇದ್ದರೂ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಪಟ್ಟಿಯನ್ನು ಸರಿದೂಗಿಸಬೇಕಿದೆ.

### ಮನವಿ ಪತ್ರ ತಯಾರಿಕೆ

**ಯಾರನ್ನು ಸೇರಿಸಿಕೊಳ್ಳಬೇಕು ಎಂಬ ಚರ್ಚೆಗಳು ಇಂದಿನಿಂದ ಆರಂಭವಾಗಲಿವೆ. ರಾತ್ರಿಯೇ ದೆಹಲಿಯಿಂದ ಬೆಂಗಳೂರಿಗೆ ವಾಪಸ್ ಆಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೋಮವಾರ ಸಂಜೆ ಪ್ರಧಾನಮಂತ್ರಿ ನರೇಂದ್ರಮೋದಿ ಅವರನ್ನು ಭೇಟಿ ಮಾಡಿದ ವೇಳೆ ಸಲ್ಲಿಸಬೇಕಾದ ಮನವಿ ಪತ್ರ ತಯಾರಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ದೆಹಲಿಯಲ್ಲೇ ಬೀಡು ಬಿಟ್ಟಿದ್ದು, ರಾಜಕೀಯ ಚರ್ಚೆ ನಡೆಸುತ್ತಿದ್ದಾರೆ. ಸೋಮವಾರ ಬೆಳಗ್ಗೆ ಸಿಎಂ ಸಿದ್ದರಾಮಯ್ಯ ದೆಹಲಿಗೆ ಭೇಟಿ ನೀಡುತ್ತಿದ್ದು, ಹೈಕಮಾಂಡ್ ನಾಯಕರ ಜೊತೆ ಮಹತ್ವದ ಮಾತುಕತೆ ನಡೆಸಲಿದ್ದಾರೆ.**

### ನೇಮಕಾತಿಯೂ ಪೂರ್ಣಗೊಂಡಿಲ್ಲ

**ಕಳೆದ ಎರಡೂವರೆ ವರ್ಷಗಳಿಂದ ನಿಗಮ ಮಂಡಳಿಗಳಿಗೆ ಸದಸ್ಯರು ಹಾಗೂ ನಿರ್ದೇಶಕರನ್ನು ನೇಮಿಸಲು ಸಾಧ್ಯವಾಗಿಲ್ಲ. ಖರ್ಗೆ, ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಅವರ ಪ್ರತ್ಯೇಕ ಪಟ್ಟಿಗಳು ಗೊಂದಲಕಾರಿಯಾಗಿದ್ದು, ಅದನನ್ನು ದೆಹಲಿಯಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ರಣದೀಪ್‌ಸಿಂಗ್ ಸುರ್ಜೇವಾಲ, ಕೆ.ಸಿ ವೇಣುಗೋಪಾಲ ಅವರು ಒಂದಷ್ಟು ದಿನ ತಮ ಕಚೇರಿಯಲ್ಲಿ ಕೊಳೆ ಹಾಕುವುದರಿಂದಾಗಿ ಯಾವುದು ಇತ್ಯರ್ಥವಾಗಿಲ್ಲ, ನೇಮಕಾತಿಯೂ ಪೂರ್ಣಗೊಂಡಿಲ್ಲ. ಸಚಿವ ಸಂಪುಟ ಪುನರ್‌ರಚನೆ ಚರ್ಚೆಗಳು ಆರಂಭವಾದಾಗಲೂ ಇದೇ ಪರಿಸ್ಥಿತಿ ನಿರ್ಮಾಣವಾಗಬಹುದು ಎಂದು ಹೇಳಲಾಗುತ್ತಿದೆ.**

# ಒಂಟಿ ಕುಡ್ಲು ಅರಣ್ಯ ಪ್ರದೇಶದಲ್ಲಿ ಮೇಕೆದಾಟು ಡ್ಯಾಂ ನಿರ್ಮಾಣ

## ಯೋಜನೆ ಜಾರಿಯಾದರೆ ಬಯಲು ಸೀಮೆ ಜಿಲ್ಲೆಗಳೊಂದಿಗೆ ಬೆಂಗಳೂರು ಮಹಾನಗರಕ್ಕೂ ನೀರಿನ ಅಭಾವ ನೀಗಲಿದೆ

**ಉದಯವಾಹಿನಿ, ರಾಮನಗರ**

ಬೆಂಗಳೂರು ದಕ್ಷಿಣ ಜಿಲ್ಲೆಯ ಕನಕಪುರ ತಾಲ್ಲೂಕಿನ ಮೇಕೆದಾಟು ಬಳಿ ಕಾವೇರಿ ನದಿಗೆ ಅಡ್ಡಲಾಗಿ ಸಮತೋಲಿತ ಜಲಾಶಯ ನಿರ್ಮಿಸುವ ಕರ್ನಾಟಕ ಸರಕಾರದ ಮೇಕೆದಾಟು ಯೋಜನೆಯನ್ನು ವಿರೋಧಿಸಿ ತಮಿಳುನಾಡು ಸರಕಾರ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದ್ದು, ಮೇಕೆದಾಟು ಯೋಜನೆಗೆ ಮರುಜೀವ ಬಂದಿದೆ. ಕಾವೇರಿ ನದಿಗೆ ಅಡ್ಡಲಾಗಿ ಬೃಹತ್ ಅಣೆಕಟ್ಟು ನಿರ್ಮಿಸುವ ಮೂಲಕ ಬೆಂಗಳೂರು ಸೇರಿದಂತೆ ವಿವಿಧ ಜಿಲ್ಲೆಗಳ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವುದು ಮತ್ತು ವಿದ್ಯುತ್ ಉತ್ಪಾದನೆ ಮಾಡುವುದು ಕರ್ನಾಟಕ ಸರಕಾರದ ಉದ್ದೇಶವಾಗಿತ್ತು.

**ಮೇಕೆದಾಟು ಯೋಜನೆಗೆ ಮರುಜೀವ?**

ಆದರೆ, ಕಳೆದ ಏಳು ವರ್ಷಗಳಿಂದ ತಮಿಳುನಾಡು ಸರಕಾರ ಇದಕ್ಕೆ ತಡೆ ನೀಡಬೇಕೆಂದು ಕೋರಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿ ಅಡ್ಡಗಾಲು ಹಾಕಿತ್ತು. ಕೊನೆಗೂ ಸುಪ್ರೀಂಕೋರ್ಟ್ ತಮಿಳುನಾಡು ಸರಕಾರ ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿರುವುದು ಮೇಕೆದಾಟು ಯೋಜನೆಯನ್ನು ಮುಂದುವರಿಸಲು ಹಸಿರು ನಿಶಾನೆ ಸಿಕ್ಕಿದಂತಾಗಿದೆ. ಇದು ಯೋಜನೆಯ ಲಾಭ ಪಡೆಯುವ ಬೆಂಗಳೂರು ದಕ್ಷಿಣ ಜಿಲ್ಲೆ ಸೇರಿದಂತೆ ಸಿಲಿಕಾನ್ ಸಿಟಿ ಬೆಂಗಳೂರು ಜನರ ಸಂತಸಕ್ಕೂ ಕಾರಣವಾಗಿದೆ.

**ಏನಿದು ಮೇಕೆದಾಟು ಯೋಜನೆ?:** ಕರ್ನಾಟಕ, ತಮಿಳುನಾಡು ಎರಡೂ ರಾಜ್ಯಗಳಿಗೂ ಅನುಕೂಲವಾಗುವ ಈ ಯೋಜನೆಗೆ ಈಗಾಗಲೇ ಸ್ಥಳವನ್ನೂ ಗುರುತಿಸಲಾಗಿದೆ. ವಿನಾಕಾರಣ ಸಮುದ್ರದ ಪಾಲಾಗಲಿರುವ ನೀರನ್ನು ಯೋಜಿತ ಅಣೆಕಟ್ಟೆಯಲ್ಲಿ ಸಂಗ್ರಹಿಸಿಟ್ಟುಕೊಂಡು ವಿದ್ಯುತ್ ಉತ್ಪಾದನೆ, ಬಯಲು ಸೀಮೆ ಜಿಲ್ಲೆಗಳು ಹಾಗೂ ಸ್ವಲ್ಪ ಪ್ರಮಾಣದಲ್ಲಿ ಬೆಂಗಳೂರಿಗೆ ಕುಡಿಯುವ ನೀರು ಪೂರೈಸುವ ಉದ್ದೇಶವನ್ನು ಹೊಂದಲಾಗಿದೆ.

ಈ ಯೋಜನೆಯನ್ನು ಕಾವೇರಿ ನ್ಯಾಯಾಧೀಕರಣ ತೀರ್ಪಿನಲ್ಲಿ ಕರ್ನಾಟಕಕ್ಕೆ ಹಂಚಿಕೆಯಾಗಿರುವ ನೀರಿನ ಪರಿಮಿತಿಯಲ್ಲೇ ರೂಪಿಸಲಾಗಿದೆ. ಒಂಟಿ ಕುಡ್ಲು ಅರಣ್ಯ ಪ್ರದೇಶದಲ್ಲಿ ಮೇಕೆದಾಟು ಡ್ಯಾಂ ನಿರ್ಮಾಣಗೊಳ್ಳಲಿದೆ. ಇಲ್ಲಿಂದ ಸಂಗಮ 3 ಕಿ. ಮೀ ದೂರದಲ್ಲಿದ್ದರೆ, 1.5 ಕಿ.ಮೀ ದೂರದಲ್ಲಿ ಮೇಕೆದಾಟು ಇದೆ. ಮೇಕೆದಾಟಿನಿಂದ 2 ಕಿ.ಮೀ ದೂರದಲ್ಲಿ ತಮಿಳುನಾಡು ಗಡಿ ಪ್ರಾರಂಭಗೊಳ್ಳಲಿದೆ.


ಉದಯವಾಹಿನಿ ಚಿತ್ರ

**ಕಾವೇರಿ ನೀರು ರಾಜ್ಯಕ್ಕೆ ಸದ್ಬಳಕೆ**

**ಒಂದು ವೇಳೆ ಈ ಯೋಜನೆ ಜಾರಿಯಾದರೆ ಬಯಲು ಸೀಮೆ ಜಿಲ್ಲೆಗಳೊಂದಿಗೆ ಬೆಂಗಳೂರು ಮಹಾನಗರಕ್ಕೂ ನೀರಿನ ಅಭಾವ ನೀಗಲಿದೆ. ಇದರಿಂದ ಬೆಂಗಳೂರಿಗೆ 4.75 ಟಿಎಂಸಿ ನೀರನ್ನು ಸದ್ಬಳಕೆ ಮಾಡಿಕೊಳ್ಳಬಹುದಾಗಿದೆ. ತಮಿಳುನಾಡಿಗೆ ಹೆಚ್ಚುವರಿಯಾಗಿ ಹರಿಯುತ್ತಿರುವ ಕಾವೇರಿ ನೀರು ರಾಜ್ಯಕ್ಕೆ ಸದ್ಬಳಕೆಯಾಗಲಿದೆ.**

**ಅನುಮತಿಗಾಗಿ ಸಂಸದರ ನಿಯೋಗ**

**ಸುಪ್ರೀಂ ಕೋರ್ಟಿನ ನಿರ್ಧಾರದಿಂದಾಗಿ ನನೆಗುದಿಗೆ ಬಿದ್ದಿದ್ದ ಮೇಕೆದಾಟು ಯೋಜನೆಗೆ ಮರು ಚಾಲನೆ ಸಿಗುವ ಆಸೆ ಚಿಗುರೊಡೆದಿದೆ. ಮೇಕೆದಾಟು ಯೋಜನೆಗಾಗಿ ನಮ್ಮ ನೀರು, ನಮ್ಮ ಹಕ್ಕು ಎನ್ನುತ್ತಾ ಮೇಕೆದಾಟಿನಿಂದ ಹೆಜ್ಜೆ ಹಾಕಿ ಹೋರಾಟ ಮಾಡಿದ್ದ ಕಾಂಗ್ರೆಸ್ ಸರಕಾರ ರಾಜ್ಯದಲ್ಲಿ ಅಧಿಕಾರದಲ್ಲಿರುವುದರಿಂದ ಈ ಅವಧಿಯಲ್ಲಿಯೇ ಮೇಕೆದಾಟು ಜಲಾಶಯಕ್ಕೆ ಅಡಿಗಲ್ಲು ಬೀಳುವ ನಿರೀಕ್ಷೆಯಿದೆ. ಈಗಾಗಲೇ ಈ ಬಗ್ಗೆ ಮಾತನಾಡಿರುವ ರಾಜ್ಯದ ಉಪಮುಖ್ಯಮಂತ್ರಿ, ಜಲಸಂಪನ್ಮೂಲ ಸಚಿವರೂ ಆಗಿರುವ ಡಿಕೆ ಶಿವಕುಮಾರ್, ಮೇಕೆದಾಟು ಯೋಜನೆಗೆ ಮರುಚಾಲನೆ ನೀಡುವ ಬಗ್ಗೆ ಭರವಸೆ ನೀಡಿದ್ದು, ಕೇಂದ್ರ ಸರಕಾರದ ಮೇಲೆ ಒತ್ತಡ ಹೇರಿ ಮೇಕೆದಾಟು ಯೋಜನೆಗೆ ಅಗತ್ಯ ಅನುಮತಿ ಪಡೆಯಲು ಸಂಸದರ ನಿಯೋಗದ ಜತೆ ದಿಲ್ಲಿಗೆ ಹೋಗಿ ಪ್ರಧಾನ ಮಂತ್ರಿ, ಹಾಗೂ ಕೇಂದ್ರ ಜಲಶಕ್ತಿ ಸಚಿವರನ್ನು ಭೇಟಿ ಮಾಡುವುದಾಗಿ ಹೇಳಿದ್ದಾರೆ.**

# ಮಾಗಡಿ ಕಸಮುಕ್ತ ನಗರ ಸಂಕಲ್ಪ ತ್ಯಾಜ್ಯ ಸುಸ್ಥಿರತೆ ಅರಿವು ಕಾರ್ಯಕ್ರಮ


ಉದಯವಾಹಿನಿ ಚಿತ್ರ

**ಉದಯವಾಹಿನಿ, ಮಾಗಡಿ**

ನಗರವನ್ನು ಕಸಮುಕ್ತ ನಗರವಾಗಿ ರೂಪಿಸಲಾಗುವುದು. ಸಾರ್ವಜನಿಕರು ನಮ್ಮ ಜತೆ ಕೈಜೋಡಿಸಿ, ಸುಂದರ ಪರಿಸರ ನಿರ್ಮಾಣಕ್ಕಾಗಿ ಪುರಸಭೆಯೊಂದಿಗೆ ಸಹಕರಿಸಬೇಕು ಎಂದು ಪುರಸಭೆ ಮುಖ್ಯಾಧಿಕಾರಿ ಟಿ.ಎನ್.ಶ್ರೀನಿವಾಸ್ ಮನವಿ ಮಾಡಿದರು. ಕೋಟೆ ಮೈದಾನದಲ್ಲಿ ಐಎಸ್‌ಸಿ ಪೀಪಲ್ ಫೌಂಡೇಶನ್, ಕ್ರೈಸ್ಟ್ ಕಾಲೇಜು, ಸೆಂಟ್ ಜೋಸೆಫ್ ಕಾಲೇಜು, ಮೌಂಟ್ ಕಾರ್ಮೆಲ್ ಕಾಲೇಜು ಮತ್ತು ಭಾರತೀಯ ವಿಜ್ಞಾನ ಸಂಸ್ಥೆ ಸೇರಿದಂತೆ ಹಲವು ಸಂಸ್ಥೆಗಳ ವತಿಯಿಂದ ಆಯೋಜಿಸಿದ್ದ 90 ದಿನಗಳ ನಗರ ತ್ಯಾಜ್ಯ ಮತ್ತು ಸುಸ್ಥಿರತೆ ಅರಿವು ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಪಟ್ಟಣದಲ್ಲಿ ಉತ್ಪಾದನೆಯಾಗುವ ಕಸವನ್ನು ಈಗಾಗಲೇ ಸೋಲೂರು ಕಸದ ಘಟಕಕ್ಕೆ ಕಳುಹಿಸಲಾಗುತ್ತಿದೆ. ಆದರೆ, ಘಟಕಕ್ಕೆ ಕಳುಹಿಸುವ ಮುನ್ನ ಮೂರು ಹಂತಗಳಲ್ಲಿ ಕಸದ ವಿಂಗಡಣೆ ಆಗಬೇಕಾದದ್ದು ಅತಿ ಮುಖ್ಯ. ಹಸಿ ಮತ್ತು ಒಣ ಕಸ ಮತ್ತು ಅಪಾಯಕಾರಿ ಕಸವನ್ನು ಮೂಲ ಸ್ಥಳದಲ್ಲೇ ವಿಂಗಡಿಸಿದರೆ ಮಾತ್ರ ಕಸದ ಘಟಕದಲ್ಲಿ ಸರಿಯಾದ ನಿರ್ವಹಣೆ ಸಾಧ್ಯ ಎಂದರು. ಪುರಸಭೆಯು ಐಎಸ್‌ಸಿ ಪೀಪಲ್ ಫೌಂಡೇಷನ್ ಜೊತೆ ಒಡಂಬಡಿಕೆ ಮಾಡಿಕೊಂಡಿದೆ. 'ನಡ್ ತಾನ್-2025' ಪೈಲಟ್ ಯೋಜನೆಯಡಿ 83ಕ್ಕೂ ಹೆಚ್ಚು ಕಾಲೇಜು ವಿದ್ಯಾರ್ಥಿಗಳು 90 ದಿನಗಳ ಕಾಲ ನಗರದ ತ್ಯಾಜ್ಯ ನಿರ್ವಹಣೆ ಬಗ್ಗೆ ಅಧ್ಯಯನ ನಡೆಸಿ, ವರದಿ ಸಲ್ಲಿಸಲಿದ್ದಾರೆ. ಈ ಅಧ್ಯಯನದ ಆಧಾರದ ಮೇಲೆ ಅತ್ಯುತ್ತಮ ಕ್ರಮಗಳನ್ನು ಗುರುತಿಸಿ ಅನುಷ್ಠಾನಗೊಳಿಸುವ ಮೂಲಕ ಮಾಗಡಿಯನ್ನು ಕಸಮುಕ್ತ ನಗರವಾಗಿ ಮಾಡಲು ಉದ್ದೇಶಿಸಲಾಗಿದೆ ಎಂದರು.

ಐಎಸ್‌ಸಿ ಪೀಪಲ್ ಫೌಂಡೇಶನ್ ಮುಖ್ಯ ಅಧಿಕಾರಿ ಮಹೇಶ್, ವಿದ್ಯಾರ್ಥಿಗಳು ನಗರದ ಎಲ್ಲಾ 23 ವಾರ್ಡ್, ಮಾರುಕಟ್ಟೆ ಮತ್ತು ಸಾರ್ವಜನಿಕ ಸ್ಥಳಗಳಿಗೆ ಭೇಟಿ ನೀಡಿ ಕಸಮುಕ್ತ ಕುರಿತು ಸಮಗ್ರ ಮಾಹಿತಿ ಸಂಗ್ರಹಿಸಿ ಒಂದು ವ್ಯವಹಾರ ಯೋಜನೆ ರೂಪಿಸಲಿದ್ದಾರೆ. ಈ ಯೋಜನೆಯನ್ನು ಪುರಸಭೆಗೆ ಸಲ್ಲಿಸಲಾಗುವುದು ಎಂದರು. ಕಸಮುಕ್ತ ನಗರವಾಗಿ ಮಾಡುವ ನಿಟ್ಟಿನಲ್ಲಿ ಸಾರ್ವಜನಿಕರು ನಮ್ಮ ಜತೆ ಕೈಜೋಡಿಸಿ ಸಹಕಾರ ನೀಡಿ ಸುಂದರ ಪರಿಸರ ನಿರ್ಮಾಣ ಮಾಡಲು ಪುರಸಭೆಯೊಂದಿಗೆ ಕೈಜೋಡಿಸಿ ಎಂದು ಪುರಸಭೆ ಮುಖ್ಯಾಧಿಕಾರಿ ಟಿ.ಎನ್. ಶ್ರೀನಿವಾಸ್ ಮನವಿ ಮಾಡಿದರು.

# ನಮ್ಮೂರ ಶಾಲೆಗೆ ನಮ್ಮ ಯುವಜನರು: ಆದರ್ಶ ಶಾಲೆ ಆಯ್ಕೆ

**ಉದಯವಾಹಿನಿ, ಚಿಂತಾಮಣಿ**



ಉದಯವಾಹಿನಿ ಚಿತ್ರ

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಅನುಮೋದಿತ 2025-26ನೇ ಸಾಲಿನ ಯುವ ನೀತಿ ಕಾರ್ಯಕ್ರಮದ ಅಡಿಯಲ್ಲಿ ನಮ್ಮೂರ ಶಾಲೆಗೆ ನಮ್ಮ ಯುವಜನರು ಯೋಜನೆಗೆ ಚಿಂತಾಮಣಿ ತಾಲ್ಲೂಕಿನ ಭೂಮಿಶೆಟ್ಟಿಹಳ್ಳಿ ಸರ್ಕಾರಿ ಆದರ್ಶ ಶಾಲೆ ಆಯ್ಕೆಯಾಗಿದೆ. ಪ್ರತಿ ಜಿಲ್ಲೆಗೆ ಒಂದು ಸರ್ಕಾರಿ ಶಾಲೆಯನ್ನು ಆಯ್ಕೆ ಮಾಡಲಾಗುತ್ತದೆ. ಜಿಲ್ಲೆಯಿಂದ ಆಯ್ಕೆಯಾದ ಏಕೈಕ ಶಾಲೆಯಾಗಿದೆ.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಶಾಲಾ ಶಿಕ್ಷಣ ಇಲಾಖೆ ಮತ್ತು ನೋಂದಾಯಿತ ಕ್ರೀಡಾ ಸಂಸ್ಥೆ ಆಯೋಜನೆ ಮಾಡುವ ಕ್ರೀಡಾ ಸ್ಪರ್ಧೆಗಳಲ್ಲಿ ತಾಲ್ಲೂಕು, ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಸಾಧನೆ ಮಾಡಿರುವ ಕ್ರೀಡಾಪಟುಗಳಿರುವ ಸರ್ಕಾರಿ ಶಾಲೆಗಳನ್ನು ಆಯ್ಕೆ ಮಾಡಲಾಗುತ್ತದೆ. ಆಯ್ಕೆಯಾದ ಶಾಲೆಗೆ ಒಂದು ಲಕ್ಷ ಪ್ರೋತ್ಸಾಹ ಧನ ಒದಗಿಸಲಾಗುತ್ತದೆ. ಹಿಂದೆ ಸಂಘ-ಸಂಸ್ಥೆಗಳಿಗೆ ಪ್ರೋತ್ಸಾಹಧನ ನೀಡಲಾಗುತ್ತಿತ್ತು.

ಇದೀಗ ಅದನ್ನು ನಿಲ್ಲಿಸಿ 2017-18ನೇ ಸಾಲಿನಿಂದ ಉತ್ತಮ ಕ್ರೀಡಾಪಟು ಹೊಂದಿರುವ ಸರ್ಕಾರಿ ಶಾಲೆಗೆ ನೀಡಲು ತೀರ್ಮಾನ ಕೈಗೊಳ್ಳಲಾಗಿದೆ. ಪ್ರಸಕ್ತ ಸಾಲಿನಿಂದ ಈ ಯೋಜನೆಯನ್ನು ಸಮರ್ಪಕವಾಗಿ ಜಾರಿಗೆ ತರಲು ಯುವ ಸಬಲೀಕರಣ ಮತ್ತು ಕ್ರೀಡಾ ನಿರ್ದೇಶನಾಲಯ ಕಟ್ಟುನಿಟ್ಟಿನ ಸುತ್ತೋಲೆ ಹೊರಡಿಸಿದೆ.

ಪ್ರೋತ್ಸಾಹಧನ ಪಡೆಯ ಬಯಸುವ ಸರ್ಕಾರಿ ಶಾಲೆಗಳು ತಾಲ್ಲೂಕಿನ ಹಿಂದಿನ ಸಾಲಿನಲ್ಲಿ ಕ್ರೀಡೆಯಲ್ಲಿ ಉತ್ತಮ ಸಾಧನೆ ತೋರಿಸುವ ಹೆಚ್ಚಿನ ಕ್ರೀಡಾಪಟುಗಳ ಪಟ್ಟಿ ಹಾಗೂ ದಾಖಲೆ, ದೈಹಿಕ ಶಿಕ್ಷಣ ಶಿಕ್ಷಕರ ಹೆಸರು, ಮೊಬೈಲ್ ಸಂಖ್ಯೆ ಸಿದ್ಧಪಡಿಸಿ ಜಿಲ್ಲೆಯ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರಿಗೆ ಸಲ್ಲಿಸಬೇಕು. ದಾಖಲೆ ಪರಿಶೀಲಿಸಿ ಶಾಲೆಗಳನ್ನು ಆಯ್ಕೆ ಮಾಡಲಾಗುತ್ತದೆ.

**ಯೋಜನೆ ಉದ್ದೇಶ:** ಗ್ರಾಮೀಣ ಶಾಲಾ ಮಕ್ಕಳಿಗೆ ಕ್ರೀಡಾ ಕ್ಷೇತ್ರದಲ್ಲಿ ಪ್ರೋತ್ಸಾಹ ನೀಡುವುದು ಮತ್ತು ದೇಸಿ ಕಲೆ, ಜಾನಪದ ಕ್ರೀಡೆಗಳಿಗೆ ಉತ್ತೇಜನ ನೀಡುವುದು. ಕ್ರೀಡಾ ಕ್ಷೇತ್ರಗಳಲ್ಲಿ ಉತ್ತಮ ಸಾಧನೆ ಮಾಡಿದ ಸರ್ಕಾರಿ ಶಾಲೆ ಗುರುತಿಸಿ ಅವರಿಗೆ ಪ್ರೋತ್ಸಾಹ ನೀಡಲು ಈ ಯೋಜನೆ ರೂಪಿಸಲಾಗಿದೆ.

**ಆದರ್ಶ ಶಾಲೆಯ ಕ್ರೀಡಾ ಸಾಧನೆ:** 17, 14 ವರ್ಷ ವಯೋಮಿತಿ ಒಳಪಟ್ಟ ಎರಡು ತಂಡಗಳ ಬಾಲಕಿಯರು ಕಬಡ್ಡಿಯಲ್ಲಿ, 17 ವರ್ಷ ವಯೋಮಿತಿಯ ಬಾಲಕರ ಕೊಕ್ಕೊ, 17, 14 ವರ್ಷ ವಯೋಮಿತಿಗೆ ಒಳಪಟ್ಟ ಬಾಲಕರ ಬಾಲ್ ಬ್ಯಾಡ್ಮಿಂಟನ್ ತಂಡ ತಾಲ್ಲೂಕು ಮತ್ತು ಜಿಲ್ಲಾ ಹಂತದಲ್ಲಿ ವಿಜೇತರಾಗಿ ವಿಭಾಗಮಟ್ಟಕ್ಕೆ ಆಯ್ಕೆಯಾಗಿವೆ. 14ವರ್ಷ ವಯೋಮಿತಿಗೆ ಒಳಪಟ್ಟ ಬಾಲಕಿಯರ ಬಾಲ್ ಬ್ಯಾಡ್ಮಿಂಟನ್ ತಂಡವು ರಾಜ್ಯ ಮಟ್ಟಕ್ಕೆ ಆಯ್ಕೆ ಆಗಿದೆ. ಮೌನಿಕ ಹ್ಯಾಮರ್ ಥೋ ಮೇಲಾಟದಲ್ಲಿ ದ್ವಿತೀಯ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

> **ಯುವ ಸಬಲೀಕರಣ, ಕ್ರೀಡಾ ಇಲಾಖೆ ನಮ್ಮೂರ ಶಾಲೆಗೆ ನಮ್ಮ ಯುವಜನರು ಕಾರ್ಯಕ್ರಮಕ್ಕೆ ನಮ್ಮ ಶಾಲೆ ಆಯ್ಕೆ ಆಗಿರುವುದು ಸಂತಸವಾಗಿದೆ.**
> **-ಬಿ.ಎಚ್. ಮಂಜುನಾಥ್ ಮುಖ್ಯ ಶಿಕ್ಷಕ**

> **ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಪ್ರೋತ್ಸಾಹ ಧನಕ್ಕೆ ಆಯ್ಕೆ ಆಗಿರುವುದು ಸಾಧನೆ ಮತ್ತು ಶ್ರಮದ ಪ್ರತಿಫಲ. ಆಧುನಿಕ ಕ್ರೀಡಾ ಸಾಮಗ್ರಿ ಖರೀದಿಸಿ ಉನ್ನತ ಸಾಧನೆ ಮಾಡಲು ಕ್ರೀಡಾಪಟುಗಳಿಗೆ ತರಬೇತಿ ನೀಡಲಾಗುವುದು**
> **-ಎನ್.ಪರಮೇಶ್ವರ್ ದೈಹಿಕ ಶಿಕ್ಷಣ ಶಿಕ್ಷಕ**

# ಅಧಿಕಾರಿಗಳಿಗೆ ಉಪಲೋಕಾಯುಕ್ತ ಬಿ.ವೀರಪ್ಪ ತರಾಟೆ

**ಉದಯವಾಹಿನಿ, ತುಮಕೂರು**

ನಗರ ಹೊರವಲಯದಲ್ಲಿ ಗಣಿಗಾರಿಕೆ ಎಗ್ಗಿಲ್ಲದೆ ನಡೆಯುತ್ತಿದ್ದು, ಅರಣ್ಯ ಇಲಾಖೆ ನಿದ್ರಾವಸ್ಥೆಗೆ ಜಾರಿದೆ. ನೀವು ಪ್ರತಿ ತಿಂಗಳು ಸಂಬಳ ಎಣಿಸಿಕೊಂಡು ಮನೆಗೆ ಹೋಗಿ' ಎಂದು ಉಪಲೋಕಾಯುಕ್ತ ಬಿ.ವೀರಪ್ಪ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ತಾಲ್ಲೂಕಿನ ಅಮಲಾಪುರ, ಅಜ್ಜಪ್ಪನಹಳ್ಳಿ ಬಳಿಯ ಕ್ರಷರ್ ಗಣಿಗಾರಿಕೆ ಸ್ಥಳಕ್ಕೆ ಶನಿವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ನಿಯಮ ಉಲ್ಲಂಘಿಸಿ ಗಣಿಗಾರಿಕೆ ನಡೆಸುತ್ತಿರುವುದು ಕಂಡು ಬಂತು. ಅಧಿಕಾರಿಗಳು ಅರಣ್ಯ ಜಾಗದಲ್ಲಿ ಗಣಿಗಾರಿಕೆ ನಡೆಸಲು ಬಿಟ್ಟು, ಕೆರೆಯಲ್ಲಿ ಗಿಡ ಬೆಳೆಸುತ್ತಿದ್ದಾರೆ. ಕಂದಾಯ ಇಲಾಖೆಯವರಿಗೆ ಇದು ಗೊತ್ತೇ ಇಲ್ಲ ಎಂದರು. ಕ್ರಷರ್ ಮಾಲೀಕರು ತಮಗಿಷ್ಟ ಬಂದಂತೆ ಗುಡ್ಡ ಕೊರೆದಿದ್ದಾರೆ. ಯಾವುದೇ ಗಡಿ ಗುರುತಿಸಿಲ್ಲ. ಬೆಂಚ್ ಮಾರ್ಕ್, ಬಫರ್ ರೋನ್ ಸಹ ಇಲ್ಲ. ಎಲ್ಲಾ ಹೊಡೆದುಕೊಂಡು ಹೋಗಿದ್ದಾರೆ. ಗಡಿಯಿಂದ ಮೂರು ಕಡೆ 7 ಮೀಟರ್ ಬಫರ್ ಬಿಡಬೇಕು. ಎಲ್ಲಿ ಬಿಟ್ಟಿದ್ದಾರೆ ತೋರಿಸಿ ಎಂದು ಅಧಿಕಾರಿಗಳನ್ನು ಪ್ರಶ್ನಿಸಿದರು. ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಅರಣ್ಯ ಇಲಾಖೆ ಮತ್ತು ಕಂದಾಯ ಇಲಾಖೆ ಅಧಿಕಾರಿಗಳ ಮಧ್ಯೆ ಸಮನ್ವಯದ ಕೊರತೆ. ಅವರ ಪಾಡಿಗೆ ಅವರು ಕೆಲಸ ಮಾಡುತ್ತಿದ್ದಾರೆ. ಕ್ವಾರಿ, ಕ್ರಷರ್ ಮಾಲೀಕರು ಭೂಮಿಯಲ್ಲಿ ಸಿಕ್ಕಿದ್ದನೆಲ್ಲಾ ಕೊರೆಯುತ್ತಾರೆ. ಮುಂದೊಂದು ದಿನ ಭೂಮಿಯನ್ನು ಅಸ್ಥಿಪಂಜರದಂತೆ ನೋಡಬೇಕಾದ ಪರಿಸ್ಥಿತಿ ಬರುತ್ತದೆ ಎಂದು ಕಳವಳ ವ್ಯಕ್ತಪಡಿಸಿದರು. ಅರಣ್ಯ ಪ್ರದೇಶದ ಜಾಗ ದಾಟಿಕೊಂಡು ಗುಡ್ಡಕ್ಕೆ ಹೋಗಬೇಕು. ಬೆಟ್ಟದಲ್ಲಿ ಗಣಿಗಾರಿಕೆಗೆ ಅವಕಾಶ ಕೊಟ್ಟವರು ಯಾರು? ಅಭಿವೃದ್ಧಿ ಅಸಮಾತೋಲನವಾದರೆ ಯಾರೂ ಉಳಿಯುವುದಿಲ್ಲ. ನಿಯಮ ಉಲ್ಲಂಘಿಸಿ, ಅರಣ್ಯ ಜಾಗ ಕೊಳ್ಳೆ ಹೊಡೆದವರ ವಿರುದ್ಧ ಕೂಡಲೇ ಪ್ರಕರಣ ದಾಖಲಿಸುವಂತೆ ಅಧಿಕಾರಿಗಳಿಗೆ ನಿರ್ದೇಶಿಸಿದರು. ಗಣಿ ಇಲಾಖೆ ಅಧಿಕಾರಿಗಳನ್ನೂ ತರಾಟೆಗೆ ತೆಗೆದುಕೊಂಡರು. ಕ್ರಷರ್‌ನಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರಿಗೆ ಅಗತ್ಯ ಸೌಲಭ್ಯ ಕಲ್ಪಿಸಬೇಕು. ಕಾರ್ಮಿಕ ಇಲಾಖೆ ಅಧಿಕಾರಿಗಳು ನೋಂದಣಿಗೆ ಕ್ರಮ ವಹಿಸಬೇಕು. ಮಾಲೀಕರಿಂದ ಕಾರ್ಮಿಕರಿಗೆ ವಿಮೆ ಮಾಡಿಸಬೇಕು. ತುರ್ತಾಗಿ ಈ ಎಲ್ಲಾ ಕೆಲಸ ಆಗಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು.


ಉದಯವಾಹಿನಿ ಚಿತ್ರ

**ಸೂರು ನೀರು ಕೊಡಿ:** ಅಮಲಾಪುರದ ಬಳಿ ವಾಸವಿರುವ ಹಕ್ಕಿಪಿಕ್ಕಿ ಹಂದಿಜೋಗಿ ಕುಟುಂಬಗಳಿಗೆ ಸೂರು ನೀರು ಸೇರಿ ಅಗತ್ಯ ಸೌಲಭ್ಯ ಕಲ್ಪಿಸುವಂತೆ ಬಿ.ವೀರಪ್ಪ ಅಧಿಕಾರಿಗಳಿಗೆ ಸೂಚನೆ ನೀಡಿದರು. 2018ರಲ್ಲಿ ನಿವೇಶನ ಹಂಚಿಕೆ ಮಾಡಲಾಗಿದೆ. ಇದುವರೆಗೆ ಮೂಲಭೂತ ಸೌಕರ್ಯ ಕೊಟ್ಟಿಲ್ಲ. ಒಂದು ಜೋರಾದ ಮಳೆಯಾದರೆ ಮುಗಿಯಿತು. ಗಣಿಗಾರಿಕೆ ಕ್ವಾರಿಗಳಿಂದ ಕಲ್ಲು ಉರುಳಿ ಬಿದ್ದರೆ ಎಷ್ಟು ಜನ ಉಳಿಯುತ್ತಾರೆ ಎಂಬುವುದು ಗೊತ್ತಿಲ್ಲ. ತುಮಕೂರು ಪಕ್ಕದಲ್ಲಿಯೇ ಇಂತಹ ಸ್ಥಿತಿ ಇದೆ. ಅಧಿಕಾರಿಗಳು ಏನು ಮಾಡುತ್ತಿದ್ದಾರೆ ಎಂದು ಕುಟುಕಿದರು. ಕೈ ಮುಗಿದು ಕೇಳುತ್ತೇನೆ ಕೆಲಸ ಮಾಡಿ.... ಅಮಲಾಪುರದ ಹಕ್ಕಿಪಿಕ್ಕಿ ಜನರನ್ನು ನೋಡಿದರೆ ಹೊಟ್ಟೆ ಉರಿಯುತ್ತದೆ. ಸಂಬಂಧಪಟ್ಟ ಅಧಿಕಾರಿಗಳಿಗೆ ಕೈ ಮುಗಿದು ಕೇಳಿಕೊಳ್ಳುತ್ತೇನೆ. ದಯವಿಟ್ಟು ಕೆಲಸ ಮಾಡಿ ಇಲ್ಲದಿದ್ದರೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳುತ್ತೇನೆ. ಮತ್ತೆ ನಿಮಗೆ ನಮಸ್ಕಾರ ಮಾಡುವುದಿಲ್ಲ. ಆಗ ನನ್ನ ಪೆನ್ನು ಕೆಲಸ ಮಾಡುತ್ತದೆ' ಎಂದು ಎಚ್ಚರಿಸಿದರು. ನಗರದ ಜಿ.ಪಂ.ನಲ್ಲಿ ನಡೆದ ವಿಚಾರಣೆ ಸಮಯದಲ್ಲಿ ಈ ರೀತಿ ಹೇಳಿದರು.

# ತಡೆಯಾಜ್ಞೆ ತೆರವು; ಆಸ್ತಿ ಜಪ್ತಿಗೆ ಕ್ರಮ

**ಉದಯವಾಹಿನಿ, ಮಂಡ್ಯ**

ಮೈಷುಗರ್ ಕಾರ್ಖಾನೆ ಅಧ್ಯಕ್ಷರಾಗಿದ್ದ ನಾಗರಾಜಪ್ಪ ಅವರ ಅವಧಿಯಲ್ಲಿ ನಡೆದಿದ್ದ ನೂರಾರು ಕೋಟಿ ರೂಪಾಯಿ ಅವ್ಯವಹಾರ ಪ್ರಕರಣದಲ್ಲಿ ಚರ- ಸ್ಥಿರಾಸ್ತಿ ಜಪ್ತಿಗೆ ಲೋಕಾಯುಕ್ತರು ಆದೇಶಿಸಿದ್ದರು. ಈ ಪ್ರಕರಣದಲ್ಲಿ ಹೈಕೋರ್ಟ್ ನೀಡಿದ್ದ ತಡೆಯಾಜ್ಞೆಯು ಈಗ ತೆರವುಗೊಂಡಿದ್ದು, ಆದೇಶ ಪ್ರತಿ ಕೈಸೇರಿದ ಬಳಿಕ ಆಸ್ತಿಯನ್ನು ವಶಪಡಿಸಿಕೊಳ್ಳಲು ಶೀಘ್ರ ಕ್ರಮ ಕೈಗೊಳ್ಳಲಾಗುವುದು ಎಂದು ಕಾರ್ಖಾನೆ ಅಧ್ಯಕ್ಷ ಸಿ.ಡಿ. ಗಂಗಾಧರ ಹೇಳಿದರು.

ನಾಗರಾಜಪ್ಪ ಮೇಲಿನ ಅವ್ಯವಹಾರದ ಆರೋಪಗಳು ಸಾಬೀತಾದ ಹಿನ್ನೆಲೆಯಲ್ಲಿ ಕಾರ್ಖಾನೆಗೆ ಉಂಟಾಗಿರುವ ನಷ್ಟವನ್ನು ಮರುಪಾವತಿಸಿಕೊಳ್ಳುವಂತೆ ಸೂಚಿಸಿತ್ತು. ಅದರಂತೆ 127 ಕೋಟಿ ವಸೂಲಿಗೆ ಉಪ ಲೋಕಾಯುಕ್ತರಾಗಿದ್ದ ಬಿ.ಎಸ್. ಪಾಟೀಲ್ ಅವರು 2022ರಲ್ಲಿ ಆದೇಶ ಹೊರಡಿಸಿದ್ದರು. ಈ ಆದೇಶಕ್ಕೆ ನಾಗರಾಜಪ್ಪ ಅವರು ಹೈಕೋರ್ಟ್‌ನಿಂದ ತಡೆಯಾಜ್ಞೆ ತಂದಿದ್ದರು ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ಈಗಾಗಲೇ ಬಾಯಿಂಗ್ ಹೌಸ್‌ಗೆ ಅಗತ್ಯವಿರುವ 60 ಕೋಟಿ ಹಣ ಬಿಡುಗಡೆ ಮಾಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದ್ದು, ಆ ಹಣವನ್ನು ತಂದು ಕಾರ್ಖಾನೆ ಅಭಿವೃದ್ಧಿಪಡಿಸಲಾಗುವುದು ಎಂದು ಭರವಸೆ ನೀಡಿದರು.

2024ರ ಡಿಸೆಂಬರ್‌ನಲ್ಲಿ ಮಂಡ್ಯದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಮೈಷುಗರ್ ವತಿಯಿಂದ ಮಾಧ್ಯಮಗಳಿಗೆ ಜಾಹೀರಾತು ನೀಡಿದ ವಿಷಯದಲ್ಲಿ ಯಾವುದೇ ಲೋಪವಾಗಿಲ್ಲ. ಆದರೂ ಈ ಬಗ್ಗೆ ಭಿನ್ನಾಭಿಪ್ರಾಯಗಳು ಬಂದಿರುವುದು ಮನಸ್ಸಿಗೆ ನೋವುಂಟು ಮಾಡಿದೆ ಎಂದು ಬೇಸರ ವ್ಯಕ್ತಪಡಿಸಿದರು.

**ಕೇಂದ್ರ ಸಚಿವರ ಅಸಹಕಾರ ಆರೋಪ**



**ಕೇಂದ್ರ ಸಚಿವ ಕುಮಾರಸ್ವಾಮಿ ಅವರು ಮೈಷುಗರ್ ಕಾರ್ಖಾನೆ ಅಭಿವೃದ್ಧಿ, ಮೈಷುಗರ್ ಶಾಲೆಯ ಅಭಿವೃದ್ಧಿಗೆ ಆರ್ಥಿಕ ನೆರವು ನೀಡಲು ಸಾಧ್ಯವಾಗುವುದಿಲ್ಲವೆಂದು ಕೈಚೆಲ್ಲಿದ್ದಾರೆ. ಹಣ ಒದಗಿಸಲು ಸಾಧ್ಯವಾಗದಿರುವ ಬಗ್ಗೆ ಇತ್ತೀಚೆಗೆ ಮಂಡ್ಯದಲ್ಲಿ ನಡೆದ ಸಭೆಯಲ್ಲಿ ಅಸಹಾಯಕತೆ ವ್ಯಕ್ತಪಡಿಸಿದ್ದಾರೆ. ಮುಂದಿನ ದಿನಗಳಲ್ಲಿ ನಾವೇ ಕಾರ್ಖಾನೆ ಮತ್ತು ಶಾಲೆಯ ಅಭಿವೃದ್ಧಿಗೆ ಹಣ ಹೊಂದಿಸಿಕೊಡುವ ಬಗ್ಗೆ ಸಚಿವರು ಶಾಸಕರೊಂದಿಗೆ ಕುಳಿತು ಚರ್ಚಿಸಿ ಸರ್ಕಾರದ ಗಮನಸೆಳೆಯಲಾಗುವುದು.**
**- ಸಿ.ಡಿ. ಗಂಗಾಧರ್, ಮೈಷುಗರ್ ಅಧ್ಯಕ್ಷ**

# ಸುಳ್ಳು ಆರೋಪಕ್ಕೆ ಬಿಹಾರದ ಫಲಿತಾಂಶವೇ ಉತ್ತರ

**ಉದಯವಾಹಿನಿ, ಮೈಸೂರು**



ಪ್ರಜಾಪ್ರಭುತ್ವ ವ್ಯವಸ್ಥೆಯ ಆತ್ಮದಂತಿರುವ ಚುನಾವಣಾ ಪ್ರಕ್ರಿಯೆ ಅಣಕಿಸುವಂತಹ ಕಾಂಗ್ರೆಸ್‌ನ ಹಲವು ನಿರಾಧಾರ ಆರೋಪಗಳಿಗೆ ಬಿಹಾರದ ಪ್ರಜ್ಞಾವಂತ ಮತದಾರರು ಉತ್ತರ ನೀಡಿದ್ದಾರೆ ಎಂದು ಮಾಜಿ ಮೇಯರ್ ಸಂದೇಶ್ ಸ್ವಾಮಿ ತಿಳಿಸಿದ್ದಾರೆ. ಕಾಂಗ್ರೆಸ್ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಗೆದ್ದಾಗ ಅದರ ನಾಯಕರು ಚಕಾರವೆತ್ತುವುದಿಲ್ಲ. ಆದರೆ ಸೋತಾಗ ಇವಿಎಂ ಯಂತ್ರ, ಮತಗಳ್ಳತನ, ಚುನಾವಣಾ ಆಯೋಗದ ವಿರುದ್ಧ ಆರೋಪ ಮಾಡುತ್ತಾರೆ.

ಅನೈತಿಕ ಮಾರ್ಗದಲ್ಲಿ ರಾಜಕೀಯ ನಡೆಸುವ ಹೀನ ಸ್ಥಿತಿ ಬಿಜೆಪಿಗಿಲ್ಲ. ಸುಳ್ಳು ಆರೋಪಗಳಿಗೆ ಮತದಾರ ಉತ್ತರಿಸಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಬಿಹಾರ ಫಲಿತಾಂಶವು ದೇಶದ ರಾಜಕಾರಣಕ್ಕೆ ಮಹತ್ವದ ಸಂದೇಶ ರವಾನಿಸಿದೆ.

ಜನರಿಗೆ ಉಚಿತ ಗ್ಯಾರಂಟಿಗಳ ಮೂಲಕ ಅಮಿಷವೊಡ್ಡಿದರೂ ಅಂತಿಮವಾಗಿ ಉತ್ತಮ ಆಡಳಿತ ನೀಡುವವರನ್ನು ಜನ ಆಶೀರ್ವದಿಸುತ್ತಾರೆ ಎನ್ನುವುದು ಸ್ಪಷ್ಟವಾಗಿದೆ. ಗ್ಯಾರಂಟಿಗಳ ಗಲಾಟೆ ನಡುವೆ ಅಂತಿಮವಾಗಿ ಗೆಲ್ಲುವುದು ಜನಾಭಿಪ್ರಾಯವೇ ಎನ್ನುವುದು ಗ್ಯಾರಂಟಿಯಾಗಿದೆ ಎಂದು ಹೇಳಿದ್ದಾರೆ.

# ಮಿನಿ ನ್ಯೂಸ್

## ರಾಗಿ ಕಟಾವು ಯಂತ್ರ ಗಂಟೆಗೆ 2,800 ರೂ. ಬಾಡಿಗೆ

**ಉದಯವಾಹಿನಿ, ಚಿಕ್ಕಬಳ್ಳಾಪುರ**

ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನಲ್ಲಿ ರಾಗಿಯು 47,748 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದೆ. ಹೀಗೆ ದೊಡ್ಡ ಪ್ರಮಾಣದಲ್ಲಿ ರಾಗಿ ಬಿತ್ತನೆಯಾಗಿದೆ. ಬಹುತೇಕ ರೈತರು ರಾಗಿ ಬೆಳೆಯನ್ನು ಕಟಾವು ಯಂತ್ರಗಳ ಮೂಲಕ ಕಟಾವು ಮಾಡುತ್ತಿದ್ದಾರೆ. ಖಾಸಗಿ ರಾಗಿ ಕಟಾವು ಯಂತ್ರಗಳ ಮಾಲೀಕರು ರೈತರಿಂದ ಪ್ರತಿ ಗಂಟೆಗೆ 3,500ರಿಂದ 4,000 ಬಾಡಿಗೆ ದರ ನಿಗದಿಪಡಿಸುತ್ತಿರುವುದು ಗಮನಕ್ಕೆ ಬಂದಿದೆ. ಇದರಿಂದ ರೈತರಿಗೆ ಹೆಚ್ಚಿನ ಆರ್ಥಿಕ ಹೊರೆಯಾಗಲಿದೆ. ಈ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ರಾಗಿ ಕಟಾವು ಮಾಡಲು ಯಂತ್ರಕ್ಕೆ ಪ್ರತಿ ಗಂಟೆಗೆ 2,800 ಮೀರದಂತೆ ಬಾಡಿಗೆ ನಿಗದಿಪಡಿಸಿದೆ. ನಿಗದಿತ ಮೊತ್ತಕ್ಕಿಂತ ಹೆಚ್ಚು ಹಣ ವಸೂಲಿ ಮಾಡಿದರೆ ರಾಗಿ ಕಟಾವು ಯಂತ್ರದ ಮಾಲೀಕರ ವಿರುದ್ಧ ವಿಪತ್ತು ನಿರ್ವಹಣೆ ಕಾಯ್ದೆ 2005ರ ಪ್ರಕಾರ ಕಾನೂನು ಕ್ರಮಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಆದೇಶಿಸಿದ್ದಾರೆ.

## ಬಿರ್ಸಾ ಮುಂಡಾರನ್ನು ಹುಡುಕುತ್ತಾ ಸಂಶೋಧನಾ ಕೃತಿ ಬಿಡುಗಡೆ


ಉದಯವಾಹಿನಿ ಚಿತ್ರ

**ಉದಯವಾಹಿನಿ, ಗುಡಿಬಂಡೆ**

ಬಿರ್ಸಾ ಮುಂಡಾ ಜಾರ್ಖಂಡ್ ರಾಜ್ಯದಲ್ಲಿ ಬುಡಕಟ್ಟು ಜನಾಂಗದವರ ಮುಕ್ತಿಗಾಗಿ ಹೋರಾಟ ಮಾಡಿದವರು. ಜಾರ್ಖಂಡ್ ದೇಶದ ಬಡತನದಲ್ಲಿ ಎರಡನೇ ಸ್ಥಾನ ಪಡೆದುಕೊಂಡಿದೆ ಎಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಕೆ.ಎಂ.ನಯಾಜ್ ಅಹ್ಮದ್ ಹೇಳಿದರು. ಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ ಹಾಗೂ ಪ್ರಥಮ ದರ್ಜೆ ಕಾಲೇಜಿನ ಸಹಯೋಗದಲ್ಲಿ ಆಯೋಜಿಸಿದ್ದ ಕೆ.ಎಂ ನಯಾಜ್ ಅಹ್ಮದ್ ಅವರ ಬಿರ್ಸಾ ಮುಂಡಾರನ್ನು ಹುಡುಕುತ್ತಾ ಸಂಶೋಧನಾ ಕೃತಿ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದರು. ವಿದ್ಯಾರ್ಥಿಗಳು ಮಹಾನ್ ನಾಯಕರನ್ನು ಹೆಚ್ಚು ಓದಿ ಅಧ್ಯಯನ ಮಾಡಿ ವಿಚಾರಗಳನ್ನು ತಿಳಿದುಕೊಳ್ಳುವಂತೆ ಆಗಬೇಕು ಎಂದು ಶಾಸಕ ಎಸ್.ಎನ್ ಸುಬ್ಬಾರೆಡ್ಡಿ ಹೇಳಿದರು.

## ಮಹಿಳೆಯೊಬ್ಬರ ಸಾವಿನ ಬಗ್ಗೆ ಅನುಮಾನ: ದೂರು ದಾಖಲು

**ಉದಯವಾಹಿನಿ, ಚಿಕ್ಕನಾಯಕನಹಳ್ಳಿ**

ತಾಲ್ಲೂಕಿನ ಶೆಟ್ಟಿಕೆರೆ ಹೋಬಳಿ ಗೌಡನಹಳ್ಳಿ ತೋಟದ ಮನೆಯಲ್ಲಿ ಗೌರಮ್ಮ (55) ಮೃತಪಟ್ಟಿದ್ದು, ಸಾವಿನ ಬಗ್ಗೆ ಅನುಮಾನ ವ್ಯಕ್ತಪಡಿಸಿ ಗೌರಮ್ಮ ಅವರ ಮಗ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಗೌರಮ್ಮ, ಆಕೆಯ ಮಗ ಇಬ್ಬರೇ ತೋಟದ ಮನೆಯಲ್ಲಿ ವಾಸವಿದ್ದರು. ಕೆಲಸದ ನಿಮಿತ್ತ ಬೇರೆ ಊರಿಗೆ ಹೋಗಿದ್ದ ಮಗ, ಮಧ್ಯಾಹ್ನ ತಾಯಿಯ ಮೊಬೈಲ್‌ಗೆ ಕರೆ ಮಾಡಿದಾಗ ಸ್ವಿಚ್ ಆಫ್ ಆಗಿರುವುದನ್ನು ಕಂಡು ಗಾಬರಿಗೊಂಡಿದ್ದರು. ತಕ್ಷಣ ಮನೆಗೆ ಮರಳಿದಾಗ ಗೌರಮ್ಮ ಮೃತಪಟ್ಟಿರುವುದು ತಿಳಿದುಬಂದಿದೆ. ಸಾವಿನ ಕುರಿತು ಅನುಮಾನ ವ್ಯಕ್ತಪಡಿಸಿ ಪಟ್ಟಣದ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಜಮೀನು ವಿಚಾರವಾಗಿ ನಮಗೂ ಮತ್ತು ನಮ್ಮ ದೊಡ್ಡಪ್ಪ ಅವರಿಗೂ ಆಗ್ಗಾಗ್ಗೆ ಜಗಳ ನಡೆಯುತ್ತಿತ್ತು. ಈ ಘಟನೆಗೂ ಅವರಿಗೂ ಸಂಬಂಧವಿದೆ ಎಂದು ಆರೋಪಿಸಿದ್ದಾರೆ. ಪ್ರಕರಣ ದಾಖಲಾಗಿದೆ.

## ನಿಷ್ಕ್ರಿಯ ಖಾತೆಗಳಲ್ಲಿರುವ 110 ಕೋಟಿಗೆ ವಾರಸುದಾರರೇ ಇಲ್ಲ

**ಉದಯವಾಹಿನಿ, ತುಮಕೂರು**

ಜಿಲ್ಲೆಯ ವಿವಿಧ ಬ್ಯಾಂಕ್‌ಗಳ ನಿಷ್ಕ್ರಿಯ ಖಾತೆಗಳಲ್ಲಿರುವ 110.45 ಕೋಟಿ ಹಣವನ್ನು ವಾರಸುದಾರರಿಗೆ ತಲುಪಿಸಲು ಮೂರು ತಿಂಗಳ ಕಾಲ ನಿಮ್ಮ ಹಣ ನಿಮ್ಮ ಹಕ್ಕು ಅಭಿಯಾನವನ್ನು ಆರ್‌ಬಿಐ ಹಮ್ಮಿಕೊಂಡಿದೆ. ನಗರದ ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್ ಆಗಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ವತಿಯಿಂದ ಆಯೋಜಿಸಿದ್ದ ಜಾಗೃತಿ ಕಾರ್ಯಕ್ರಮದಲ್ಲಿ ಬ್ಯಾಂಕ್ ವ್ಯವಸ್ಥಾಪಕ ಚೈತನ್ಯ ಕಂಚಿಬೈಲು ಈ ಬಗ್ಗೆ ಮಾಹಿತಿ ನೀಡಿದರು.

ಜಿಲ್ಲೆಯಲ್ಲಿ 26 ಬ್ಯಾಂಕ್‌ಗಳ 373 ಶಾಖೆಗಳಲ್ಲಿ 4,11,477 ಖಾತೆಗಳು ನಿಷ್ಕ್ರಿಯಗೊಂಡಿವೆ. ಈ ಖಾತೆಗಳಲ್ಲಿ ಒಟ್ಟು 110.45 ಕೋಟಿ ಹಣ ಇದೆ. ಸಂಬಂಧಿಸಿದವರು ಅಗತ್ಯ ದಾಖಲೆ ಸಲ್ಲಿಸಿ ಖಾತೆ ಸಕ್ರಿಯಗೊಳಿಸಬಹುದು. 10 ವರ್ಷಗಳಿಂದ ಖಾತೆ ನಿಷ್ಕ್ರಿಯಗೊಂಡಿದ್ದರೆ ಅದು ಆರ್‌ಬಿಐಗೆ ವರ್ಗಾವಣೆ ಆಗಿರುತ್ತದೆ. ಅಂತಹ ಖಾತೆಯನ್ನೂ ಸಕ್ರಿಯಗೊಳಿಸಲಾಗುವುದು ಎಂದರು.

ಮೃತಪಟ್ಟ ಗ್ರಾಹಕರ ಸಂಬಂಧಿಕರು ಅಗತ್ಯ ದಾಖಲೆ ನೀಡಿ ಖಾತೆಯಲ್ಲಿರುವ ಹಣ ಪಡೆಯಬಹುದು. ನಿಷ್ಕ್ರಿಯಗೊಂಡಿರುವ ಬ್ಯಾಂಕ್ ಖಾತೆ ಸಕ್ರಿಯಗೊಳಿಸುವ ಪ್ರಕ್ರಿಯೆ ಡಿಸೆಂಬರ್ ವರೆಗೆ ನಡೆಯಲಿದೆ ಎಂದು ಹೇಳಿದರು.

# ಬೇಡಿಕೆ ಈಡೇರಿಕೆಗೆ ಕರ್ನಾಟಕ ರಾಜ್ಯ ರೈತ ಸಂಘ ಸದಸ್ಯರ ಅಹೋರಾತ್ರಿ ಧರಣಿ

## ಹುಸಿಯಾದ ರೈತರ ನಿರೀಕ್ಷೆ : 18ಕ್ಕೆ ಬಹಿರಂಗ ಪ್ರತಿಭಟನಾ ಸಮಾವೇಶ : ಸರ್ಕಾರದ ಮೇಲೆ ನಂಬಿಕೆ ಕಳೆದುಕೊಂಡ ರೈತ ಸಂಘ

**ಉದಯವಾಹಿನಿ, ಗುಂಡ್ಲುಪೇಟೆ**

ಐದು ರೈತಪರ ಬೇಡಿಕೆ ಈಡೇರಿಕೆಗೆ ಕರ್ನಾಟಕ ರಾಜ್ಯ ರೈತ ಸಂಘ ಸದಸ್ಯರ ಅಹೋರಾತ್ರಿ ಧರಣಿ 33 ದಿನಗಳನ್ನ ಪೂರೈಸಿದೆ, ಆದರೆ ಬೇಡಿಕೆ ಈಡೇರಿಕೆಗೆ ಅಧಿಕಾರಿಗಳು ಚುನಾಯಿತ ಜನಪ್ರತಿನಿಧಿಗಳು ನೀಡಿದ ಭರವಸೆ ಹುಸಿಯಾದ ಹಿನ್ನೆಲೆ ನ.18ಕ್ಕೆ ಬಹಿರಂಗ ಪ್ರತಿಭಟನಾ ಸಮಾವೇಶ ಹಮ್ಮಿಕೊಳ್ಳಲಾಗಿದ್ದು ರಾಜ್ಯ ಘಟಕದ ನಾಯಕರುಗಳು ಭಾಗವಹಿಸಲಿದ್ದಾರೆ ಎಂದು ಚಾಮರಾಜನಗರ ಜಿಲ್ಲಾಧ್ಯಕ್ಷ ಶಿವಪುರ ಮಹದೇವಪ್ಪ ತಿಳಿಸಿದ್ದಾರೆ.

> **33 ದಿನಗಳಿಂದ ಅಹೋರಾತ್ರಿ ಧರಣಿ ಚಳುವಳಿಯಲ್ಲಿ ತೊಡಗಿರುವ ರೈತರಿಗೆ ನಮ್ಮ ನೇರ ಬೆಂಬಲವಿದೆ, ರೈತಪರವಾಗಿ ಕೆಲಸ ಮಾಡುವಲ್ಲಿ ಸರ್ಕಾರದ ಉಸ್ತುವಾರಿ ಸಚಿವರು, ಜಿಲ್ಲಾಡಳಿತ ಸಂಪೂರ್ಣವಾಗಿ ವಿಫಲವಾಗಿದೆ, ದೇಶದ ಬೆನ್ನುಲುಬು ರೈತನನ್ನ ನಿಷ್ಠೂರವಾಗಿ ನಡೆಸಿಕೊಳ್ಳುತ್ತಿರುವುದು ಖಂಡನೀಯ, ಕೂಡಲೇ ಸಂಬಂಧಪಟ್ಟ ಇಲಾಖೆ ಜತೆ ಚರ್ಚಿಸಿ ಸಮಸ್ಯೆ ಬಗೆಹರಿಸಲಿ.**
> **-ಹಳ್ಳಿಕೆರೆಹುಂಡಿ ಭಾಗ್ಯರಾಜ್, ಕಬ್ಬು ಬೆಳೆಗಾರರ ಸಂಘ.**

ಪಟ್ಟಣದ ತಹಶೀಲ್ದಾರ್ ಕಚೇರಿ ಆವರಣದಲ್ಲಿ ಕಳೆದ 33 ದಿನಗಳಿಂದ ಅಹೋರಾತ್ರಿ ಧರಣಿಯಲ್ಲಿ ತೊಡಗಿರುವ ರೈತರ ನಿರಂತರ ಹೋರಾಟದ ಕುರಿತು ಸೊಲ್ಲೆತ್ತದ ಸಂಸದ ಸಚಿವರ ವಿರುದ್ಧವೂ ರೈತ ಸಂಘಟನೆ ನಾಯಕರು ಆಕ್ರೋಶ ಹೊರಹಾಕುವ ಜೊತೆಗೆ ಶಿವಪುರ ಮಹದೇವಪ್ಪ ನೇತೃತ್ವದಲ್ಲಿ ಮುಂದುವರಿಯುತ್ತಿರುವ ಧರಣಿಗೆ ನೈತಿಕ ಬೆಂಬಲ ಘೋಷಿಸಿದ್ದಾರೆ.


ಉದಯವಾಹಿನಿ ಚಿತ್ರ

> **ಕಳೆದ ಒಂದು ತಿಂಗಳುಗಳಿಂದ ಧರಣಿಯಲ್ಲಿ ತೊಡಗಿರುವ ರೈತರಿಗೆ ನಮ್ಮ ನೈತಿಕ ಬೆಂಬಲವಿದೆ, ಧರಣಿ ನಿರತರ ಬೇಡಿಕೆ ಈಡೇರಿಸಲು ಇಲಾಖೆಗಳು ಪರದಾಡುತ್ತಿರೋದು ಯಾಕೆ? ರೈತರ ಸಂಕಷ್ಟಗಳಿಗೆ ಸಕಾಲಕ್ಕೆ ಸ್ಪಂದಿಸಬೇಕಿರುವ ಅಧಿಕಾರಿಗಳ ಅಸಡ್ಡೆತನದ ಕಿವಿಹಿಂಡುವಂತಹ ಕಾರ್ಯಕ್ಕೆ ಸರ್ಕಾರ ಮುಂದಾಗಬೇಕು ಇಲ್ಲವಾದಲ್ಲಿ ರೈತಕುಲದ ವಿಶ್ವಾಸವನ್ನೇ ಕಳೆದುಕೊಳ್ಳಬೇಕಾಗುತ್ತದೆ. ತಹಶೀಲ್ದಾರ್ ಕಚೇರಿ ಆವರಣದಲ್ಲಿ ರೈತರು ನ್ಯಾಯಯುತ ಬೇಡಿಕೆಗೆ ಧರಣಿಗೆ ಮುಂದಾಗಿರುವುದು ಸರಿಯಾಗಿದೆ.**
> **-ಹೊನ್ನೂರು ಪ್ರಕಾಶ್, ಸಾಮೂಹಿಕ ನಾಯಕತ್ವ ರೈತ**

ಕೆರೆಗಳಿಗೆ ನೀರು ತುಂಬಿಸಲು ಸರ್ಕಾರ ಮುತುವರ್ಜಿವಹಿಸಬೇಕಿತ್ತು, ಕಾಲಕಾಲಕ್ಕೆ ಯಂತ್ರಗಳ ಕಾರ್ಯಕ್ಷಮತೆ ಗುಣಮಟ್ಟದ ಮೇಲೆ ನಿಗಾವಹಿಸಬೇಕಿದ್ದ ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ತಮ್ಮದಲ್ಲದ ಜವಾಬ್ದಾರಿ ಎಂಬಂತೆ ಮೈಮರೆತಿದ್ದು, ಅರಣ್ಯ ಇಲಾಖೆಯಿಂದ ನಿರಾಪೇಕ್ಷಣ ಪತ್ರಕ್ಕಾಗಿ ರೈತರಿಂದ ಅಹವಾಲುಗಳು ಕ್ರೂಡಿಕೃತವಾಗುತ್ತಲಿದ್ದರು ಎಚ್ಚೆತ್ತುಕೊಳ್ಳದೆ ನಿರ್ಲಕ್ಷ್ಯತನದ ಪ್ರಮಾದ ಎಸಗಿದ್ದು, ಒಂದಷ್ಟು ಮಂದಿ ರೈತರಿಗೆ ಸಾಗುವಳಿ ವಿತರಿಸಿ ಉಳಿದ ಅರ್ಜಿಗಳನ್ನ ಪಕ್ಕಕ್ಕೆ ಸರಿಸಿಟ್ಟ ಕಂದಾಯ ಇಲಾಖೆ ಅಸಡ್ಡೆ ಈ ಮಟ್ಟದ ಧರಣಿಗೆ ಕಾರಣವಾಗಬಹುದು ಎಂಬ ಗ್ರಹಿಕೆ ಇಲ್ಲವಾದ ಕಾರಣ ಗುಂಡ್ಲುಪೇಟೆ ಇತಿಹಾಸದಲ್ಲೇ ಅಹೋರಾತ್ರಿ ಧರಣಿ ನಿರಂತರವಾಗಿ ನಡೆಯುತ್ತಿರುವುದು ಇದೆ ಮೊದಲಾಗಿದ್ದು ನಿಷ್ಕ್ರಿಯಗೊಂಡಿದ್ದ ಆಡಳಿತ ವ್ಯವಸ್ಥೆಗೆ ರೈತರು ಚಳುವಳಿ ಚಡಿಯೇಟು ನೀಡುವ ಮೂಲಕ ಎಚ್ಚರಿಸಿದ್ದಾರೆ.

ಹೋರಾಟ ನಿರತ ರೈತರ ಪ್ರಶ್ನೆಗಳಿಗೆ ಉತ್ತರಿಸಲಾಗದ ಹೀನಾಯ ಸ್ಥಿತಿಗೆ ತಲುಪಿರುವ ಇಲಾಖೆಗಳು ತರೇಹವಾರಿ ಸಬೂಬು ಹೇಳಿ ಕಾಲಹರಣ ಮಾಡುತ್ತಿವೆಯೇ ಹೊರತು ಸಮಸ್ಯೆ ಬಗೆಹರಿಸುವ ಕಡೆ ಗಮನಹರಿಸುತ್ತಿಲ್ಲ, ಅ.13ರಲ್ಲಿ ಧರಣಿಗೆ ಮುಂದಾದ ಶಿವಪುರ ಮಹದೇವಪ್ಪ ನೇತೃತ್ವದ ಸದಸ್ಯರು ಅಧಿಕಾರಿಗಳ ಕಾರ್ಯಕ್ಷಮತೆ ಕುರಿತು ಸಾರ್ವಜನಿಕವಾಗಿ ಬಹಿರಂಗಗೊಳಿಸುತ್ತ ಹೋದ ಹಿನ್ನೆಲೆ ತರಾತುರಿಯಲ್ಲಿ ಭೇಟಿಯಾದವರ ಶ್ರೇಣಿಕೃತರಲ್ಲಿ ಸಮಸ್ಯೆ ಬಗೆಹರಿಸುವ ಯಾವುದೇ ಪ್ರಕ್ರಿಯೆ ನಡೆಯದಿರುವುದು ಧರಣಿ ನಿರತರಿಗೆ ಬೇಸರ ತಂದಿದೆ.

**ರೈತ ಹೋರಾಟಕ್ಕೆ ಮಕಾಡೆ ಮಲಗಿದ ಸರ್ಕಾರಗಳು**


**ವಿವಿಧ ಸಂಧರ್ಭಗಳಲ್ಲಿ ಹಲವು ಬೇಡಿಕೆಗಳ ಹಕ್ಕೊತ್ತಾಯಗಳಿಗೆ ಆಗ್ರಹಿಸಿ ರೈತ ಸಂಘ ನಡೆಸಿರುವ ಹೋರಾಟ ಸೋತಿರುವ ಇತಿಹಾಸವೇ ಇಲ್ಲ ಆದರೆ ಅನ್ನದಾತನ ಹೋರಾಟಕ್ಕೆ ಮಕಾಡೆ ಮಲಗಿದ ಉದಾಹರಣೆಗಳನ್ನ ಕಾಣಬಹುದಾಗಿದೆ, ಇತ್ತೀಚೆಗೆ ನಡೆದ ದೇವನಹಳ್ಳಿ ಹೋರಾಟವು ರೈತಾಪಿ ವರ್ಗದ ಸಾಂಘಿಕ ಒಗ್ಗಟ್ಟಿನ ಬಲದಿಂದ ಗೆದ್ದು ಬೀಗಿದನ್ನ ಸರ್ಕಾರಗಳಾಗಲಿ ಅಧಿಕಾರಿಗಳಾಗಲಿ ಮರೆಯುವಂತಿಲ್ಲ. ಒಟ್ಟಾರೆಯಾಗಿ ರೈತ ಸಂಘ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಅವರ ಮಾರ್ಗದರ್ಶನದಲ್ಲಿ ಶಿವಪುರ ಮಹದೇವಪ್ಪ, ಹಂಗಳ ದಿಲೀಪ್ ನೇತೃತ್ವದ ಹೋರಾಟ ಜನರ ವಿಶ್ವಾಸಗಳಿಸುವಲ್ಲಿ ಯಶಕಂಡಿದೆ.**

**ಧರಣಿಗೆ ನೈತಿಕ ಬೆಂಬಲ**

ಅಂತರಾಳದಿಂದ..
EDITORIAL

# ಮತ್ತೆ ಸುದ್ದಿಯಲ್ಲಿರುವ ಕ್ಷಯ

ಇತ್ತೀಚೆಗೆ ಭಾರತ ನಕಲಿ ಔಷಧಿಗಳ ಕಾರಣಕ್ಕೆ ಸುದ್ದಿಯಾಗಿತ್ತು. ಈ ಔಷಧಿಗಳನ್ನು ಸೇವಿಸಿ ಮಕ್ಕಳು ಮೃತಪಟ್ಟಿದ್ದಲ್ಲದೆ, ನೂರಾರು ಮಕ್ಕಳು ಆಸ್ಪತ್ರೆಗೆ ದಾಖಲಾದರು. ಒಂದೆಡೆ ರೋಗಿಗಳು ಔಷಧಿಯ ಕೊರತೆಗಳಿಂದ ಸಾವನ್ನಪ್ಪುತ್ತಿದ್ದರೆ ಮತ್ತೊಂದೆಡೆ ನಕಲಿ ಔಷಧಿಗಳಿಂದ ಆರೋಗ್ಯ ಕೆಡಿಸಿಕೊಳ್ಳುತ್ತಿದ್ದಾರೆ. ಹೀಗೆ ನಕಲಿ ಔಷಧಿಗಳಿಗೆ ಬಲಿಯಾಗುವವರು ಬಡವರ್ಗಕ್ಕೆ ಸೇರಿದ ಜನರೇ ಆಗಿರುವುದು ಆಕಸ್ಮಿಕವಲ್ಲ. ನಕಲಿ ಔಷಧಿ ಕಂಪೆನಿಗಳು ಇಂತಹ ವರ್ಗವನ್ನು ಗುರಿಯಾಗಿಸಿಕೊಂಡೇ ಔಷಧಿಗಳನ್ನು ತಯಾರಿಸುತ್ತವೆ. ಇದೀಗ ದೇಶದಲ್ಲಿ ಹೆಚ್ಚಿರುವ ಕ್ಷಯ ರೋಗ ಪ್ರಕರಣಗಳಿಗೆ ಸಂಬಂಧಿಸಿದಂತೆ ವಿಶ್ವಸಂಸ್ಥೆಯು ವರದಿಯೊಂದನ್ನು ಬಿಡುಗಡೆ ಮಾಡಿದೆ. 2024ರಲ್ಲಿ ಭಾರತದಲ್ಲಿ ಅತ್ಯಧಿಕ ಕ್ಷಯ ರೋಗ ಪ್ರಕರಣಗಳು ವರದಿಯಾಗಿವೆ. ಇಂಡೋನೇಶ್ಯ ಫಿಲಿಫೀನ್ಸ್, ಚೀನಾ, ಪಾಕಿಸ್ತಾನಕ್ಕಿಂತ ಹೆಚ್ಚಿನ ಪ್ರಮಾಣದ ಕ್ಷಯ ರೋಗ ಪ್ರಕರಣಗಳು ಭಾರತದಲ್ಲಿವೆ ಎಂದು ವಿಶ್ವ ಆರೋಗ್ಯ ಸಂಸ್ಥೆಯ ಜಾಗತಿಕ ಕ್ಷಯ ರೋಗ ವರದಿಯಲ್ಲಿ ಉಲ್ಲೇಖಿಸಲಾಗಿದೆ. ವಿಶ್ವಕ್ಕೆ ಹೋಲಿಸಿದರೆ, ಶೇ. 25ರಷ್ಟು ಕ್ಷಯ ಪ್ರಕರಣಗಳು ಭಾರತದಲ್ಲೇ ಇವೆ.



ಈ ಜಗತ್ತು 2030ರಲ್ಲಿ ಕ್ಷಯರೋಗ ಮುಕ್ತವಾಗಬೇಕು ಎಂದು ಗುರಿ ಹಾಕಿಕೊಂಡಿದೆ. ಭಾರತವು ಎರಡು ವರ್ಷಗಳ ಹಿಂದೆ 2025ರಲ್ಲಿ ಕ್ಷಯ ಮುಕ್ತವಾಗುವ ಬಗ್ಗೆ ಹೇಳಿಕೊಂಡಿತ್ತು. ಆದರೆ ಭಾರತದ ಕನಸು ಈಡೇರಿಲ್ಲ. ಕ್ಷಯ ರೋಗ ಇಳಿಕೆಯಲ್ಲಿ ಭಾರತ ಸಾಧನೆ ಮಾಡಿದೆ ಎಂದು ಹೇಳಿಕೊಳ್ಳುತ್ತದೆಯಾದರೂ, ಇಂದಿಗೂ ಭಾರತ ವಿಶ್ವದಲ್ಲಿ ಕ್ಷಯ ರೋಗಕ್ಕಾಗಿ ಅಗ್ರಸ್ಥಾನದಲ್ಲಿರುವುದು ಹೆಮ್ಮೆ ಪಡುವ ವಿಷಯ ಖಂಡಿತಾ ಅಲ್ಲ. ಕೊರೋನ ಸಂದರ್ಭದಲ್ಲಿ ಭಾರತವು ಲಸಿಕೆ ತಯಾರಿಕೆಯ ಮೂಲಕ ವಿಶ್ವದಲ್ಲಿ ಸುದ್ದಿ ಮಾಡಿತು. ಆದರೆ ಈ ಅವಧಿಯಲ್ಲಿ ಕ್ಷಯ ರೋಗಕ್ಕೆ ಮೀಸಲಾಗಿರುವ ದುಡ್ಡನ್ನು ಸರಕಾರ ಕೊರೋನ ಲಸಿಕೆಗಳಿಗೆ ವರ್ಗಾಯಿಸಿರುವುದು ಕ್ಷಯ ರೋಗ ಪ್ರಕರಣಗಳನ್ನು ಹೆಚ್ಚಿಸಿತು ಎನ್ನುವ ಅಭಿಪ್ರಾಯವಿದೆ. ಕೊರೋನೋತ್ತರ ದಿನಗಳಲ್ಲಿ ಭಾರತದ ಕ್ಷಯ ರೋಗಿಗಳು ತೀವ್ರ ಔಷಧ ಅಭಾವವನ್ನು ಎದುರಿಸಿದರು. ರೋಗಿಗಳು ಬೀದಿಗಿಳಿದು ಪ್ರತಿಭಟನೆ ನಡೆಸಿದರು.

**ಭಾರತ ಕ್ಷಯ ರೋಗಕ್ಕಾಗಿ ಗುರುತಿಸಲ್ಪಟ್ಟಿರುವುದು ಇಂದು ನಿನ್ನೆಯಲ್ಲ. 2022ನೇ ವರ್ಷದ ಅಂತ್ಯಕ್ಕೆ ಭಾರತದಲ್ಲಿ 24.2 ಲಕ್ಷ ಕ್ಷಯ ರೋಗಿಗಳನ್ನು ಗುರುತಿಸಲಾಗಿದೆ. 2021ಕ್ಕೆ ಹೋಲಿಸಿದರೆ ಇದು ಶೇ. 13ರಷ್ಟು ಹೆಚ್ಚಳ ಎಂದು ಸರಕಾರದ ದಾಖಲೆಗಳೇ ಹೇಳುತ್ತವೆ. ಜಗತ್ತಿನ ಒಟ್ಟು ಕ್ಷಯ ರೋಗಿಗಳಲ್ಲಿ ನಾಲ್ಕನೇ ಒಂದು ಭಾಗ ಭಾರತದಲ್ಲೇ ಇದ್ದಾರೆ ಎಂದು ಅಂಕಿಅಂಶಗಳು ಹೇಳುತ್ತವೆ. ಜಗತ್ತು ಕ್ಷಯ ಮುಕ್ತವಾಗಲು ಇಂದು ಭಾರತವೇ ಬಹುದೊಡ್ಡ ಅಡ್ಡಿ ಅನ್ನಿಸಿಕೊಂಡಿದೆ.**

ಇವೆಲ್ಲವೂ ಭಾರತದಲ್ಲಿ ಕ್ಷಯರೋಗ ಪ್ರಕರಣಗಳನ್ನು ಹೆಚ್ಚಿಸುವಂತೆ ಮಾಡಿದವು. ಕ್ಷಯರೋಗವನ್ನು ಬರೇ ಒಂದು ರೋಗವಾಗಿಯಷ್ಟೇ ನೋಡುವಂತಿಲ್ಲ. ಅದು ಭಾರತದ ಒಟ್ಟು ಸಾಮಾಜಿಕ ಸ್ಥಿತಿಗತಿಗೆ ಹಿಡಿದ ಕನ್ನಡಿಯಾಗಿದೆ. ಕ್ಷಯರೋಗವು ಈ ದೇಶದ ಪೌಷ್ಟಿಕತೆಯೊಂದಿಗೆ ನೇರ ಸಂಬಂಧವನ್ನು ಹೊಂದಿದೆ. ದೇಶವು ಹಸಿವಿನ ಸೂಚ್ಯಂಕದಲ್ಲಿ ಅತ್ಯಂತ ಕಳಪೆ ಸಾಧನೆ ಮಾಡಿರುವುದು ಮತ್ತು ಕ್ಷಯರೋಗದಲ್ಲಿ ಅಗ್ರ ಸ್ಥಾನವನ್ನು ಹೊಂದಿರುವುದಕ್ಕೆ ಪರಸ್ಪರ ಸಂಬಂಧವಿದೆ. ಪೌಷ್ಟಿಕ ಆಹಾರದ ಕೊರತೆಯನ್ನು ಎದುರಿಸುವ, ಹಸಿವಿನಿಂದ ಕಂಗಾಲಾಗಿರುವ ಜನರ ಮೇಲೆ ಕ್ಷಯ ರೋಗಾಣು ಸುಲಭದಲ್ಲಿ ಎರಗುತ್ತವೆ. ಕ್ಷಯ ರೋಗಿಗಳನ್ನು ತಕ್ಷಣ ಗುರುತಿಸಿ ಅವರಿಗೆ ಔಷಧಿಗಳನ್ನು ನೀಡುವ ಹಾಗೂ ಪೌಷ್ಟಿಕ ಆಹಾರವನ್ನು ಒದಗಿಸುವ ಕೆಲಸ ಜೊತೆ ಜೊತೆಗೆ ನಡೆಯಬೇಕು. ಇಲ್ಲವಾದರೆ ರೋಗ ಶೀಘ್ರದಲ್ಲಿ ಗುಣವಾಗುವುದಿಲ್ಲ. ಒಬ್ಬನಲ್ಲಿ ಕ್ಷಯ ರೋಗ ಪತ್ತೆಯಾದರೆ ಅದು ಕೇವಲ ಒಂದೆರಡು ತಿಂಗಳಲ್ಲಿ ಗುಣವಾಗುವುದಿಲ್ಲ. ಕನಿಷ್ಠ ಆರೇಳು ತಿಂಗಳು ನಿರಂತರವಾಗಿ ಔಷಧಿಗಳನ್ನು ಪಡೆದುಕೊಳ್ಳಬೇಕು. ಒಂದೆರಡು ತಿಂಗಳು ಔಷಧಿಗಳನ್ನು ಪಡೆದು ಏಕಾಏಕಿ ನಿಲ್ಲಿಸಿದರೆ ಇನ್ನಷ್ಟು ಭೀಕರವಾಗಿ ಅದು ರೋಗಿಯ ಮೇಲೆ ಎರಗಬಹುದು. ಈ ಸುದೀರ್ಘ ಔಷಧಿ ಸೇವನೆ ಮತ್ತು ಪೌಷ್ಟಿಕ ಆಹಾರ ಸೇವನೆಗೆ ಯಾವುದೇ ಅಡ್ಡಿ ಎದುರಾಗಬಾರದು. ಆದರೆ ಭಾರತದಲ್ಲಿ ಕ್ಷಯಕ್ಕೆ ಅಗತ್ಯವಾಗಿರುವ ಲಿನೆರೊಲಿಡ್, ಕ್ಲೋಫಾಜಿಮೈನ್, ಸೈಕ್ಲೋಸೆರೈನ್ ಮೊದಲಾದ ಔಷಧಿಗಳ ಕೊರತೆಯಿದೆ ಎನ್ನುವ ಆರೋಪ ಬಹುಕಾಲದಿಂದ ಕೇಳಿ ಬರುತ್ತಿದೆ. ಭಾರತದಲ್ಲಿ ಅಧಿಕೃತವಾಗಿ ಗುರುತಿಸಲ್ಪಡದ ಕ್ಷಯರೋಗಿಗಳ ಸಂಖ್ಯೆಯೂ ದೊಡ್ಡ ಪ್ರಮಾಣದಲ್ಲಿದೆ. ಇವರು ಇತರರಿಗೂ ರೋಗವನ್ನು ಹರಡುತ್ತಾ ಹೋಗುವುದು ರೋಗವನ್ನು ತಡೆಯಲು ಬಹುದೊಡ್ಡ ಅಡ್ಡಿಯಾಗಿದೆ. ಸಾರ್ವಜನಿಕ ಆಸ್ಪತ್ರೆಗಳಲ್ಲಿ ಸೌಲಭ್ಯಗಳ ಕೊರತೆ, ಔಷಧಿಗಳನ್ನು ಸಕಾಲದಲ್ಲಿ ಪೂರೈಕೆ ಮಾಡದೇ ಇರುವುದು ಇವೆಲ್ಲವೂ ಕ್ಷಯರೋಗವನ್ನು ಎದುರಿಸಲು ಇರುವ ಸವಾಲುಗಳಾಗಿವೆ. ಕ್ಷಯ ರೋಗವು ಬಡವರ ಪಾಲಿನ ರೋಗವೆಂದು ಗುರುತಿಸಲ್ಪಟ್ಟಿದೆ. ಸರಕಾರ ಇವುಗಳನ್ನು ಮುಚ್ಚಿಡಲು ಪ್ರಯತ್ನಿಸಿದಷ್ಟೂ ಅದು ಹೆಚ್ಚುತ್ತಾ ಹೋಗುತ್ತದೆ. ದೇಶದಲ್ಲಿ ಹೆಚ್ಚುತ್ತಿರುವ ಬಡತನ, ಅಪೌಷ್ಟಿಕತೆಯನ್ನು ಒಪ್ಪಿಕೊಳ್ಳಲು ನಮ್ಮ ಸರಕಾರ ಈಗಲೂ ಸಿದ್ಧವಿಲ್ಲ. ಆದುದರಿಂದಲೇ ಅವುಗಳ ಜೊತೆಗೆ ತಳಕು ಹಾಕಿಕೊಂಡಿರುವ ಕ್ಷಯದಂತಹ ರೋಗಗಳನ್ನು ತಡೆಯಲು ಸರಕಾರ ವಿಫಲವಾಗುತ್ತಿದೆ. ಮಲಿನಗೊಂಡಿರುವ ನದಿಗಳ ನೀರನ್ನು ಬಳಸುವುದು, ವಾತಾವರಣ ದಿನದಿಂದ ದಿನಕ್ಕೆ ಕೆಡುತ್ತಿರುವುದು, ಕೊಳೆಗೇರಿಗಳಲ್ಲಿ ಹೆಚ್ಚಳ ಇವೆಲ್ಲವೂ ಕ್ಷಯ ರೋಗಕ್ಕೆ ಪೂರಕವಾಗಿವೆ. ಇವೆಲ್ಲದರ ವಿರುದ್ಧ ಸರಕಾರ ಪ್ರಾಮಾಣಿಕವಾಗಿ ಕ್ರಮ ಕೈಗೊಂಡಾಗ ಕ್ಷಯರೋಗವನ್ನು ತಡೆಯುವ ಯೋಗ್ಯತೆಯನ್ನು ಸರಕಾರ ತನ್ನದಾಗಿಸಿಕೊಳ್ಳುತ್ತದೆ.

# ರಾಮಾಯಣ



## ರಾವಣನು ಸೀತಾದೇವಿಗೆ ಹೇಳಿದ ಸಮಾಧಾನ

• ಹಿಂದಿನ ಸಂಚಿಕೆಯಿಂದ **120ನೆಯ ಅಧ್ಯಾಯ**

ದೇವಮಂದಿರಕ್ಕೆ ಸರಿಯಾದ ಉಪ್ಪರಿಗೆಗಳಿಂದಲೂ ಮೇಲುಮಚ್ಚು ಮಾಳಿಗೆಗಳಿಂದಲೂ ಸರ್ವಾಭರಣಭೂಷಿತರಾದ ಅನೇಕ ಸಾವಿರ ಮಂದಿ ಸ್ತ್ರೀಯರಿಂದಲೂ ನಾನಾ ಪ್ರಕಾರವಾದ ಕ್ರೀಡಾಮೃಗಗಳಿಂದಲೂ ಪಕ್ಷಿಗಳಿಂದಲೂ ನಾನಾರತ್ನ ಮಯವೂ ಸುವರ್ಣಮಯವೂ ಸ್ಫಟಿಕಶಿಲಾಮಯವೂ ರಜತಮಯವೂ ವಜ್ರವೈಡೂರ್ಯಮಯವೂ ಎನಿಸಿದ ಮನೋಹರವಾದ ಕಂಭಗಳಿಂದಲೂ ದೇವದುಂದುಭಿಧ್ವನಿಯಿಂದಲೂ ಪುಟವಿಕ್ಕಲ್ಪಟ್ಟ ಚಿನ್ನದ ಎಲೆಗಳ ತೋರಣ ಗಳಿಂದಲೂ ಮನೋಹರವಾದ ಆ ಅರಮನೆಯನ್ನು ತೋರಿಸಿದನು. ರತ್ನಗಳಿಂದ ಅಲಂಕೃತವಾಗಿ ಸುವರ್ಣಮಯವಾದ ಸೋಪಾನಗಳನ್ನು ಹತ್ತಿ ಗಜದಂತಗಳಿಂದಲೂ ಬೆಳ್ಳಿಯಿಂದಲೂ ನಿರ್ಮಿಸಲ್ಪಟ್ಟ ಗವಾಕ್ಷಗಳನ್ನು ವರ್ಣಿಸಿ ಹೇಳಿದನು.

ಸುವರ್ಣಮಯವಾದ ಜಾಲಂದರಗಳುಳ್ಳ ಹಾಲುಗಾರೆಯಿಂದ ಮನೋಹರವಾದ ನೆಲಕಟ್ಟುಗಳುಳ್ಳ ಉಪ್ಪರಿಗೆಗಳ ಸಮೂಹಗಳನ್ನು ತೋರಿಸಿದನು. ಆ ರಾವಣನು ನಾನಾಪ್ರಕಾರವಾದ ಸ್ಪಷ್ಟಗಳಿಂದಟ್ಟಣಿಸಿದ ಉದ್ಯಾನವನಗಳನ್ನು ತೋರಿಸಿ ಪತಿವ್ರತೆಯೂ ಶೋಕಪರಾಯಣೆಯು ಆಗ ಆ ದೇವಿಯನ್ನು ಅನುಕೂಲಪಡಿಸಿಕೊಳ್ಳ ಬೇಕೆಂದು ಆಕೆಯನ್ನು ಕುರಿತು ಈ ಮಾತುಗಳನ್ನದನು: ಸೀತೆ ನನಗೆ ಮೂವತ್ತೆರಡು ಕೋಟಿ ರಾಕ್ಷಸರ ಬಲವಿದೆ. ಅವರೆಲ್ಲರಿಗೂ ನಾನೋನೇ ದೊರೆ. ನನ್ನ ಬಳಿಯಲ್ಲಿ ಯಾವಾಗಲೂ ಸಾವಿರ ಮಂದಿ ಊಳಿಗದವರು ಕಾರಿದ್ದಾರೆ. ಇಂಥ ರಾಜ್ಯಾಧಿಪತ್ಯವನ್ನು ನಿನ್ನ ಅಧೀನಮಾಡುತ್ತೇನೆ. ನನ್ನ ಜೀವ ನಿನ್ನ ವಶವಾಗಿ ಮಾಡುತ್ತೇನೆ. ನೀನು ಪ್ರಾಣಿಗಳಿಗಿಂತಲೂ ಅಧಿಕಳು. ನನಗೆ ಅನೇಕ ಸಾವಿರ ಮಂದಿ ಸ್ತ್ರೀಯರಿದ್ದಾರೆ. ನೀನು ಅವರೆರಿಗೂ ನನಗೂ ಒಡತಿಯಾಗಿರು. ನಿನ್ನ ಮನಸ್ಸಿನಲ್ಲಿ ಮತ್ತೊಂದು ಯೋಜನೆಯನ್ನು ಮಾಡದೆ ನನಗ. ಕೂಲಳಾಗು, ಕಾಮಬಾಣಗಳಿಂದ ಗಾಯ ಪಡೆದ ನನ್ನನ್ನು ಕೃಪೆಮಾಡಿ ರಕ್ಷಿಸು. ಈ ಲಂಕಾಪಟ್ಟವು ನೂರುಗಾವುದ ವಿಸ್ತಾರವುಳ್ಳ ಸಮುದ್ರದಿಂದ ಪರಿವೇಷ್ಟಿತವಾಗಿದೆ. ಈ ಪಟ್ಟಣವು ದೇವ ದಾನವ ಮಾನವರಲ್ಲಿ ಯಾರಿಗೂ ಸಾಧ್ಯವಾದದ್ದಲ್ಲ, ದೇವತೆಗಳಲ್ಲಿಯೂ ಪಾತಾಳಲೋಕದಲ್ಲಿರುವ ನಾಗರಲ್ಲಿಯೂ ಭೂಮಿಯಲ್ಲಿರುವ ಮನುಷ್ಯರಲ್ಲಿಯೂ ನನ್ನ ಪರಾಕ್ರಮಕ್ಕೆ ಸಮಾನವಾದ ಪರಾಕ್ರಮವುಳ್ಳವರಿಲ್ಲ! ಸೀತಾದೇವಿ, ರಾಜ್ಯಭ್ರಷ್ಟನೂ ಅಲ್ಪಾಯುಷ್ಯವುಳ್ಳವನೂ ದೈನ್ಯವೃತ್ತಿಯನ್ನಾಶ್ರಯಿಸಿದವನೂ ಅಲ್ಪತೇಜಸ್ಕನೂ ಮನುಷ್ಯನೂ ಆದ ರಾಮನಿಂದ ನಿನಗೇನಾಗಬೇಕು ನಿನ್ನ ರೂಪಲಾವಣ್ಯಗಳಿಗೆ ಸರಿಯಾದ ನನ್ನನ್ನು ಪತಿಯಾಗಿವರಿಸು.

ಯೌವನವು ನಿತ್ಯವಾದುದಲ್ಲ. ಆದ್ದರಿಂದ ನನ್ನನ್ನು ಅಂಗೀಕರಿಸಿ ನನ್ನೊಡನೆ ರಮಿಸು, ಇನ್ನು ರಾಮನನ್ನು ಕಣ್ಣಿಂದಲೂ ಕಾಣಲು ಸಾಧ್ಯವಿಲ್ಲ. ಆತನು ಇಲ್ಲಿಗೆ ಬರುವುದಕ್ಕೂ ಈ ಪಟ್ಟಣವನ್ನು ಮನಸ್ಸಿನಲ್ಲಿ ನೆನೆಯುವುದಕ್ಕೂ ಶಕ್ತನಲ್ಲ. ಅಂತರಿಕ್ಷಮಾರ್ಗದಲ್ಲಿ ಸಂಚರಿಸುವ ವಾಯುವನ್ನು ನಿಲ್ಲಿಸುವುದಕ್ಕೂ ಪ್ರಜ್ವಲಿಸುವ ಅಗ್ನಿಜ್ವಾಲೆಯನ್ನು ಕೈಯಲ್ಲಿಟ್ಟುಕೊಳ್ಳುವುದಕ್ಕೂ ಹೇಗೆ ಸಾಧ್ಯವಿಲ್ಲವೋ ಹಾಗೆ ಈ ಲಂಕಾಪಟ್ಟಣಕ್ಕೆ ಬಂದು ನನ್ನ ಬಾಹುಬಲದಿಂದ ಪರಿಪಾಲಿಸಲ್ಪಟ್ಟಿರುವ ನಿನ್ನನ್ನು ಕರೆದುಕೊಂಡು ಹೋಗುವುದಕ್ಕೆ ಯಾರಿಗೂ ಸಾಧ್ಯವಿಲ್ಲ. ನೀನು ಈ ಪಟ್ಟಣದಲ್ಲಿದ್ದುಕೊಂಡು ಸಮಸ್ತ ರಾಜ್ಯವನ್ನೂ ಪರಿಪಾಲಿಸು. ನನ್ನಂಥ ಅನೇಕ ರಾಕ್ಷಸರೂ ಇಂದ್ರಾದಿದೇವತೆಗಳೂ ನಿನ್ನ ಸೇವಕರಾಗಿರುವರು.

**ಮುಂದುವರಿಯುವುದು...**

# ನಮ್ಮ ಮನೆಗಳಲ್ಲಿ ಕನ್ನಡದಲ್ಲಿ ಮಾತನಾಡುವುದನ್ನೇ ನಿಲ್ಲಿಸಿ ಬಿಟ್ಟೆವಾ.? ಒಂದು ಸಂಶಯ....!

• ಉದಯವಾಹಿನಿ, ವಿಶೇಷ

ಡೋರ್ ಲಾಕ್ ಮಾಡಿಕೊಳ್ಳಿ , ನಾನು ಹೋಗಿ ಬರ್ತಿನಿ ಡೋರ್ ಲಾಕ್ ಮಾಡಿಕೋ. ನನ್ನ ಕೀಸ್ ಎಲ್ಲಿ, ಇಲ್ಲಿ ಕೀಸ್ ಪದಕ್ಕೆ ಬದಲಾಗಿ ಅಚ್ಚಕನ್ನಡ ಪದ ಬಳಸಬಹುದಲ್ಲವೇ...ಇಲ್ಲ ನಾವು ಬಳಸುವುದಿಲ್ಲ. ಕಾರಣ, ಒಂದು ಇಪ್ಪತ್ತು, ಇಪ್ಪತ್ತೈದು ವರ್ಷಗಳ ಹಿಂದೆ ಬಾಗಿಲು ಹಾಕ್ಕೊಳ್ಳಿ, ಕದಾ ಹಾಕ್ಕೊಳ್ಳಿ, ಬೀಗ ಹಾಕಿ, ಚಿಲಕ ಹಾಕಿ ಎನ್ನುತ್ತಿದ್ದೆವು. ನಮ್ಮ ಚಿಕ್ಕಂದಿನ ಕನ್ನಡ ಮಾತುಗಳನ್ನು ಕ್ರಮೇಣ ಮರೆಯುತ್ತಿದ್ದೇವೆ. ನಮ್ಮ ಮನೆಗಳಲ್ಲಿ ಇದುವರೆಗೂ ಬಳಸುತ್ತಿದ್ದ ಕನ್ನಡ ಪದಗಳನ್ನು ನಮ್ಮ ಮಕ್ಕಳಿಗೆ ರೂಢಿ ಮಾಡಿಸುವುದನ್ನು ಬಿಟ್ಟು ನಾವೇ ಇತರ ಭಾಷೆಯ ಪದಗಳನ್ನು ನಮ್ಮ ಕನ್ನಡದಲ್ಲಿ ಬೆರೆಸುತ್ತಿದ್ದೇವೆ. ನಾವು ಹೀಗೇಕೆ ಬದಲಾದೆವು ? ನಮ್ಮ ಕನ್ನಡದಲ್ಲಿ ಪದಗಳ ಕೊರತೆಯೇ? ಹಾಗೇನಿಲ್ಲ, ಕನ್ನಡದ ಪದಕೋಶ ಸಂಪದ್ಭರಿತವಾಗಿದೆ. ಆದರೂ, ನಾವು ಪ್ರಯೋಗಿಸುವುದಿಲ್ಲ ಅಷ್ಟೆ. ಅಡುಗೆ ಮನೆ ಕಿಚನ್ ಆಗಿದೆ. ಬಚ್ಚಲು ಮನೆ ಬಾತ್ರೂಂ ಆಗಿದೆ ಹಾಗೆನೇ ಚಾವಡಿ, ಹಜಾರ, ನಡುಮನೆ , ತಲೆಬಾಗಿಲು, ಹಿತ್ತಲು, ಕೊಟ್ಟಿಗೆ ಇವಳನ್ನು ಮರೆತೇ ಬಿಟ್ಟಿದ್ದೇವೆ. ನಮ್ಮ ಮನೆಗಳಿಗೆ ಬಂಧು ಬಾಂಧವರು, ನೆಂಟರಿಷ್ಟರು ಬರುವುದೇ ಇಲ್ಲ. ಬರೀ ಗೆಸ್ಟ್‌ಗಳೇ ಬರುತ್ತಾರೆ.



ಆ ಬಂದವರು, ನಮ್ಮ ನಮನೆಯಲ್ಲಿ ಊಟ ಮಾಡುವುದಿಲ್ಲ. ತಿಂಡಿ ತಿನ್ನುವುದಿಲ್ಲ ಬದಲಾಗಿ ಲಂಚೋ, ಡಿನ್ನರೋ, ಬ್ರೇಕ್ಫಾಸ್ಟೋ (ಗೆಟ್ ಟುಗೆದರ್) ಮಾಡುತ್ತಾರೆ. ಊಟಕ್ಕೆ ಕುಳಿತಾಗ ತಟ್ಟೆ, ಬಾಳೆಎಲೆಗಳ ಜಾಗವನ್ನು ಪ್ಲೇಟ್ ಗಳು ತುಂಬಿವೆ. ಅವುಗಳಲ್ಲಿ ಬಡಿಸುವ ಪದಾರ್ಥಗಳೆಲ್ಲಾ ರೈಸ್, ಕರ್‍ರಿ, ಗ್ರೇವಿ, ಫ್ರೈ ಮುಂತಾದುವೆ. ಅನ್ನ, ಪಲ್ಯ, ಚಟ್ನಿ, ಹುಳಿ ,ಸಾರು, ಮೊಸರು ತಿನ್ನಿ ಅಂದರೆ ಉಂಟೇ... ಬಂದವರು ಏನು ತಿಳಿದುಕೊಂಡಾರು ಎಂಬ ಭಯ. ಅಂಗಡಿಗೆ ಹೋಗುವಾಗ ಚೀಲ ತೆಗೆದುಕೊಂಡು ಹೋಗುವುದಿಲ್ಲ. ಬ್ಯಾಗ್ ತೆಗೆದುಕೊಂಡು ಷಾಪ್ಗೆ ಹೋಗ್ತೀವಿ. ಅವುಗಳಲ್ಲಿ ವೆಜಿಟಬಲ್ಸ್ , ಫ್ರೂಟ್ಸ್, ಹಾಕಿಕೊಂಡು ಬರುತ್ತೇವೆ. ಏಕೆಂದರೆ ತರಕಾರಿ, ಹಣ್ಣು, ಎಂಬ ಪದಗಳು ಬಳಸದೆ ಕೊಳೆತು ನಾರುತ್ತಿವೆ.. ಅಲ್ಲವೇ.? ಏನ್ರೀ ನಿಮ್ಮ ಮೊಮ್ಮಗಳ ಹೆರಿಗೆ ಆಯ್ತಾ ಎಂದು ನಮ್ಮ ಪಕ್ಕದ ಮನೆಯ ಅಜ್ಜಿಯನ್ನು ವಿಚಾರಿಸಿದಾಗ ಅವರು ಹೇಳಿದ್ದು ಏನಮ್ಮಾ ನೀನು ಡೆಲಿವರೀ ಆಯ್ತಾ ಎಂದು ಕೇಳುವುದನ್ನು ಬಿಟ್ಟು ನೀನು ಅಡುಗೋಲು ಅಜ್ಜಿಯ ತರ ಹೆರಿಗೆ ಪರಿಗೆ ಅಂತೀಯಲ್ಲಾ.? ಎಂದು ನನ್ನನ್ನೇ ಮರು ಪ್ರಶ್ನೆ ಮಾಡಿ ದಂಗಾಯಿಸಿದರು. ಇನ್ನು ದೂರದರ್ಶನದ ಅಡುಗೆ ಕಾರ್ಯಕ್ರಮಗಳು. ಒಬ್ಬ ಮಹಿಳೆ ಅಡುಗೆ ಮಾಡುವ ವಿಧಾನವನ್ನು ನಮಗೆ ತಿಳಿಸುತ್ತಾಳೆ. ಅದು ಯಾವ ಭಾಷೆಯೋ ನೀವೇ ನಿರ್ಧರಿಸಿ. ಸ್ವಲ್ಪ ಸಾಲ್ಟು, ಮಿರ್ಚಿ ಪೌಡರ್, ದನಿಯಾ ಪೌಡರ್, ಜಿಂಜರ್, ಗಾರ್ಲಿಕ್ ಪೇಸ್ಟ, ಯ್ಯಾಡ್ಮಾಡಿ ಫೈವ್ ಮಿನಿಟ್ಸ ಕುಕ್ ಮಾಡ್ಬೇಕು. ಸ್ಟೊವ ಆಫ್ ಮಾಡಿ ಮಸಾಲಾ ಪೌಡರ್ ಯ್ಯಾಡ್ಮಾಡಿ ಚೆನ್ನಾಗಿ ಮಿಕ್ಸ್ ಮಾಡ್ಬೇಕು...ಹೀಗೇ ಮುಂದುವರಿಯುತ್ತದೆ. ಹೀಗಿರುವಾಗ, ನಮ್ಮ ತಿನುಸುಗಳಿಗೆ ಶುಂಠಿ, ಬೆಳ್ಳುಳ್ಳಿ, ಉಪ್ಪು, ಖಾರ ಹುಳಿಯ ರುಚಿ ಎಲ್ಲಿಂದ ಬರಬೇಕು? ನಿನ್ನೆ ನಮ್ಮ ಪಕ್ಕದ ಮನೆಯವರು ಬಂದು. ಸಾರ್ ನಾಳೆ ನಮ್ಮ ನೇಟಿವ್ ಪ್ಲೇಸ್ನಲ್ಲಿ ನಮ್ಮ ಸಿಸ್ಟರ್ ಸನ್ದು ಮ್ಯಾರೇಜ್ ಇದೆ, ಹೋಗಿ ಬರುತ್ತೇವೆ ಅಂತ ಹೇಳಿ, ಸ್ವಲ್ಪ ಮನೆ ಕಡೆ ನಿಗಾ ಇಟ್ಟಿರಿ, ಎಂದರು. ಸೋದರ ಅಳಿಯ ಎನ್ನುವುದರಲ್ಲಿ ಎಷ್ಟು ಆಪ್ಯಾಯತೆ ಗೋಚರಿಸುತ್ತದೆ. ನಾವೇಕೆ ಇಂತಹ ಆಪ್ಯಾಯಮಾನವಾದ ಪದಗಳನ್ನು ಬಳಸುವುದರಲ್ಲಿ ಸಂಕೋಚಪಡುತ್ತೇವೆ? ಅಮ್ಮ, ಅಪ್ಪ, ಎಂದು ಕರೆಯುವುದು ವಿರಳವಾಗಿದೆ. ಅತ್ತೆ, ಮಾವ, ಮಾವ, ಚಿಕ್ಕಪ್ಪ, ಚಿಕ್ಕಮ್ಮ, ದೊಡ್ಡಮ್ಮ, ದೊಡ್ಡಪ್ಪಾ, ಎಲ್ಲರೂ ಮಾಯವಾಗಿ ಅಂಕಲ್.. ಆಂಟಿ ಉಳಿದಿದ್ದಾರೆ. ಹಾಗೇನೇ... ಅಕ್ಕ ,ಅಣ್ಣಾ, ಭಾವ,ಅತ್ತಿಗೆ, ಬಾಮೈದ, ಮುಂತಾದವರು ದೂರವಾಗಿ ಎಲ್ಲರೂ ಕಜಿನ್ಸ್ ಆಗಿದ್ದಾರೆ. ಮಕ್ಕಳನ್ನು ಶಾಲೆಗೆ ಕಳಿಸುತ್ತಿಲ್ಲಾ, ಸ್ಕೂಲ್‌ಗೆ ಕಳಿಸುತ್ತಿದ್ದೇವೆ. ಹೌದು ಶಾಲೆಗೆ ಹೋಗಬೇಕು ಅಲ್ಲಿ ಇಂಗ್ಲಿಷ್ ಕಲಿಯಬೇಕು..ಇಂಗ್ಲಿಷ್‌ನಲ್ಲೇ ಮಾತನಾಡಬೇಕು, ಅನಿವಾರ್ಯ..! ಆದರೆ , ಮನೆಯಲ್ಲಿ, ನೆರಹೊರೆಯವರ ಹತ್ತಿರ ಕನ್ನಡದಲ್ಲಿ ಮಾತನಾಡಲು ನಾವು ಏಕೆ ಬಿಡುತ್ತಿಲ್ಲಾ? ನಾವು ನಮ್ಮತನದಿಂದ ಏಕೆ ವಿಮುಖರಾಗುತ್ತಿದ್ದೇವೆ. ಹೆಚ್ಚು ಹೆಚ್ಚು ಆಂಗ್ಲ ಪದಗಳನ್ನು ಬಳಸಿದರೆ ಸಮಾಜದಲ್ಲಿ ನಮ್ಮ ಗೌರವ ಹೆಚ್ಚುವುದು ಎನ್ನುವ ಭ್ರಮೆಯೇ...!? ಕನ್ನಡದ ಪದಗಳು ಒರಟು ಎನ್ನುವ ಅಪನಂಬಿಕೆಯೇ ? ಇದು ಖಂಡಿತಾ ಪರಭಾಷಾ ವ್ಯಾಮೋಹ ಮಾತ್ರವೇ ಅಲ್ಲಾ, ನನಗೂ ಇಂಗ್ಲಿಷ್ ಚೆನ್ನಾಗಿ ಬರುತ್ತದೆ, ನಾನೇನೂ ಯಾರಿಗೂ ಕಡಿಮೆ ಅಲ್ಲಾ ಎಂಬ ಸ್ವಯಂಕೃತ ಮಾನಸಿಕ ದೌರ್ಬಲ್ಯವೇ ಸರಿ...! ಇಂತಹ ಆಲೋಚನೆಗಳಿಂದ ನಮ್ಮ ಕಸ್ತೂರಿ ಕನ್ನಡದ ಬಳಕೆಯಲ್ಲಿ ಹಿಂಜರಿಕೆಯಾಗಿದೆ ಎಂದರೆ ಅತಿಶಯೋಕ್ತಿ ಅಲ್ಲಾ. ಇಂದಿನ ಕಾಲಮಾನದಲ್ಲಿ, ಹಳ್ಳಿಗಳೂ , ಪಟ್ಟಣಗಳೂ ಎನ್ನುವ ತಾರತಮ್ಯ ವಿಲ್ಲದೆ ಆಂಗ್ಲಪದಗಳ ಬಳಕೆ ಅಭ್ಯಾಸವಾಗಿ ಹೋಗಿದೆ. ಹಾಗೆಂದು ದಿನಬಳಕೆಯ ಪದಗಳನ್ನು ಬಿಟ್ಟು ಪರಭಾಷಾ ಪದಬಳಕೆಯಿಂದ ನಮ್ಮ ಭಾಷೆ ಕ್ಷೀಣಿಸುತ್ತಿದೆ. ಮನೆ ಹೊರಗಡೆ ಇತರ ಭಾಷೆಯ ಪದಬಳಕೆ ಸರಿ ಎನಿಸಿದರೂ..ನಮ್ಮ ನಾಲ್ಕು ಗೋಡೆಗಳ ಮಧ್ಯೆ ನಮ್ಮ ಭಾಷೆ ನಮ್ಮತನ...ನಮ್ಮ ಆಚಾರ ವಿಚಾರಗಳನ್ನು ಮುಂದುವರಿಸಲು ಯಾವ ಸಂಕೋಚವೂ ಇರುವುದಿಲ್ಲ. ಕನ್ನಡ ಬಾಂಧವರೇ...., ಇನ್ನು ಮೇಲಾದರೂ ಅವಶ್ಯಕತೆ ಇಲ್ಲದ ಆಂಗ್ಲ ಪದಗಳಿಗೆ ಕದಮುಚ್ಚಿ....! ನಮ್ಮ ಸವಿಗನ್ನಡ ಪದಗಳ ಯಥೇಚ್ಛ ಬಳಕೆಗೆ ನಮ್ಮ ಕನ್ನಡದ ಮನೆಯ ಬಾಗಿಲನ್ನು ಸದಾ ತೆರೆದಿಡೋಣ. ಕನ್ನಡವನ್ನು ದಿನದಿನವೂ ಬಳಸಿದರಷ್ಟೆ ಉಳಿಯುತ್ತದೆ, ಬೆಳೆಯುತ್ತದೆ, ನಲಿಯುತ್ತದೆ. ಬಳಸದೆ ಇದ್ದಲ್ಲಿ, ಸೊರಗುತ್ತಾ ನಾಶವಾಗುತ್ತದೆ.

**ಜೈ ಕರ್ನಾಟಕ ಮಾತೆ...**

**ನಾನೇನೂ ಯಾರಿಗೂ ಕಡಿಮೆ ಅಲ್ಲಾ**

## ಹೆಚ್. ಎಸ್. ಪ್ರತಿಮಾ ಹಾಸನ್‌ಗೆ ಗೋವಾದಲ್ಲಿ ಸನ್ಮಾನ

ಇತ್ತೀಚಿಗೆ ಹಾಸನ ನಗರದ ಹೆಚ್. ಎಸ್. ಪ್ರತಿಮಾ ಹಾಸನ್ ರವರು ಸಾಹಿತಿ, ಶಿಕ್ಷಕಿ, ಸಾಮಾಜಿಕ ಚಿಂತಕಿ, ಸಮಾಜ ಸೇವಕಿ, ಪತ್ರಕರ್ತೆ, ಅಂಕಣಗಾರ್ತಿ, ಲೇಖಕಿ, ಕವಯತ್ರಿ, ಮಹಿಳಾ ಹೋರಾಟಗಾರ್ತಿ ಸಂಸ್ಥಾಪಕ ಅಧ್ಯಕ್ಷರು ಪ್ರತಿಮಾ ಸಾಮಾಜಿಕ ಸಾಂಸ್ಕೃತಿಕ ಅಭಿವೃದ್ಧಿ ಪ್ರತಿಷ್ಠಾನ. ಒಟ್ಟಾರೆ ಸದಾ ಕ್ರಿಯಾಶೀಲವಾಗಿರುವ ಬಹುಮುಖ ಪ್ರತಿಭೆಯಾಗಿದ್ದು ನೂರಾರು ಪ್ರಶಸ್ತಿ ಪಡೆದು ರಾಷ್ಟ್ರಿಯ, ಅಂತಾರರಾಷ್ಟ್ರಿಯ ಮಟ್ಟದಲ್ಲಿ ಗುರುತಿಸಿಕೊಂಡ ಸರಳ, ಸಜ್ಜನ, ನೇರ ನುಡಿಯ ಮಾತುಗಾರ್ತಿ ದುಡುಮೆಯೇ ದೇವರು ಎಂದು ನಂಬಿ ಶಿಕ್ಷಕಿಯಾಗಿ ಕಾರ್ಯ ನಿರ್ವಹಿಸುತ್ತ ಹಲವಾರು ಚಟುವಟಿಕೆಯೊಂದಿಗೆ ಪಾರ್ಟ್ ಟೈಮ್‌ವರ್ಕ್ ಮಾಡಿ ಹಲವು ಕಂಪನಿಗಳಲ್ಲಿ ಮ್ಯಾನೇಜರ್ ಆಗಿ ಕಾರ್ಯ ನಿರ್ವಹಿಸಿದ್ದಾರೆ. ಇತ್ತೀಚಿಗೆ ಕಿಂಗ್ಸ್ ಬಜಾರ್, ಇಂಡಿಯಾ ಮಲ್ಟಿ ಸರ್ವಿಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯಲ್ಲಿ ಅಚಿವರ್ ಆಗಿದ್ದು ಗೋವಾದಲ್ಲಿ ಇವರನ್ನು ಸನ್ಮಾನಿಸಿ ಗೌರವಿಸಲಾಯಿತು. ವೇದಿಕೆಯಲ್ಲಿ ಎಂ.ಡಿ. ಆನಂದ್, ಪ್ರಸಾದ್, ಕುಮಾರ್ ಇನ್ನೂ ಹಲವರು ಉಪಸ್ಥಿತರಿದ್ದರು.



# ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ನಡಿಗೆ ಜಾಥ ಚಾಲನೆ

• ಉದಯವಾಹಿನಿ, ಚಾಮರಾಜಪೇಟೆ

ಸೆಂಟ್ ಜೋಸೆಫ್ ಪ್ರೌಢಶಾಲೆ ಅವರಣದಲ್ಲಿ ಬಾಸ್ಕೊ ಮಕ್ಕಳ ದಿನಾಚರಣೆ ಮತ್ತು ಮಕ್ಕಳ ರಕ್ಷಣೆ ಜಾಗೃತಿ ಅಭಯಾನ. ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿಗಳಾದ ಸಂತೋಷ್ ಹೆಗಡೆ, ನಟಿ ಮೋಕ್ಷಿತಾ ಪೈ, ಫಾಧರ್ ವರ್ಗೀಸ್ ಪಲ್ಲಿಪುರಂ, ಕಾರ್ಯಕಾರಿ ನಿರ್ದೇಶಕರು ಜಾನ್ಸನ್ ಕಾರ್ಯಕಮ ನಿರ್ದೇಶಕರು ರಂಗಭೂಮಿ ಕಲಾವಿದ ಯೋಗೇಶ್ ಮಾಸ್ಟರ್, ಜಿಲ್ಲಾ ಮಕ್ಕಳ ರಕ್ಷಣಾ ಅಧಿಕಾರಿಗಳಾದ ಆಶಾ.ಎಚ್.ಕೆ. ಬಿ.ಎರ್‍ರಾಸ್ವಾಮಿರವರು, ಸಂಯೋಜಕ ರಾಮಸ್ವಾಮಿ, ಸಮಾಜ ಸೇವಕ ವಾಸುದೇವ ಶರ್ಮರವರು ದೀಪ ಬೆಳಗಿಸಿ ಕಾರ್ಯಕ್ರಮ ಉದ್ಘಾಟನೆ ಮಾಡಿದರು.





☛ ಉದಯವಾಹಿನಿ ಚಿತ್ರ

**ಬಾಸ್ಕೊಸಂಸ್ಥೆಯ ಮಕ್ಕಳಿಂದ ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ನಡಿಗೆ ಜಾಥ ಮಕ್ಕಳ ಹಕ್ಕುಗಳ ರಕ್ಷಣೆ ಸಮರ್ಪಕವಾಗಿ ಜಾರಿಗೆಯಾಗಬೇಕು, ದೇಶದ ಭವಿಷ್ಯ ಮಕ್ಕಳ ಕೈಯಲ್ಲಿಇದೆ.**

**– ಸಂತೋಷ್ ಹೆಗಡೆ**
**ನಿವೃತ್ತ ನ್ಯಾಯಮೂರ್ತಿ**

ಸಂತೋಷ್ ಹೆಗಡೆ ರವರು ಮಾತನಾಡಿ ದೇಶದ ಭವಿಷ್ಯ ಮಕ್ಕಳ ಕೈಯಲ್ಲಿ ಇದೆ. ಮಕ್ಕಳು ಆಸೆ ಪಡಿ ಅದರೆ ದುರಾಸೆ ಪಡಬೇಡಿ. ಮಕ್ಕಳ ಮೇಲಿನ ದೌರ್ಜನ್ಯ ಮತ್ತು ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ಪ್ರತಿಯೊಂದು ಶಾಲೆ ಮತ್ತು ಸಂಘ, ಸಂಸ್ಥೆಗಳು ಶ್ರಮಿಸಬೇಕು. ಮಕ್ಕಳ ಹಕ್ಕುಗಳ ಕಾನೂನು ಸಮರ್ಪಕವಾಗಿ ಜಾರಿಗೆಯಾಗಬೇಕು. ಕಾನೂನಿನಲ್ಲಿ ವಿಚಾರಣೆ ಮಾಡುವ ಸಂಸ್ಥೆಗಳು ಹುರಿಪಿನಿಂದ ಕೆಲಸ ಮಾಡಬೇಕು. ಸುಳ್ಳು ಕೇಸ್ ತಪ್ಪು ಮಾಡಿದವರಿಗೆ ಶಿಕ್ಷೆಯಾಗಬೇಕು. ಸಂಯೋಜಕ ರಾಮಸ್ವಾಮಿ ಮಕ್ಕಳು ದೇವರ ಸಮಾನ ಅವರ ಮೇಲೆ ಜರುಗುವ ದೌರ್ಜನ್ಯ ತಡೆಯಬೇಕು, ಮಕ್ಕಳ ಹಕ್ಕು ರಕ್ಷಣೆಯಾಗಬೇಕು.

ಮಕ್ಕಳ ದಿನಾಚರಣೆ ಅಂಗವಾಗಿ ಸೆಂಟ್ ಜೋಸೆಫ್ ಶಾಲೆ ಮತ್ತು ಸೆಂಟೆ ಥೇರಸಾ ಶಾಲೆ ಚಾಮರಾಜಪೇಟೆ ಪೊಲೀಸ್ ಠಾಣೆ ಸಹಕಾರದಿಂದ ನೂರಾರು ಮಕ್ಕಳ ಜೊತೆಯಲ್ಲಿ ಮಕ್ಕಳು ಹಕ್ಕುಗಳ ರಕ್ಷಣೆಗಾಗಿ ಜಾಗೃತಿ ನಡಿಗೆ ಜಾಥ ನಡೆಸಲಾಗುತ್ತಿದೆ ಎಂದು ಹೇಳಿದರು.

# 200ಕ್ಕೂ ಹೆಚ್ಚು ಶಾಲೆಗಳ ಮಕ್ಕಳಿಂದ ಕವಿಗೋಷ್ಠಿ

• ಉದಯವಾಹಿನಿ, ಬೆಂಗಳೂರು

ಯುವ ಬೆಂಗಳೂರು ಟ್ರಸ್ಟ್ ವತಿಯಿಂದ ಕನ್ನಡ ಸಾಹಿತ್ಯ ಪರಿಷತ್‌ಸಭಾಂಗಣದಲ್ಲಿ 70ನೇ ಕನ್ನಡ ರಾಜ್ಯೋತ್ಸವದ ಅಂಗವಾಗಿ ಮಕ್ಕಳ ಕನ್ನಡ ಕವಿಗೋಷ್ಠಿ ವೈಭವದಿಂದ ನೆರವೇರಿತು. ಕಾರ್ಯಕ್ರಮವನ್ನು ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಜಿ. ಕಿರಣ್ ಸಾಗರ್, ಪ್ರಧಾನ ಕಾರ್ಯದರ್ಶಿ ಶ್ವೇತಾ ಎಸ್. ರಾವ್ ಹಾಗೂ ಉಪಾಧ್ಯಕ್ಷ ಬಿ.ವಿ. ಸುನೀಲ್ ದೀಪ ಬೆಳಗಿಸಿ ಉದ್ಘಾಟಿಸಿದರು. ಮಾತನಾಡಿದ ಸಂಸ್ಥಾಪಕ ಅಧ್ಯಕ್ಷ ಜಿ. ಕಿರಣ್ ಸಾಗರ್ ಅವರು, ಮಾಜಿ ರಾಷ್ಟ್ರಪತಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರ ಪೇರಣೆ ಮತ್ತು ಸ್ಫೂರ್ತಿಯಿಂದ 2008ರಲ್ಲಿ ಯುವ ಬೆಂಗಳೂರು ಟ್ರಸ್ಟ್ ಸ್ಥಾಪನೆಯಾಗಿದೆ. ದೇವರ ಸಮಾನ ಮಕ್ಕಳಿಗೆ ಶ್ರೀಮಂತ–ಬಡ ಎನ್ನುವ ಭೇದವಿಲ್ಲದೆ ಸಮಾನ ಸೌಲಭ್ಯ ಸಿಗಬೇಕು ಎಂಬುದು ನಮ್ಮ ಧ್ಯೇಯ. ಕನ್ನಡ ಶಾಲೆಗಳು ಮುಚ್ಚಬಾರದು. ಶಿಕ್ಷಣ ವ್ಯವಹಾರವಾಗಬಾರದು. ಪ್ರತಿಯೊಬ್ಬ ಮಕ್ಕಳಿಗೂ ಗುಣಮಟ್ಟದ ಶಿಕ್ಷಣ ದೊರೆಯಬೇಕು, ಎಂದು ಹೇಳಿದರು. ರಾಜ್ಯಾದ್ಯಂತ 356 ಸರ್ಕಾರಿ ಶಾಲೆಗಳನ್ನು ಟ್ರಸ್ಟ್ ದತ್ತು ಪಡೆದು ಅಭಿವೃದ್ಧಿ ಹಾಗೂ ಗುಣಮಟ್ಟ ಹೆಚ್ಚಿಸುವ ಕಾರ್ಯ ಕೈಗೊಳ್ಳಲಾಗಿದೆ. ಪ್ರತಿವರ್ಷ ಗ್ರಾಮೀಣ ಸರ್ಕಾರಿ ಶಾಲಾ ಮಕ್ಕಳಿಗೆ ಉಚಿತ ನೋಟ್‌ಬುಕ್‌ಗಳು, ಉಚಿತ ಕಂಪ್ಯೂಟರ್‌ಗಳು, ಬೆಂಚುಗಳು, ಹಾಗೂ ಬೇಸಿಕ್ ಶೈಕ್ಷಣಿಕ ಸಾಮಗ್ರಿಗಳನ್ನು ವಿತರಿಸಲಾಗುತ್ತಿದೆ. ಕ್ರೀಡಾ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನೂ ಆಯೋಜಿಸಲಾಗುತ್ತಿದೆ. ಬಾಲಕಿಯರಿಗೆ ಸ್ಯಾನಿಟರಿ ಕಿಟ್ ವಿತರಣೆ ಕೂಡ ನಡೆಯುತ್ತಿದೆ. ಈ ಕವಿಗೋಷ್ಠಿಯಲ್ಲಿ ಬೆಂಗಳೂರು ನಗರದ 200ಕ್ಕೂ ಹೆಚ್ಚು ಶಾಲೆಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು. ‘ಅದಿರನ್ನ’, ‘ಪಂಪ’, ‘ಪೊನ್ನ’ ಎಂಬ ಮೂರು ವಿಭಾಗಗಳಲ್ಲಿ ಪ್ರಶಸ್ತಿಗಳನ್ನು ಹಂಚಲಾಯಿತು.



☛ ಉದಯವಾಹಿನಿ ಚಿತ್ರ

**ಪ್ರಶಸ್ತಿ ವಿಜೇತರು:** 1ನೇ ಬಹುಮಾನ ರೂ. 10,000 ವಿಜೇತೆಯ ಹೆಸರು ಯುಕ್ತಾ. ಸಿ 7ನೇ ತರಗತಿ, ಸರಕಾರಿ ಮಾದರಿ ಪ್ರಾಥಮಿಕ ಶಾಲೆ, ಅಗ್ರಹಾರ ದಸರಹಳ್ಳಿ 2ನೇ ಬಹುಮಾನ ರೂ. 5,000 ವಿಜೇತೆಯ ಹೆಸರು ವರ್ಷಾ ಡಿ.ಸಿ 9ನೇ ತರಗತಿ, ಸರಕಾರಿ ಹೈ ಸ್ಕೂಲ್, ಹೊಸಗುಡ್ಡದಹಳ್ಳಿ 3ನೇ ಬಹುಮಾನ ರೂ. 3,000 **ವಿಜೇತೆಯ ಹೆಸರು:** ಈರಮ್ಮ 10ನೇ ತರಗತಿ, ಒಕ್ಕಲಿಗರ ಸಂಘ ಹೈ ಸ್ಕೂಲ್ ವಿಜೇತರಿಗೆ ಫಲಕ ನೀಡಿ ಸನ್ಮಾನಿಸಲಾಯಿತು. ಸಂಸ್ಥಾಪಕ ಅಧ್ಯಕ್ಷ ಕಿರಣ್ ಸಾಗರ್ ಅವರು, ವಿದ್ಯಾವಂತ ಸಮಾಜದಿಂದ ದೇಶದ ಅಭಿವೃದ್ಧಿ ಸಾಧ್ಯ. ಮಕ್ಕಳ ಶಿಕ್ಷಣ, ಮೂಲಸೌಕರ್ಯ ಮತ್ತು ಅವರ ಬೆಳವಣಿಗೆಯಾಗಿ ಯುವ ಬೆಂಗಳೂರು ಟ್ರಸ್ಟ್ ನಿರಂತರ ಶ್ರಮಿಸುತ್ತಿದೆ, ಎಂದು ಹೇಳಿದರು.

## ಪರಿಸರ ವಿಜ್ಞಾನದ ಮಡಿಲಿನಲ್ಲಿ ಮಕ್ಕಳ ಕಲಿಕೆಗೆ ಏಕ್ಯಾವನ ಶಾಲೆ ನಿರ್ಮಾಣ ದೇಶದಲ್ಲಿಯೇ ವಿಭಿನ್ನ ಕಲಿಕಾ ಪ್ರಯೋಗ

# ಏಕ್ಯಾ ಶಾಲೆಗಳಿಂದ ಫೈಂಡ್ ಉತ್ಸವ – 2025, ಏಕ್ಯಾವನ ಉದ್ಘಾಟನೆ

• ಉದಯವಾಹಿನಿ, ಬೆಂಗಳೂರು

ಪ್ರಕೃತಿಯ ಮೂಲಕ ಕಲಿಕೆ ಎಂಬ ವಿಭಿನ್ನ ಪರಿಕಲ್ಪನೆಯ ಮೂಲಕ ಸೃಜನಾತ್ಮಕ ಚಿಂತನೆ ಮತ್ತು ಪರಿಸರ ಕಾಳಜಿಯನ್ನು ಮಕ್ಕಳಲ್ಲಿ ಬಿತ್ತುವ ನಿಟ್ಟಿನಲ್ಲಿ ಸಿಎಂಆರ್ ಸಮೂಹ ಶಿಕ್ಷಣ ಸಂಸ್ಥೆಗಳ ಭಾಗವಾದ ಏಕ್ಯಾ ಶಾಲೆಗಳು 15 ನವೆಂಬರ್ 2025, ಫೈಂಡ್ ಉತ್ಸವ – 2025 ಕಾರ್ಯಕ್ರಮದಲ್ಲಿ ಏಕ್ಯಾವನ ಉದ್ಘಾಟನೆ ಮಾಡುವ ಮೂಲಕ ದೇಶದಲ್ಲಿಯೇ ವಿಭಿನ್ನ ಶಾಲೆಯ ನಿರ್ಮಾಣಕ್ಕೆ ವಿದ್ಯುಕ್ತ ಚಾಲನೆ ನೀಡಿದರು. ನಗರದ ನೈಸ್ ರೂಡ್ ಏಕ್ಯಾ ಶಾಲೆ ಸಭಾಂಗಣದಲ್ಲಿ ಭಾನುವಾರ ನಡೆದ ಫೈಂಡ್ ಉತ್ಸವ – 2025 ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಡಾ. ಎ. ಎನ್. ಯಲ್ಲಪ್ಪ ರೆಡ್ಡಿ, ಐಎಫ್‌ಎಸ್. (ನಿವೃತ್ತಿ), ಪರಿಸರವಾದಿ, ಮಾಜಿ ಕಾರ್ಯದರ್ಶಿ, ಅರಣ್ಯ, ಪರಿಸರ ಇಲಾಖೆ, ಕರ್ನಾಟಕ ಸರ್ಕಾರ, ಸದಸ್ಯರು, ಕರ್ನಾಟಕ ಹೈಕೋರ್ಟ್, ಲೋಕ ಅದಾಲತ್ ಮತ್ತು ವನ್ಯಜೀವಿ ಅಧ್ಯಯನ ಕೇಂದ್ರದ ಗೌರವ ನಿರ್ದೇಶಕ ಡಾ. ಕೆ. ಉಲ್ಲಾಸ್ ಕಾರಂತ್ ಮತ್ತು ಬಿಸ್ವಜಿತ್ ಮಿಶ್ರಾ, ಮುಖ್ಯ ಅರಣ್ಯ ಸಂರಕ್ಷಣಾಧಿರಿ, ಅರಣ್ಯ ಇಲಾಖೆ, ಕರ್ನಾಟಕ ಸರ್ಕಾರ ಇವರು ಏಕ್ಯಾವನ ಉದ್ಘಾಟಿಸಿದರು.

ಏಕ್ಯಾವನ ಉದ್ಘಾಟಿಸಿ ಮಾತನಾಡಿದ ಡಾ.ಉಲ್ಲಾಸ್ ಕಾರಂತ್ ಅವರು ಅರಣ್ಯ, ವನ್ಯಜೀವಿಗಳು ಸಮಾಜದ ಭಾಗವಾಗಿದ್ದು ನೈಸರ್ಗಿಕ ಪರಿಸರ ವ್ಯವಸ್ಥೆಯ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿಯಾಗಬೇಕು. ಈ ನಿಟ್ಟಿನಲ್ಲಿ ಏಕ್ಯಾ ಶಾಲೆಗಳು ಏಕ್ಯಾ ವನ ಪರಿಕಲ್ಪನೆಯಲ್ಲಿ ಶಾಲೆ ನಿರ್ಮಾಣ ಮಾಡುವ ಮೂಲಕ ಪರಿಸರ ವಿಜ್ಞಾನದ ಮಡಿಲಿನಲ್ಲಿ ಮಕ್ಕಳ ಕಲಿಕೆಗೆ ಮುಂದಾಗಿರುವುದು ದೇಶದಲ್ಲಿಯೇ ವಿಭಿನ್ನ, ಮಾದರಿ ಶಾಲೆಯಾಗಲಿದೆ ಎಂದು ಹರ್ಷವ್ಯಕ್ತಪಡಿಸಿದರು.





**ವಿಭಿನ್ನ ಮಾದರಿ ಶಾಲೆ**

ಕರ್ನಾಟಕ ಸರ್ಕಾರದ ಪರಿಸರ ವಿಜ್ಞಾನ ಮತ್ತು ಅರಣ್ಯ ಇಲಾಖೆಯ ಮಾಜಿ ಕಾರ್ಯದರ್ಶಿ ಮತ್ತು ಕರ್ನಾಟಕ ಹೈಕೋರ್ಟ್‌ನ ಸದಸ್ಯರಾದ ಐಎಫ್‌ಎಸ್ (ನಿವೃತ್ತ) ಡಾ. ಎ. ಎನ್. ಯಲ್ಲಪ್ಪ ರೆಡ್ಡಿ, ಲೋಕ್ ಅದಾಲತ್, ಇವರು ಮಾತನಾಡಿ ಮಕ್ಕಳು ಮಾತ್ರ ಭವಿಷ್ಯದ ನಿಜವಾದ ಶಿಕ್ಷಕರಾಗಲು ಸಾಧ್ಯ. ಈ ಭೂಮಿಯನ್ನು ಸಂರಕ್ಷಿಸುವ ಮತ್ತು ಕಾಳಜಿ ಮಾಡುವ ಗುರುತರ ಜವಾಬ್ದಾರಿ ಇಂದಿನ ಮಕ್ಕಳಿಗಿದೆ. ನಾವು ಅವರ ಕುತೂಹಲ ಮತ್ತು ಪ್ರಕೃತಿಯ ಮೇಲಿನ ಪ್ರೀತಿಯನ್ನು ಪೋಷಿಸಿದರೆ, ಅವರು ವಿಶ್ವ ಪರಿಸರವನ್ನು ರಕ್ಷಿಸುವ ಮಾನವ ಶಕ್ತಿಯಾಗುತ್ತಾರೆ ಎಂದು ವಿದ್ಯಾರ್ಥಿಗಳ ಕಾಳಜಿ ಮತ್ತು ಜವಾಬ್ದಾರಿಯನ್ನು ಶ್ಲಾಘಿಸಿದರು.

ಡಾ.ಕೆ.ಸಿ. ರಾಮಮೂರ್ತಿ, ಐಪಿಎಸ್(ನಿವೃತ್ತ), ಮಾಜಿ ರಾಜ್ಯಸಭಾ ಸದಸ್ಯರು, ಅಧ್ಯಕ್ಷರು ಸಿಎಂಆರ್ ಸಮೂಹ ಶಿಕ್ಷಣ ಸಂಸ್ಥೆಗಳು ಮತ್ತು ಸಿಎಂಆರ್ ವಿಶ್ವವಿದ್ಯಾಲಯ. ಇವರು ಮಾತನಾಡಿ ಸಿಎಂಆರ್ ಸಮೂಹ ಶಿಕ್ಷಣ ಸಂಸ್ಥೆಗಳ ಭಾಗವಾಗಿರುವ ಏಕ್ಯಾ ವನ ಪ್ರಕೃತಿಯುಕ್ತ ಶಾಲೆ ನಿರ್ಮಾಣಕ್ಕೆ ಗಣ್ಯರು ಚಾಲನೆ ನೀಡಿದ್ದಾರೆ. ಪ್ರಕೃತಿಯ ಮಡಿಲಿನಲ್ಲಿ ಮಕ್ಕಳು ಕಲಿಯಬೇಕು ಆ ಮೂಲಕ ಮಕ್ಕಳು ಪರಿಸರದ ಭಾಗವಾಗಬೇಕು ಎಂಬುದು ಏಕ್ಯಾವನ ಶಾಲೆಯ ಧ್ಯೇಯ. ಈ ನಿಟ್ಟಿನಲ್ಲಿ ವಿಭಿನ್ನ ಪರಿಸರ ವಿಜ್ಞಾನ ಕಲಿಕೆಯ ವಾತಾವರಣದಲ್ಲಿ ಏಕ್ಯಾ ವನ ಶಾಲೆ ನಿರ್ಮಾಣವಾಗಲಿದ್ದು, ರಾಷ್ಟ್ರ, ಅಂತರಾಷ್ಟ್ರೀಯ ಮಟ್ಟದಲ್ಲಿ ವಿಭಿನ್ನ ಮತ್ತು ಮಾದರಿ ಶಾಲೆಯಾಗಿಲಿದೆ ಎಂದು ಹೇಳಲು ಹೆಮ್ಮೆಯಾಗುತ್ತದೆ ಎಂದರು. ಏಕ್ಯಾವನ ಶಾಲಾ ಕಟ್ಟಡವೇ ಪ್ರಕೃತಿದಾಯಕವಾಗಿದ್ದು ಮಕ್ಕಳು ಪರಿಸರ, ಜೀವ ವಿಜ್ಞಾನ ಕಲಿಕೆಯ ಜೊತೆ ಕೃಷಿಯಾಧಾರಿಯ ವೃತ್ತಿಗಳನ್ನು ಸಹಜವಾಗಿ ಕಲಿಯುತ್ತಾರೆ ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳನ್ನು ಏಕ್ಯಾವನ ಶಾಲೆ ಪ್ರೇರೇಪಿಸುತ್ತದೆ ಎಂದರು. ಡಾ.ಸಬಿತಾ ರಾಮಮೂರ್ತಿ, ಅಧ್ಯಕ್ಷರು ಸಿಎಂಆರ್ ಜ್ಞಾನಧಾರ ಟ್ರಸ್ಟ್, ಕುಲಾಧಿಪತಿ ಸಿಎಂಆರ್‌ವಿಶ್ವವಿದ್ಯಾಲಯ, ಶ್ರೀ ಕೆ.ಸಿ.ಜಗನ್ನಾಥ ರೆಡ್ಡಿ, ಕಾರ್ಯದರ್ಶಿ, ಸಿಎಂಆರ್ ಜ್ಞಾನಧಾರ ಟ್ರಸ್ಟ್, ಸಿಎಂಆರ್ ಸಮೂಹ ಶಿಕ್ಷಣ ಸಂಸ್ಥೆಗಳ ಸಿಇಒ, ಸಿಎಂಆರ್ ವಿಶ್ವವಿದ್ಯಾಲಯದ ಸಹ ಕುಲಾಧಿಪತಿ ಶ್ರೀ ಜಯದೀಪ್ ಕೆ.ಆರ್ ರೆಡ್ಡಿ, ಏಕ್ಯಾ ಸಮೂಹ ಶಾಲೆಗಳ ಸಂಸ್ಥಾಪಕರು, ಸಿಎಂಆರ್ ವಿಶ್ವವಿದ್ಯಾಲಯದ ಪ್ರೊವೊಸ್ಟ್ ಡಾ.ತ್ರಿಸ್ತಾ ರಾಮಮೂರ್ತಿ, ಕುಲಪತಿಗಳಾದ ಡಾ.ಎಚ್.ಬಿ.ರಾಘವೇಂದ್ರ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

**ಪ್ರಕೃತಿಯ ಜೊತೆ ಕಲಿಕೆ ಏಕ್ಯವನ ಶಾಲಾ ಪರಿಕಲ್ಪನೆ ವಿಶಿಷ್ಟವಾಗಿದ್ದು ಮಕ್ಕಳಿಗೆ ಪ್ರಾಥಮಿಕ ಹಂತದಲ್ಲಿಯೇ ಕಲಿಕೆಯ ಜೊತೆ ವನ್ಯಜೀವಿ, ಪರಿಸರ ವಿಜ್ಞಾನದ ಭಾಗವಾಗಲು ಪ್ರೇರೇಪಿಸುತ್ತದೆ ಈ ಆಶಯದಲ್ಲಿ ರೂಪುಗೊಳ್ಳುತ್ತಿರುವ ಏಕ್ಯಾವನ ಶಾಲಾ ಪರಿಕಲ್ಪನೆ ಶಿಕ್ಷಣ ವ್ಯವಸ್ಥೆಯ ಭಾಗವಾಗಬೇಕು.**

**– ಬಿಸ್ವಜಿತ್ ಮಿಶ್ರಾ,**
**ಮುಖ್ಯ ಅರಣ್ಯ ಸಂರಕ್ಷಣಾಧಿರಿ, ಅರಣ್ಯ ಇಲಾಖೆ, ಕರ್ನಾಟಕ ಸರ್ಕಾರ**

# ಕಬ್ಬಿನ ತೂಕ: ಕೊನೆಯಾಗದ ಮೋಸ

• ಉದಯವಾಹಿನಿ ಚನ್ನಮ್ಮನ ಕಿತ್ತೂರು

ಸಕ್ಕರೆ ಕಾರ್ಖಾನೆಗಳಿಗೆ ಪೂರೈಕೆ ಮಾಡುವ ರೈತರ ಕಬ್ಬು ತೂಕದಲ್ಲಿಯ ಮೋಸ ಇನ್ನೂ ನಿಂತಿಲ್ಲ. ಈ ಮೋಸದ ವಿರುದ್ಧ ಎಲ್ಲರೂ ಒಗ್ಗಟ್ಟಾಗಿ ಹೋರಾಟ ಮಾಡಬೇಕಿದೆ ಎಂದು ಸ್ವಾಮೀಜಿಗಳು ಹಾಗೂ ರೈತ ಮುಖಂಡರು ನಿರ್ಧರಿಸಿದರು. ತಾಲ್ಲೂಕಿನ ಡೊಂಬರಕೊಪ್ಪ ಪ್ರವಾಸಿ ಮಂದಿರದಲ್ಲಿ ನಡೆದ ಸ್ವಾಮೀಜಿಗಳು ಹಾಗೂ ರೈತ ಮುಖಂಡರ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಯಿತು.

ಸಾನ್ನಿಧ್ಯ ವಹಿಸಿದ್ದ ರಾಜಗುರು ಸಂಸ್ಥಾನ ಕಲ್ಮಠದ ಮಡಿವಾಳ ರಾಜಯೋಗೀಂದ್ರ ಸ್ವಾಮೀಜಿ ಮಾತನಾಡಿ, 'ಕಬ್ಬಿನ ತೂಕದಲ್ಲಿ ಮೋಸ ಮಾಡಲು ಕಾರ್ಖಾನೆಯವರಿಗೆ ಸ್ವಾಮೀಜಿ ಅಥವಾ ರೈತರು ಎಂಬ ಭೇದವಿಲ್ಲ. ನಾನು ಕಳಿಸಿದ ಕಬ್ಬನ್ನು ತೂಕದಲ್ಲಿ ಹೊಡೆಯುತ್ತಾರೆ ಎಂದು ದೂರಿದರು. ನಿಚ್ಚಣಕಿ ಗುರು ಮಡಿವಾಳೇಶ್ವರ



ಮಠದ ಪಂಚಾಕ್ಷರಿ ಸ್ವಾಮೀಜಿ ಮಾತನಾಡಿ, ಲಾರಿ ತೂಕದಲ್ಲಿ ಆರು ಸಾವಿರ ಮೌಲ್ಯದ ಎರಡು ಟನ್ ಕಬ್ಬು ಹೊಡೆದು 200 ಕೊಟ್ಟರೆ ಏನು ಬಂತು ಎಂದು ಪ್ರಶ್ನಿಸಿದರು. ಎಪಿಎಂಸಿ ತೂಕದ ಸೇತುವೆಯಲ್ಲಿ ರೈತರು ಕಬ್ಬು ತೂಕ ಮಾಡಬೇಕು. ಕಡಿಮೆ ಬಂದರೆ ಎಲ್ಲರೂ ಒಗ್ಗಟ್ಟಾಗಿ ಹೋರಾಡಬೇಕು. ಹೋರಾಟದಲ್ಲಿ ನಾವೂ ಪಾಲ್ಗೊಳ್ಳುತ್ತೇವೆ' ಎಂದು ಭರವಸೆ ನೀಡಿದರು. ರೈತ ಮುಖಂಡ ಇಂಗಳಗುಪ್ಪೆ ಕೃಷ್ಣಗೌಡ ಮಾತನಾಡಿ, ಸಮೀರವಾಡಿಯಲ್ಲಿ ಕಬ್ಬಿನ ಟ್ರ್ಯಾಕ್ಟರ್‌ಗಳಿಗೆ ಕಿಡಿಗೇಡಿಗಳು ಬೆಂಕಿ ಹಚ್ಚಿದ್ದಾರೆ. ರೈತರು ಈ ರೀತಿ ಮಾಡುವುದಿಲ್ಲ. ಬೆಂಕಿ ಹಚ್ಚಿದವರ ಮನೆ ಹಾಳಾಗಿ ಹೋಗುತ್ತದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು. ಮುಖಂಡ ಮೆಹಬೂಬ ನವಲಗುಂದ ಮಾತನಾಡಿ, ಕಬ್ಬಿನ ತೂಕದಲ್ಲಿ ಮಾತ್ರ ರೈತರಿಗೆ ಮೋಸ ಆಗುತ್ತಿಲ್ಲ. ಸೋಯಾಬೀನ್, ಗೋವಿನಜೋಳ ಸೇರಿ ಕೆಲವು ಬೆಳೆಗಳಲ್ಲಿ ಕ್ವಿಂಟಲ್‌ಗೆ ಆರು ಕೆ.ಜಿ ಮೋಸ ಮಾಡುತ್ತಿದ್ದಾರೆ. ವರ್ತಕರಿಗೆ ಕಾರ್ಖಾನೆ ಮಾಲೀಕರಿಗೆ ಅನುಕೂಲವಾಗುವ ಕಾಯ್ದೆ ಸರ್ಕಾರ ತಂದಿದೆ. ಹಾಗಾಗಿ ಸರ್ಕಾರದ ವಿರುದ್ಧ ರೈತರು ಒಗ್ಗಟ್ಟಾಗಿ ಹೋರಾಟ ರೂಪಿಸಬೇಕಿದೆ' ಎಂದರು.

• ಹುಬ್ಬಳ್ಳಿ ನೃಪತುಂಗ ಬೆಟ್ಟದ ತಪ್ಪಲಿನಲ್ಲಿರುವ ಅನುದಾನಿತ ಜಗಜೀವನ್ ರಾಮ್ ವಸತಿ ನಿಲಯ

# ಹಾಸ್ಟೆಲ್ ಅಧೋಗತಿ; ಕೊಠಡಿಯಲ್ಲಿ ಫೈರ್ ಕ್ಯಾಂಪ್

• ಉದಯವಾಹಿನಿ ಹುಬ್ಬಳ್ಳಿ

ನಗರದ ನೃಪತುಂಗ ಬೆಟ್ಟದ ತಪ್ಪಲಿನಲ್ಲಿರುವ ಜಗಜೀವನ್ ರಾಮ್ ಅನುದಾನಿತ ಬಾಲಕರ ವಸತಿ ನಿಲಯ ಅವಸಾನದ ಅಂಚಿಗೆ ತಲುಪಿದೆ. 40ಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಲ್ಲಿ ವಾಸವಿದ್ದು, ಊಟ ತಿಂಡಿ ಹೊರತುಪಡಿಸಿ ಮತ್ಯಾವ ಸೌಲಭ್ಯಗಳು ಇಲ್ಲದೆ ಪರದಾಡುತ್ತಿದ್ದಾರೆ.

ಸರ್ಕಾರದ ಅನುದಾನದಲ್ಲಿ ನಿರ್ಮಾಣವಾದ ಕಟ್ಟಡಕ್ಕೆ ಇದೀಗ 45 ವರ್ಷ. ಧಾರವಾಡ ಜಿಲ್ಲಾ ಆದಿಜಾಂಭವ ಸಂಘದ ಅಧೀನದಲ್ಲಿ ಸರ್ಕಾರದ ಅನುದಾನ ಪಡೆದು ನಿರ್ವಹಣೆ ಮಾಡಲಾಗುತ್ತಿದೆ. ಎರಡು ಅಂತಸ್ತಿನ ಈ ಕಟ್ಟಡದಲ್ಲಿ 30ಕ್ಕೂ ಹೆಚ್ಚು ಕೊಠಡಿಗಳಿದ್ದು, ಬಹುತೇಕ ಹಾಳಾಗಿವೆ. ಕಟ್ಟಡದ ಗೋಡೆಗಳು, ಸ್ಲ್ಯಾಬ್‌ಗಳು, ಫಿಲ್ಲರ್‌ಗಳು ಅಲ್ಲಲ್ಲಿ ಬಿರುಕು ಬಿಟ್ಟಿದ್ದು. ಕೆಲವೆಡೆ ಸಿಮೆಂಟ್ ಪ್ಲಾಸ್ಟರ್ ಉದುರಿ ಬಿದ್ದಿವೆ. ಕಬ್ಬಿಣದ ಸರಳುಗಳು ತುಕ್ಕು ಹಿಡಿದು ಮುರಿದಿವೆ. ಪ್ರವೇಶದ್ವಾರದ ಪಕ್ಕದಲ್ಲಿಯ ಕಿಟಕಿಯ ಗಾಜು ಒಡೆದಿದ್ದರಿಂದ, ಒಳಗಿನಿಂದ ರಟ್ಟಿನ ತುಂಡು ಅಳವಡಿಸಲಾಗಿದೆ.

ಕಟ್ಟಡದ ಕೆಳ ಅಂತಸ್ತಿನಲ್ಲಿ ಮಕ್ಕಳು ವಾಸಿಸುವ ಮೂರು ನಾಲ್ಕು ಕೊಠಡಿಗಳು ಮಾತ್ರ ಸಾಧಾರಣ ಎನ್ನುವಂತಿವೆ. ಕೆಲವು ಕೊಠಡಿಗಳ ಬಾಗಿಲು ಮುರಿದಿದ್ದರೆ, ಮತ್ತೆ ಕೆಲವು ಕೊಠಡಿಗಳ ನೆಲ ಹಾಳಾಗಿದೆ. ಕೆಲವು ಕೊಠಡಿಗಳಲ್ಲಿ ಹಳೇ ಸಾಮಗ್ರಿಗಳನ್ನು ಸಂಗ್ರಹಿಸಿಟ್ಟು, ಗೋದಾಮು ಆಗಿ ಪರಿವರ್ತಿಸಲಾಗಿದೆ. ನಿಲಯದ ತುಂಬೆಲ್ಲಾ ಜೇಡರ ಬಲೆಗಳೇ ತುಂಬಿಕೊಂಡಿವೆ. ಮಳೆ ಬಂದಾಗ ಕಟ್ಟಡ ತುಂಬೆಲ್ಲ ನೀರು ಸೋರುತ್ತದೆ. ಎರಡನೇ ಅಂತಸ್ತಿನಲ್ಲಿರುವ ಕೆಲವು ಕೊಠಡಿಗಳಲ್ಲಿ ರಾತ್ರಿ ವೇಳೆ ಮೋಜು ಮಸ್ತಿ ಮಾಡುತ್ತಿರುವ ಕುರುಹುಗಳಿವೆ. ಕೆಲವು ವಸ್ತುಗಳನ್ನು ಸುಟ್ಟು ಫೈರ್ ಕ್ಯಾಂಪ್



ಉದಯವಾಹಿನಿ ಚಿತ್ರ

> ಶೀಘ್ರ ವಸತಿ ನಿಲಯಕ್ಕೆ ಭೇಟಿ ನೀಡಿ ಪರಿಶೀಲಿಸುತ್ತೇನೆ. ಮಕ್ಕಳ ಕಲಿಕೆಗೆ ಸಮಸ್ಯೆಯಾಗದಂತೆ ಮೂಲಸೌಲಭ್ಯ ಕಲ್ಪಿಸಿಕೊಡಲು ಕ್ರಮ ಕೈಗೊಳ್ಳಲಾಗುವುದು. -ಜಿಲ್ಲಾಧಿಕಾರಿ

ಹಾಕಿರುವ ದೃಶ್ಯಗಳು ಕಾಣಸುತ್ತವೆ. ಬಹುತೇಕ ಕೊಠಡಿಗಳು ದೂಳು ಹಿಡಿದಿದ್ದು. ಕಬೋರ್ಡ್‌ಗಳು ಸಹ ಹಾಳಾಗಿವೆ. ನಿರ್ವಹಣೆ ಕೊರತೆ ಹಾಗೂ ನಿರ್ಲಕ್ಷ್ಯದಿಂದಾಗಿ ಬಡ ಮಕ್ಕಳ ವಸತಿ ನಿಲಯ ಪಾಳುಬಿದ್ದ ಕಟ್ಟಡದಂತೆ ಗೋಚರಿಸುತ್ತಿದೆ.

'ನೀರಿನ ವ್ಯವಸ್ಥೆ ಸರಿಯಾಗಿಲ್ಲದ ಕಾರಣ ಎರಡು-ಮೂರು ದಿನಕ್ಕೊಮ್ಮೆ ಸ್ನಾನ ಮಾಡುತ್ತೇವೆ. ಶೌಚಾಲಯ ಹಾಗೂ ಸ್ನಾನದ ಗೃಹಗಳು ಹಾಳಾಗಿದ್ದು ತುರ್ತಾಗಿ ದುರಸ್ತಿಪಡಿಸಬೇಕು. ರಾತ್ರಿ ವೇಳೆ ಓದಲು ಒಮ್ಮೊಮ್ಮೆ ದೀಪದ ವ್ಯವಸ್ಥೆಯೂ ಇರುವುದಿಲ್ಲ. ನಾವೆಲ್ಲ ಕೊಪ್ಪಳ, ನವಲಗುಂದ, ಹಾವೇರಿ, ಗದಗ ಭಾಗದಿಂದ ಓದಬೇಕೆಂಬ ಆಸೆಯಿಂದ ಬಂದ ಬಡ ಕುಟುಂಬದ ಮಕ್ಕಳು. ಕನಿಷ್ಠ

## ಪ್ರಸ್ತಾವಕ್ಕೆ ಬೆಲೆಯಿಲ್ಲ

ಧಾರವಾಡ ಜಿಲ್ಲಾ ಆದಿಜಾಂಭವ ಸಂಘದ ಆಶ್ರಯದಲ್ಲಿ ರಚಿಸಿಕೊಂಡು ಸಮಿತಿ ಅಡಿಯಲ್ಲಿ ವಸತಿ ನಿಲಯ ಕಾರ್ಯನಿರ್ವಹಿಸುತ್ತಿದೆ. ಸರ್ಕಾರ ನೀಡುವ ಉಟೋಪಚಾರದ ಅನುದಾನ ಎಲ್ಲಿಯೂ ಸಾಕಾಗುತ್ತಿಲ್ಲ. ಕಟ್ಟಡ ದುರಸ್ತಿ ಹಾಗೂ ನಿರ್ವಹಣೆಗೆ ಪ್ರಸ್ತಾವ ಸಲ್ಲಿಸಿದ್ದರೂ ಪ್ರಯೋಜನವಾಗಿಲ್ಲ. ಮಕ್ಕಳಿಗೆ ಆಹಾರ ಪದಾರ್ಥದ ಕೊರತೆಯಾದಾಗೆಲ್ಲ ನಮ್ಮ ಹೊಲದಲ್ಲಿ ಬೆಳೆದ ಬೇಳೆ-ಕಾಳು ಹಾಗೂ ಇನ್ನಿತರ ದವಸ-ಧಾನ್ಯಗಳನ್ನು ತಂದು ನಿಲಯಕ್ಕೆ ಕೊಡುತ್ತೇನೆ' ಎಂದು ವಸತಿ ನಿಲಯ ಸಮಿತಿ ಅಧ್ಯಕ್ಷ ವಸಂತ ಜೋಗಣ್ಣವರ ಹೇಳುತ್ತಾರೆ.



ಉದಯವಾಹಿನಿ ಚಿತ್ರ

ಮೂಲಸೌಲಭ್ಯವನ್ನಾದರೂ ಒದಗಿಸಿದರೆ ಅನುಕೂಲವಾಗುತ್ತದೆ'

> ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯ್ತಿ ವತಿಯಿಂದ ವಸತಿ ನಿಲಯಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಲಾಗುವುದು. ತಾಲ್ಲೂಕಾಡಳಿತಕ್ಕೆ ನಿರ್ದೇಶನ ನೀಡಿ ತುರ್ತು ಕ್ರಮಕ್ಕೆ ಸೂಚಿಸಲಾಗುವುದು. -ಭುವನೇಶ ಪಾಟೀಲ್ ಸಿಇಒ ಜಿ.ಪಂ ಧಾರವಾಡ

> ವಸತಿ ನಿಲಯ ದುರಸ್ತಿ ಮತ್ತು ನಿರ್ವಹಣೆ ಕಷ್ಟವಾಗುತ್ತಿದೆ. ಹೀಗೆ ಮುಂದುವರಿದರೆ ಯಾವುದಾದರೂ ಚಾರಿಟೇಬಲ್‌ಗೆ ಅಥವಾ ಸರ್ಕಾರಕ್ಕೆ ವಹಿಸಿಕೊಡುವ ಯೋಚನೆ ಇದೆ. -ವಸಂತ ಜೋಗಣ್ಣವರ ಅಧ್ಯಕ್ಷ ವಸತಿ ನಿಲಯ ಸಮಿತಿ

ಎಂದು ವಸತಿ ನಿಲಯದ ವಿದ್ಯಾರ್ಥಿಗಳು ಹೇಳುತ್ತಾರೆ.

ಈ ಹಿಂದೆ ಸ್ಥಳೀಯ ವಿದ್ಯಾರ್ಥಿಗಳು ಸೇರಿದಂತೆ ಧಾರವಾಡ ಜಿಲ್ಲೆಯ ಸುತ್ತಮುತ್ತಲಿನ 400ಕ್ಕೂ ಹೆಚ್ಚು ವಿದ್ಯಾರ್ಥಿಗಳು ವಸತಿಯಿದ್ದು, ಪಕ್ಕದಲ್ಲಿರುವ ಜನತಾ ಪ್ರೌಢಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರು. ಸೌಲಭ್ಯದ ಕೊರತೆಯಿಂದ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿದೆ.

ಅನುದಾನಿತ ವಸತಿ ನಿಲಯವಾಗಿದ್ದರಿಂದ, ಸರ್ಕಾರ ಪ್ರತಿ ತಿಂಗಳು ಪ್ರತಿ ವಿದ್ಯಾರ್ಥಿಗೆ ಊಟ-ಉಪಾಹಾರಕ್ಕಷ್ಟೇ ರೂ.1,000 ಸಹಾಯಧನ ನೀಡುತ್ತದೆ. ಅದು ಸಹ ಎರಡು-ಮೂರು ತಿಂಗಳಿಗೊಮ್ಮೆ ಬಿಡುಗಡೆಯಾಗುತ್ತದೆ' ಎಂದು ವಸತಿ ನಿಲಯದ ಸಮಿತಿಯ ಅಧ್ಯಕ್ಷ ವಸಂತ ಜೋಗಣ್ಣವರ ತಿಳಿಸಿದರು.

# ಸಕ್ಕರೆ ಕಾರ್ಖಾನೆ ಆರಂಭ: ರೈತರು ನಿರಾಳ

• ಉದಯವಾಹಿನಿ ಬಾಗಲಕೋಟೆ

ಜಿಲ್ಲೆಯಲ್ಲಿ ಸಕ್ಕರೆ ಕಾರ್ಖಾನೆಗಳು ಕಬ್ಬು ನುರಿಸುವುದನ್ನು ಆರಂಭಿಸಿರುವುದು ಕಬ್ಬು ಬೆಳೆದು ಕಟಾವಿಗಾಗಿ ಕಾಯುತ್ತಿದ್ದ ರೈತರನ್ನು ನಿರಾಳರನ್ನಾಗಿಸಿದೆ. ಅ.20ರಿಂದ ಜಿಲ್ಲೆಯಲ್ಲಿನ 14 ಸಕ್ಕರೆ ಕಾರ್ಖಾನೆಗಳು ಕಬ್ಬು ನುರಿಸುವಿಕೆ ಆರಂಭಿಸಬೇಕಿತ್ತು. ಬೆಳಗಾವಿ ಜಿಲ್ಲೆಯಲ್ಲಿ ಕಬ್ಬಿನ ಬೆಲೆ ನಿಗದಿಗಾಗಿ ಹೋರಾಟ ತೀವ್ರಗೊಂಡಿದ್ದರಿಂದ ಕಾರ್ಖಾನೆಗಳ ಆರಂಭ ವಿಳಂಬವಾಗಿತ್ತು. ರಾಜ್ಯ ಸರ್ಕಾರ ಮಧ್ಯಪ್ರವೇಶಿಸಿ ಬೆಲೆ ಘೋಷಣೆ ಮಾಡಿದ ಮೇಲೆ ರೈತರು ನಿರಾಳವಾಗಿದ್ದರು.

ಜಿಲ್ಲೆಯಲ್ಲಿನ ಕಾರ್ಖಾನೆಗಳನ್ನು ಆರಂಭಿಸಬೇಕು ಎನ್ನುವಾಗಲೇ ಮುಧೋಳದಲ್ಲಿ ರೈತರು ಪ್ರತಿ ಟನ್ ಕಬ್ಬಿಗೆ ರೂ.3,500 ನೀಡಬೇಕು ಎಂದು ಆಗ್ರಹಿಸಿ ಪ್ರತಿಭಟನೆ ಆರಂಭಿಸಿದರು. ಬೆಲೆ ನಿಗದಿಯಾಗುವವರೆಗೆ ಕಾರ್ಖಾನೆಗಳನ್ನು ಆರಂಭಿಸುವಂತಿಲ್ಲ ಎಂದು ಪಟ್ಟು ಹಿಡಿದರು.

ಆರಂಭವಾಗಿದ್ದ ಇಐಡಿ ಪ್ಯಾರಿ, ಮೆಲ್‌ಬೊ ಕಾರ್ಖಾನೆಗಳನ್ನು ಬಂದ್ ಮಾಡಲಾಯಿತು.



ಉದಯವಾಹಿನಿ ಚಿತ್ರ

## ಟ್ರ್ಯಾಕ್ಟರ್‌ಗಳ ಮಾಲೀಕರಿಗೆ ಕೈತುಂಬಾ ಕೆಲಸ

ಅಷ್ಟೊತ್ತಿಗಾಗಲೇ ಕಬ್ಬು ಕಟಾವು ಆರಂಭಿಸಿದ್ದ ರೈತರು ಇಕ್ಕಟ್ಟಿಗೆ ಸಿಲುಕಿದರು. ಮಹಾರಾಷ್ಟ್ರ ಹಾಗೂ ರಾಜ್ಯದ ವಿವಿಧೆಡೆಯಿಂದ ಕಬ್ಬು ಗ್ಯಾಂಗ್ ಕರೆಯಿಸಿದ್ದವರೂ ಸಂಕಷ್ಟಕ್ಕೆ ಸಿಲುಕಿದರು. ಸಾವಿರಾರು ಕಾರ್ಮಿಕರು ಕೆಲಸವಿಲ್ಲದೇ ಹೊಲಗಳಲ್ಲಿ ಕೈಕಟ್ಟಿ ಕುಳಿತುಕೊಳ್ಳುವಂತಾಯಿತು.

ಟ್ರ್ಯಾಕ್ಟರ್, ಲಾರಿಗಳಿಗೆ ಕಬ್ಬು ಸಾಗಿಸುವ ಕೆಲಸ ಸಿಗಲಿದೆ ಎಂದು ಕಾದು ಕುಳಿತಿದ್ದ ಅವುಗಳ ಮಾಲೀಕರೂ ಕಾಯ್ದುಕೊಂಡು ಕೂಡಬೇಕಾಯಿತು. ದಿನಗಳು ಹೆಚ್ಚುತ್ತಾ ಹೋದಂತೆ ರೈತರ ಚಡಪಡಿಕೆ ಹೆಚ್ಚಾಗಿತ್ತು. ಬಾಗಲಕೋಟೆ, ಬಾದಾಮಿ ಭಾಗದ ಕಾರ್ಖಾನೆಗಳು ಆರಂಭವಾಗಿದ್ದು ಮುಧೋಳ, ಜಮಖಂಡಿ, ಬೀಳಗಿ ಭಾಗದ ರೈತರು ಸಂಕಷ್ಟ ಮತ್ತಷ್ಟು ಹೆಚ್ಚಿಸಿತ್ತು.

ತಮ್ಮ ಕಬ್ಬು ಕಟಾವು ಆರಂಭವಾಗುವುದು ಯಾವಾಗ ಎಂಬ ಪ್ರಶ್ನೆ ಅವರನ್ನು ಕಾಡುತ್ತಿತ್ತು. ಕೆಲವರು ಹೊರ ಜಿಲ್ಲೆಗಳಿಗೆ ಕಬ್ಬು ಸಾಗಿಸಲು ಆರಂಭಿಸಿದ್ದರು.

ಸಮೀರವಾಡಿಯ ಗೋದಾವರಿ ಸಕ್ಕರೆ ಕಾರ್ಖಾನೆಯಲ್ಲಿ ಟ್ರ್ಯಾಕ್ಟರ್‌ಗಳಿಗೆ ಬೆಂಕಿ ಹಚ್ಚಿದ ಮೇಲೆ ಮತ್ತಷ್ಟು ಆತಂಕಗೊಂಡಿದ್ದರು. ಮುಂದಿನ ದಿನಗಳಲ್ಲಿ ಕಬ್ಬು ಕಟಾವು ಹೇಗೆ ಎಂಬ ಆತಂಕ ಅವರನ್ನು ಆವರಿಸಿತ್ತು.

# ಹುಟ್ಟೂರ ಸನ್ಮಾನಕ್ಕಿಂತ ಮಿಗಿಲಿಲ್ಲ: ಕೋಟ

• ಉದಯವಾಹಿನಿ ಉಡುಪಿ

ವ್ಯಕ್ತಿಗೆ ಎಷ್ಟೇ ಸನ್ಮಾನಗಳು, ಗೌರವಗಳು ಸಿಕ್ಕಿದರೂ ಹುಟ್ಟೂರಿನ ಸನ್ಮಾನ ಎಲ್ಲಾಕ್ಕಿಂತ ಮಿಗಿಲಾದುದು ಎಂದು ಸಂಸದ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು. ಚಂಡೀಗಢ ಮುಖ್ಯ ಕಾರ್ಯದರ್ಶಿ ಎಚ್. ರಾಜೇಶ್ ಪ್ರಸಾದ್ ಅಭಿನಂದನಾ ಸ್ವಾಗತ ಸಮಿತಿ ವತಿಯಿಂದ ಎಂಜಿಎಂ ಕಾಲೇಜಿನ ಮುದ್ದಣ ಮಂಟಪದಲ್ಲಿ ಶನಿವಾರ ಎಚ್. ರಾಜೇಶ್ ಪ್ರಸಾದ್ ಅವರಿಗೆ ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು. ಕಟ್ಟಕಡೆಯ ಸಮಾಜಕ್ಕೆ ಸೇರಿದ ವ್ಯಕ್ತಿಗಳು ಉನ್ನತ ಹುದ್ದೆಗೇರುವುದು ಸುಲಭದ ಮಾತಲ್ಲ. ಅಂತದ್ದರಲ್ಲಿ ಮರಾಠಿ ಸಮುದಾಯದ ರಾಜೇಶ್ ಪ್ರಸಾದ್ ಅವರು ಉನ್ನತ ಹುದ್ದೆಗೇರುವ ಮೂಲಕ ಎಲ್ಲರಿಗೂ ಮಾದರಿಯಾಗಿದ್ದಾರೆ ಎಂದರು. ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಮಾತನಾಡಿ, ಕರಾವಳಿಯಲ್ಲಿ ವೈದ್ಯಕೀಯ, ಎಂಜಿನಿಯರಿಂಗ್ ಕ್ಷೇತ್ರದ ಕಡೆಗೆ ಹೆಚ್ಚಿನ ವಿದ್ಯಾರ್ಥಿಗಳು ಆಸಕ್ತಿ ವಹಿಸುತ್ತಿದ್ದಾರೆ. ಆದರೆ ಐಎಎಸ್, ಕೆಎಎಸ್ ಕಡೆಗೆ ಒಲವು ತೋರುತ್ತಿಲ್ಲ ಎಂದು ಹೇಳಿದರು. ರಾಜೇಶ್ ಪ್ರಸಾದ್ ಅವರು ಈ ಭಾಗದ



ಉದಯವಾಹಿನಿ ಚಿತ್ರ

ವಿದ್ಯಾರ್ಥಿಗಳಿಗೆ ಆದರ್ಶವಾಗಬೇಕು. ನಮ್ಮಲ್ಲಿ ಪ್ರತಿಭೆ ಇದೆ, ಆದರೆ ಪ್ರಯತ್ನ ಇಲ್ಲ. ಈ ಭಾಗದ ಮಕ್ಕಳಲ್ಲಿ ಐಎಎಸ್ ಕನಸನ್ನು ತುಂಬುವ ಕೆಲಸವನ್ನು ನಾವೆಲ್ಲ ಮಾಡಬೇಕಾಗಿದೆ ಎಂದರು. ಮಾಜಿ ಸಚಿವ ಪ್ರಮೋದ್ ಮಧ್ವರಾಜ್ ಮಾತನಾಡಿ, ಕುಗ್ರಾಮದಲ್ಲಿ ಹುಟ್ಟಿ, ಸರ್ಕಾರಿ ಶಾಲೆಯಲ್ಲಿ ಕಲಿತು, ರೈಲ್ವೆ ಇಲಾಖೆಯಲ್ಲಿ ಕೆಲಸ ಮಾಡಿ, ಅನಂತರ ಐಎಎಸ್ ಮಾಡಿರುವ ರಾಜೇಶ್ ಪ್ರಸಾದ್ ಅವರ ಜೀವನ ಮಿದ್ಯಾರ್ಥಿಗಳಿಗೆ ಪ್ರೇರಣಾದಾಯಕ. ಶ್ರಮ ಪಟ್ಟರೆ ಸಾಮಾನ್ಯ ಕುಟುಂಬಗಳಿಂದ ಬರುವ ವಿದ್ಯಾರ್ಥಿಗಳಿಗೂ ಉನ್ನತ ಸಾಧನೆ ಮಾಡಬಹುದು ಎಂದರು.

# ಆದಾಯವಿದ್ದರೂ, ಮೂಲಸೌಕರ್ಯಕ್ಕೆ ಬರ

• ಉದಯವಾಹಿನಿ ಗಂಗಾವತಿ

ನಗರದ ಕೃಷಿ ಉತ್ಪನ್ನ ಮಾರುಕಟ್ಟೆ (ಎಪಿಎಂಸಿ) 72 ವಸಂತಗಳನ್ನು ಪೂರೈಸಿದ್ದರೂ ಮಾರುಕಟ್ಟೆಗೆ ಸುಸಜ್ಜಿತ ರಸ್ತೆ, ಗೋದಾಮು, ರೈತ ಭವನ ಸೌಕರ್ಯ ಹೊರತುಪಡಿಸಿದರೆ ಅಗತ್ಯ ಸೌಕರ್ಯಗಳು ಮರೀಚಿಕೆಯಾಗಿದೆ. ಮಾರುಕಟ್ಟೆ ಮೇಲ್ನೋಟಕ್ಕೆ ಸುಂದರವಾಗಿದ್ದು ಒಳಗೆ ಅವ್ಯವಸ್ಥೆಯ ಆಗರವಾಗಿದೆ. ಎಪಿಎಂಸಿಯಲ್ಲಿ ವಾಹನಗಳ ನಿಲುಗಡೆಗೆ ವ್ಯವಸ್ಥೆವಿದ್ದರೂ ಲಾರಿ, ಬೈಕ್, ಕಾರುಗಳು ಎಲ್ಲೆಂದರಲ್ಲೆ ರಸ್ತೆ ಒತ್ತುವರಿ ಮಾಡಿಕೊಂಡು ನಿಲ್ಲುತ್ತವೆ. ತರಕಾರಿ ಖರೀದಿಗೆ ಬರಲು ಗ್ರಾಹಕರು, ಸವಾರರು ಪರದಾಡುವ ಸ್ಥಿತಿ ನಿರ್ಮಾಣವಾಗಿರುತ್ತದೆ.

164 ಎಕರೆ ವಿಸ್ತೀರ್ಣದಲ್ಲಿ ಹರಡಿರುವ ಮಾರುಕಟ್ಟೆಯಲ್ಲಿ ತರಕಾರಿ, ವೇ ಬ್ರಿಡ್ಜ್, ಭತ್ತ ಸೇರಿ ಏಕದಳ ಧಾನ್ಯಗಳ ಮಾರಾಟ ಜರುಗುತ್ತದೆ. ವರ್ಷದಿಂದ ವರ್ಷಕ್ಕೆ ಎಪಿಎಂಸಿ ಆದಾಯ ಹೆಚ್ಚುತ್ತಲೇ ಇದೆ. ರೈತರು, ರಫ್ತುದಾರರು, ಕಮಿಷನ್ ಏಜೆಂಟ್, ವರ್ತಕರು, ದಾಸ್ತಾನುದಾರರು, ಚಿಲ್ಲರೆ ಮಾರಾಟಗಾರರು, ಹಮಾಲಿಗಳು ನಿತ್ಯ ಮಾರುಕಟ್ಟೆಯಲ್ಲಿ ತಮ್ಮ ಕಾಯಕ ನಡೆಸುತ್ತಾರೆ. ಆದರೆ ಇಲ್ಲಿ ಜನಸಂಖ್ಯೆಗೆ ತಕ್ಕಂತೆ ಸೌಕರ್ಯಗಳೇ ದೊರೆಯಲ್ಲ ಎಂಬುದು ಮಾರುಕಟ್ಟೆಗೆ ಭೇಟಿ ನೀಡುವ ಪ್ರತಿಯೊಬ್ಬರ ದೂರಾಗಿದೆ.

**ಸ್ವಚ್ಛತೆ ಮಾಯ:** ಎಪಿಎಂಸಿಯಲ್ಲಿ ನಿತ್ಯ ಬೆಳಿಗಿನ ಜಾವ



ಉದಯವಾಹಿನಿ ಚಿತ್ರ

3ರಿಂದ 11ರವರೆಗೆ ತರಕಾರಿ ಮಾರುಕಟ್ಟೆ ನಡೆಯುತ್ತದೆ. ಇಲ್ಲಿನ ಚಿಲ್ಲರೆ ವ್ಯಾಪಾರಿಗಳು, ದಲ್ಲಾಳಿಗಳು, ಅಂಗಡಿಗಳ ಮಾಲೀಕರು ಬಳಕೆಗೆ ಬಾರದ ತರಕಾರಿ, ಸೊಪ್ಪು, ಕಸ, ಪ್ಲಾಸ್ಟಿಕ್ ತ್ಯಾಜ್ಯಗಳನ್ನು ಚರಂಡಿ ಸೇರಿದಂತೆ ಖಾಲಿ ಸ್ಥಳಗಳಲ್ಲಿ ಎಸೆಯುತ್ತಾರೆ. ರಾಶಿಗಟ್ಟಲೆ ಸಂಗ್ರಹವಾಗಿ ಕಸ ದುರ್ವಾಸನೆ ಜೊತೆಗೆ ಸೊಳ್ಳೆಗಳ ಆವಾಸ ಸ್ಥಾನಗಳಾಗಿ ನಿರ್ಮಾಣವಾಗುತ್ತಿದೆ.

**ಬಯಲೆ ದಿಕ್ಕು:** ಎಪಿಎಂಸಿಯಲ್ಲಿ ಎರಡು ಕಡೆ ಶೌಚಾಲಯ ಪ್ರಾಂಗಣಗಳಿದೆ. ಆದರೆ, ಅವುಗಳ ನಿರ್ವಹಣೆಯಿಲ್ಲದ ಕಾರಣ ಇದ್ದು ಇಲ್ಲದಂತಾಗಿವೆ. ಮಾರುಕಟ್ಟೆಗೆ ನಿತ್ಯ ಸಾವಿರಾರು ಜನ ಭೇಟಿ ನೀಡುವ ಕಾರಣ ಅನಿವಾರ್ಯವಾಗಿ ಎಲ್ಲರೂ ಮಲ, ಮೂತ್ರ ವಿಸರ್ಜನೆಗೆ ಎಪಿಎಂಸಿಯಲ್ಲಿ ಬಯಲು ಪ್ರದೇಶವನ್ನೇ ಆಶ್ರಯಿಸುತ್ತಾರೆ.

# ಹೆಚ್ಚುತ್ತಿದೆ ಬಿಡಾಡಿ ದನ-ಕರುಗಳ ಕಳ್ಳತನ

• ಉದಯವಾಹಿನಿ ಹೊಸನಗರ

ಪಟ್ಟಣದಲ್ಲಿರುವ ಬಿಡಾಡಿ ದನ-ಕರುಗಳನ್ನು ಕಳವು ಮಾಡುತ್ತಿರುವ ಪ್ರಕರಣಗಳು ಹೆಚ್ಚುತ್ತಿದ್ದು, ಅಕ್ರಮ ಗೋಸಾಗಣೆ ಎಗ್ಗಿಲ್ಲದೆ ನಡೆಯುತ್ತಿದೆ. ಸರ್ಕಾರ ಅವುಗಳ ರಕ್ಷಣೆ ನಿಟ್ಟಿನಲ್ಲಿ ಗೋಶಾಲೆ ಸ್ಥಾಪಿಸಬೇಕು ಎಂದು ಸ್ಥಳೀಯರು ಕೋರಿದ್ದಾರೆ.ಇಲ್ಲಿನ ಬಸ್ ನಿಲ್ದಾಣ, ರಸ್ತೆ, ಆಟದ ಮೈದಾನ ಮತ್ತಿತರ ಕಡೆ ತಿರುಗಾಡುತ್ತಿರುವ ಬಿಡಾಡಿ ದನ-ಕರುಗಳು ಕಳ್ಳರ ಪಾಲಾಗುತ್ತಿವೆ. ಅವು ಮಲಗಿರುವ ಜಾಗದ ಮಾಹಿತಿ ಕಲೆ ಹಾಕುವ ದನಗಳ್ಳರು ರಾತ್ರಿ ಆಗುತ್ತಿದ್ದಂತೆಯೇ ಕಳವು ಮಾಡುತ್ತಿದ್ದಾರೆ.

ಬೆಲೆಬಾಳುವ ವಾಹನಗಳಲ್ಲಿ ಪ್ರವಾಸಿಗರ ಸೋಗಿನಲ್ಲಿ ಬರುವ ಖದೀಮರು ರಸ್ತೆಯಲ್ಲಿ ಮಲಗಿದ್ದ ದನಗಳನ್ನು ಅನಾಮತ್ತಾಗಿ ಎತ್ತಾಕಿಕೊಂಡು ಹೋಗುವ ಘಟನೆಗಳು ನಡೆಯುತ್ತಲೇ ಇವೆ. ರಾತ್ರಿ ಮಲಗಿದ್ದ ಹಸುಗಳು ಮಂಗಮಾಯ ಆಗುತ್ತಿವೆ ಎಂಬುದು ಸ್ಥಳೀಯರ ಆರೋಪ.

'ಇಲ್ಲಿನ ಜೆಸಿಎಂ ರಸ್ತೆಯಲ್ಲಿ 18ಕ್ಕೂ ಹೆಚ್ಚು ದನಗಳು ಇದ್ದವು. ಇಲ್ಲಿನ ಅಂಗಡಿ, ಮನೆಗಳವರು ನೀಡುವ ಆಹಾರ ಸೇವಿಸಿ ಓಡಾಡಿಕೊಂಡು ಇದ್ದವು. ದಿನವೂ ಬೀದಿ ಪಕ್ಕ ಮಲಗುತ್ತಿದ್ದವು. ಇದೀಗ ಅವುಗಳ ಪೈಕಿ ನಾಲ್ಕು ದನಗಳು ಮಾತ್ರ ಉಳಿದಿವೆ.



ಉದಯವಾಹಿನಿ ಚಿತ್ರ

ಇನ್ನುಳಿದ ದನಗಳು ಎಲ್ಲಿಹೋದವು ಎಂಬುದೇ ಗೊತ್ತಾಗದಾಗಿದೆ. ಕಳ್ಳರು ಹೊತ್ತೊಯ್ದಿರಬಹುದು' ಎಂದು ಸ್ಥಳೀಯ ವರ್ತಕ ನಾಗರಾಜ್ ಎದುರು ಶಂಕೆ ವ್ಯಕ್ತಪಡಿಸಿದರು.ಇಲ್ಲಿನ ನೆಹರೂ ಮೈದಾನದ ಬಳಿ ಸಂಜೆಯಾಗುತ್ತಿದ್ದಂತೆ ಹಿಂಡುಹಿಂಡಾಗಿ ಬರುತ್ತಿದ್ದ ಹಸುಗಳು ಕಾಣೆಯಾಗಿ ಇದೀಗ ಬೆರಳೆಣಿಕೆಯಷ್ಟಿವೆ. ನಾನು ಬೆಳಿಗ್ಗೆ ವಾಕಿಂಗ್ ಬರುವಾಗ ಹಸುಗಳೇ ಇಲ್ಲದಿರುವುದನ್ನು ಗಮನಿಸಿದ್ದೇನೆ' ಎಂದು ಉಮೇಶ್ ಎಂಬವರು ಹೇಳಿದರು. ಪಟ್ಟಣದ ಹೊರವಲಯದ ಮಾವಿನ ಕೊಪ್ಪ, ಮಾರಿಗುಡ್ಡ, ದ್ಯಾವರ್ಸಗಳ ಬಳಿ ನಡೆಯುತ್ತಿರುವ ದನ ಕಳ್ಳತನವು ಗುಟ್ಟಾಗಿ ಉಳಿದಿಲ್ಲ. ದನ-ಕರುಗಳ ಸಾಗಣೆ ಕೇವಲ ಪಟ್ಟಣ ಪ್ರದೇಶದಲ್ಲಿ ಮಾತ್ರವಲ್ಲದೇ ಹಳ್ಳಿಹಳ್ಳಿಯಲ್ಲೂ ತನ್ನ ಕಬಂಧಬಾಹುವನ್ನು ಚಾಚಿದೆ. ತಾಲ್ಲೂಕಿನ ಗಡಿಭಾಗ ಯಡೂರು ಸುಳುಗೋಡು, ನಿಟ್ಟೂರು, ನಗರ ಸೇರಿ ಎಲ್ಲಡೆಯೂ ದನಗಳ ಕಳ್ಳ ಸಾಗಣೆ ಎಗ್ಗಿಲ್ಲದೆ ಸಾಗಿದೆ.

> ಸಂಜೆ ದನ-ಕರುಗಳು ಮನೆಗೆ ಬರದಿದ್ದರೆ ಅವು ಕಳ್ಳರ ಪಾಲಾಗಿವೆ ಎಂದೇ ಅರ್ಥ ಎಂಬ ಸ್ಥಿತಿ ಕೆಲವೆಡೆಗಳಲ್ಲಿದೆ. ಇನ್ನೂ ದನಗಳ ವ್ಯಾಪಾರದ ಸೋಗಿನಲ್ಲಿ ರಾಜಾರೋಷವಾಗಿಯೇ ದನಗಳ ಅಕ್ರಮ ಸಾಗಾಟ ನಡೆಯುತ್ತಿದೆ. ಕಾಲು ಸೋತ, ವಯಸ್ಸಾದ (ಮುದಿ), ಕಾಯಿಲೆಗೆ ತುತ್ತಾದ ದನಕರುಗಳನ್ನು ಮಾರುವ ಪದ್ಧತಿ ಕಾಣುತ್ತಿದ್ದೆವು. ಆದರೆ, ಈಗ ಹಣಕ್ಕಾಗಿ ದನಗಳನ್ನು ಮಾರುವ, ಕಸಾಯಿಖಾನೆಗೆ ತಳ್ಳುವ ಕಾರ್ಯ ವ್ಯಾಪಕವಾಗಿದೆ. -ಮಂಜುನಾಥ್

# ಕೇಂದ್ರದಿಂದ ಕಾರ್ಮಿಕರ ಒಡೆದಾಳುವ ನೀತಿ: ಹೇಮಲತಾ ಆರೋಪ

## ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಕಾರ್ಮಿಕರ ಹಕ್ಕುಗಳನ್ನು ಹೇಗೆ ಕಸಿಯಲಾಗುತ್ತಿದೆ ಎಂಬುದನ್ನು ನಾವೆಲ್ಲರೂ ಕಂಡುಕೊಂಡಿದ್ದೇವೆ



ಉದಯವಾಹಿನಿ ಚಿತ್ರ

• ಉದಯವಾಹಿನಿ ಹಾಸನ

ಆರ್‌ಎಸ್‌ಎಸ್‌ನ ಮಾರ್ಗದರ್ಶನದಲ್ಲಿ ನಡೆಯುತ್ತಿರುವ ಬಿಜೆಪಿ ಸರ್ಕಾರ, ಧರ್ಮವನ್ನು ಮುಂದೆ ತಂದು ಕಾರ್ಮಿಕರ ನಡುವೆ ಒಡೆದಾಳುವ ನೀತಿ ಅನುಸರಿಸುತ್ತಿದೆ' ಎಂದು ಸಿಐಟಿಯು ರಾಷ್ಟ್ರೀಯ ಅಧ್ಯಕ್ಷೆ ಡಾ.ಕೆ. ಹೇಮಲತಾ ಆರೋಪಿಸಿದರು.

ಸಿಐಟಿಯುನ 16ನೇ ರಾಜ್ಯ ಸಮ್ಮೇಳನದ ಅಂತಿಮ ದಿನವಾದ ನಗರದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಮಾತನಾಡಿದ ಅವರು, ಒಗ್ಗಟ್ಟಾಗುವ

**ಕಾರ್ಮಿಕರ ನಡುವೆ ಒಡೆದಾಳುವ ನೀತಿ**

ಕಾರ್ಮಿಕರನ್ನು ಚದುರಿಸುವ ಕೆಲಸ ಮಾಡಲಾಗುತ್ತಿದೆ ಎಂದರು.

ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಕಾರ್ಮಿಕರ ಹಕ್ಕುಗಳನ್ನು ಹೇಗೆ ಕಸಿಯಲಾಗುತ್ತಿದೆ ಎಂಬುದನ್ನು ನಾವೆಲ್ಲರೂ ಕಂಡುಕೊಂಡಿದ್ದೇವೆ.

ಇಂತಹ ಕಾರ್ಮಿಕ ವರ್ಗವನ್ನು ಒಡೆದಾಳುವ ನೀತಿಯನ್ನು ಕೇಂದ್ರ ಸರ್ಕಾರ ನಡೆಸುತ್ತಿದೆ. ದಲಿತರು, ಮಹಿಳೆಯರು, ಅಲ್ಪಸಂಖ್ಯಾತರ ಮೇಲಿನ ದಾಳಿ ಹತ್ತಿಕ್ಕುವ ಕೆಲ ನಿರ್ಣಯ ಅಂಗೀಕರಿಸಿದ್ದೇವೆ.

## ಸಿಐಟಿಯು ಹೋರಾಟ ನಿರಂತರ

'ಮುಂದಿನ 3 ವರ್ಷಗಳಲ್ಲಿ ಯಾವ ರೀತಿಯ ಕಾನೂನು ಬರಬೇಕು ಎಂಬುದನ್ನು ಸಿಐಟಿಯು ತೀರ್ಮಾನ ಮಾಡಿದೆ. ನಿರಂತರವಾಗಿ ಹೋರಾಟ ಮಾಡುತ್ತಿದ್ದೇವೆ. ಕಾರ್ಮಿಕರನ್ನು ಕಾಯಂ ಕಾರ್ಮಿಕರನ್ನಾಗಿ ನೇಮಿಸಿಕೊಳ್ಳಬೇಕು' ಎಂದು ರಾಷ್ಟ್ರೀಯ ಕಾರ್ಯದರ್ಶಿ ಉಮೇಶ್ ಆಗ್ರಹಿಸಿದರು. ಕನಿಷ್ಠ ವೇತನಕ್ಕಾಗಿ ಕೇಳಿದರೆ ಪ್ರಧಾನಿ ಮೋದಿಗಳು ಶ್ರಮ ಏವ ಜಯತೇ ಎಂಬ ಘೋಷಣೆ ಕೊಟ್ಟಿದ್ದಾರೆ. ಇಡೀ ಶ್ರಮಿಕರನ್ನು ದಫನ್ ಮಾಡುವ ಕೆಲಸ ಮಾಡುತ್ತಿದ್ದಾರೆ ಎಂದು ಆಪಾದಿಸಿದರು. ಬ್ರಿಟಿಷರ ಕಾಲದಲ್ಲಿಯೇ ಡಾ.ಬಿ.ಆರ್ ಅಂಬೇಡ್ಕರ್ ಜಾರಿಗೊಳಿಸಲು ಉದ್ದೇಶಿಸಿದ್ದ ಕಾನೂನು ಜಾರಿಯಾಗಬೇಕು. ಅದಕ್ಕಾಗಿ ನಿರಂತರ ಹೋರಾಟ ಮಾಡುತ್ತಿದರೂ ಕಾರ್ಮಿಕ ವಿರೋಧಿ ನೀತಿ ಅನುಸರಿಸಲಾಗುತ್ತಿದೆ. ಕಾರ್ಮಿಕರ ಶ್ರಮ ಸಂಹಿತೆಗಳನ್ನು ಜಾರಿಗೊಳಿಸಲಾಗುತ್ತಿಲ್ಲ' ಎಂದು ಆರೋಪಿಸಿದರು.

ನೆರೆಯ ರಾಜ್ಯ ಕೇರಳದಲ್ಲಿ ಎಡಪಂಥೀಯ ಸರ್ಕಾರ ಆಡಳಿತದಲ್ಲಿದ್ದು, ಅಲ್ಲಿಯ ನೀತಿ ಜಾರಿಗೊಳಿಸಬೇಕು ಎಂದು ಆಗ್ರಹಿಸಿದರು.

ಈ ಸಮ್ಮೇಳನವು ವಿಶಾಖಪಟ್ಟಣಂನಲ್ಲಿ ನಡೆಯಲಿರುವ ರಾಷ್ಟ್ರೀಯ ಸಮ್ಮೇಳನಕ್ಕೆ ಪೂರ್ವಭಾವಿಯಾಗಿದೆ. ಇಂತಹ ಹೋರಾಟಗಳಲ್ಲಿ ರೈತ, ಕಾರ್ಮಿಕರ ವಿರೋಧಿ ನೀತಿಗಳನ್ನು ಖಂಡಿಸಲಾಗುವುದು. ಅಂಗನವಾಡಿ ನೌಕರರು, ಆಶಾ ಕಾರ್ಯಕರ್ತೆಯರು, ಬೀಡಿ ಕಾರ್ಮಿಕರು ಸ್ವಚ್ಛತೆ ಕಾರ್ಮಿಕರ ವೇತನದ ಹಕ್ಕು, ಸಮಯದ ಹಕ್ಕುಗಳನ್ನು ಕಿತ್ತುಕೊಳ್ಳಲಾಗಿದೆ ಎಂದು ದೂರಿದರು.

ಮೂರು ದಿನಗಳ ರಾಜ್ಯ ಸಮ್ಮೇಳನದಲ್ಲಿ ನಿರಂತರ ಚರ್ಚೆ ಮಾಡಿ, ಕಾರ್ಮಿಕ ವರ್ಗ, ದುಡಿಯುವ ಜನರ ಮೇಲೆ ನಡೆಯುತ್ತಿರುವ ದಬ್ಬಾಳಿಕೆ ತಡೆಗಟ್ಟಲು, ಅವರ ಸ್ಥಿತಿ ಗತಿ ಕುರಿತು ಕಾರ್ಮಿಕ ವರ್ಗದ ಅನುಭವ ತಿಳಿದುಕೊಳ್ಳಲಾಗಿದೆ. ಅದಕ್ಕಾಗಿ ನಿರ್ಣಯ ಅಂಗೀಕಾರ ಮಾಡಿದ್ದೇವೆ' ಎಂದರು. ಎಲ್ಲಾ ಕಾರ್ಮಿಕರ ಬವಣೆಗಳ ಬಗ್ಗೆ ಚರ್ಚಿಸಲಾಗಿದೆ. ಇದರ ಯಾವ ರೀತಿಯ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕು ಎಂಬುದನ್ನು ಕಂಡುಕೊಳ್ಳಬೇಕು ಎನ್ನುವ ಚಿಂತನೆಯನ್ನೂ ನಡೆಸಿದ್ದೇವೆ ಎಂದರು.

ದೇಶದಾದ್ಯಂತ ಕಾರ್ಮಿಕ ವರ್ಗದಲ್ಲಿ ಏಕತೆ ಮೂಡಿಸಬೇಕು. ಜನರನ್ನು ಒಗ್ಗೂಡಿಸಬೇಕು. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಅನುಸರಿಸುತ್ತಿರುವ ಕಾರ್ಮಿಕ ವಿರೋಧಿ ನೀತಿಗಳ ಬಗ್ಗೆ ಜಾಗೃತಿ ಮೂಡಿಸಬೇಕು ಎಂದು ಸಲಹೆ ನೀಡಿದರು. ಸಿಐಟಿಯು ರಾಜ್ಯ ಘಟಕದ ಅಧ್ಯಕ್ಷ ಎಸ್. ವರಲಕ್ಷ್ಮಿ, ಕಾರ್ಯದರ್ಶಿ ಮೀನಾಕ್ಷಿ ಸುಂದರಂ ಇದ್ದರು.

> ಅಖಿಲ ಭಾರತ ಸಮ್ಮೇಳನ ವೇಳೆ ಕಟ್ಟಡ ಅಸಂಘಟಿತ ಕಾರ್ಮಿಕರು ಸೇರಿದಂತೆ ಎಲ್ಲಾ ಕಾರ್ಮಿಕರೂ ಹೋರಾಟ ತೀವ್ರಗೊಳಿಸಬೇಕು. ಸರ್ಕಾರಗಳನ್ನು ಬಡಿದೆಬ್ಬಿಸುವ ಕೆಲಸ ಮಾಡಬೇಕು. -ಡಾ.ಕೆ.ಹೇಮಲತಾ ಸಿಐಟಿಯು ರಾಷ್ಟ್ರೀಯ ಅಧ್ಯಕ್ಷೆ

# ಮಿನಿ ನ್ಯೂಸ್

## ಮೊಬೈಲ್ ಗೀಳು; ಬದುಕು ಹಾಳು

• ಉದಯವಾಹಿನಿ ಕಾರ್ಕಳ

ಕ್ರೀಡೆಯು ಬದುಕಿನಲ್ಲಿ ಮಹತ್ತರವಾದ ಪಾತ್ರ ವಹಿಸುತ್ತದೆ. ಆದರೆ, ಇಂದಿನ ಯುವಜನರು ಮೊಬೈಲ್ ಫೋನ್‌ಗೀಳಿಗೆ ಒಳಗಾಗಿ ಬದುಕನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ ಎಂಬ ಆತಂಕ ಸಮಾಜಕ್ಕಾಗಿದೆ ಎಂದು ಶ್ರೀಮೂಕಾಂಬಿಕಾ ದೇವಸ್ಥಾನ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ ಸುಕೇಶ್ ಶೆಟ್ಟಿ ಹೊಸಮಠ ಹೇಳಿದರು.

ಇಲ್ಲಿನ ಜ್ಞಾನಸುಧಾ ಶಿಕ್ಷಣ ಸಂಸ್ಥೆಯ ವಾರ್ಷಿಕ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಸಿಕ್ಕ ಅವಕಾಶವನ್ನು ಸದುಪಯೋಗ ಪಡಿಸಿಕೊಂಡು ದೇಶದ ಉನ್ನತಿಗೆ ಕೈಜೋಡಿಸಿದರೆ ಜೀವನ ಸಾರ್ಥಕವಾಗುತ್ತದೆ' ಎಂದರು. ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಪ್ರಾಂಶುಪಾಲ ದಿನೇಶ್ ಎಂ ಕೊಡವೂರ್ ಅಧ್ಯಕ್ಷತೆ ವಹಿಸಿದ್ದರು. ವಾರ್ಷಿಕ ಕ್ರೀಡಾಕೂಟದ ಪ್ರಯುಕ್ತ ಸಂಸ್ಥೆಯ ವಾಣಿಜ್ಯ ವಿಭಾಗದ ವತಿಯಿಂದ ವಿದ್ಯಾರ್ಥಿಗಳೇ ಮುನ್ನಡೆಸುವ ವ್ಯವಹಾರ ಮೇಳವನ್ನು ಉದ್ಘಾಟಿಸಲಾಯಿತು.

## ಮುಂದಿನ ಬಜೆಟ್‌ನಲ್ಲಿ ಅನುದಾನ ಮೀಸಲಿಡಲು ಯತ್ನ: ಮಂತರ ಗೌಡ

• ಉದಯವಾಹಿನಿ ಸುಬ್ರಹ್ಮಣ್ಯ

ಮಡಿಕೇರಿ ಗಾಳಿಬೀಡು-ಕಡಮಕಲ್-ಕುಕ್ಕೆ ಸುಬ್ರಹ್ಮಣ್ಯ ರಸ್ತೆಯ ಅಭಿವೃದ್ಧಿ ಮತ್ತು ಕಡಮಕಲ್ ನಿವಾಸಿಗಳ ಸಮಸ್ಯೆಗಳ ಕುರಿತು ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಮಡಿಕೇರಿ ಶಾಸಕ ಮಂತರ್‌ಗೌಡ ಕಡಮಕಲ್‌ನಲ್ಲಿ ಸಮಾಲೋಚನಾ ಸಭೆ ನಡೆಸಿದರು.

ಗುತ್ತಿಗಾರು, ಹರಿಹರ ಪಲ್ಲತ್ತಡ್ಕ, ಕೊಲ್ಲಮೊಗ್ರು, ಕಲ್ಮಕಾರು ಗ್ರಾಮದ ಮುಖಂಡರು, ಗ್ರಾಮಸ್ಥರು, ಮಡಿಕೇರಿ-ಗಾಳಿಬೀಡು, ಕಡಮಕಲ್-ಕುಕ್ಕೆ ಸುಬ್ರಹ್ಮಣ್ಯ ರಸ್ತೆಯ ಅಗತ್ಯ ಮತ್ತು ಕಾನೂನು ತೊಡಕುಗಳನ್ನು ನಿವಾರಿಸಬೇಕು ಎಂದು ಮನವಿ ಸಲ್ಲಿಸಿದರು. ಬಳಿಕ ಮಂತರ್ ಗೌಡ ಮಾತನಾಡಿ, ಸ್ಥಳೀಯ ನಿವಾಸಿಗಳಿಗೆ ಹಕ್ಕುಪತ್ರ, ಕುಡಿಯುವ ನೀರು, ಮೊಬೈಲ್ ಟವರ್ ನಿರ್ಮಾಣ, ರಸ್ತೆ ಅಭಿವೃದ್ಧಿ ಬಗ್ಗೆ ತುರ್ತು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. ಮಡಿಕೇರಿ-ಗಾಳಿಬೀಡು-ಕಡಮಕಲ್-ಸಂಪರ್ಕ ರಸ್ತೆಗೆ ಇರುವ ಕಾನೂನು ತೊಡಕುಗಳನ್ನು ನಿವಾರಿಸಿ ಸರ್ಕಾರದ ಮಟ್ಟದಲ್ಲಿ ಚರ್ಚಿಸಿ ಶೀಘ್ರ ಮುಂದಿನ ಬಜೆಟ್‌ನಲ್ಲಿ ಅನುದಾನ ಇರಿಸಲಾಗುವುದು. ಈ ಭಾಗದ ಜನರ ಬೇಡಿಕೆಯನ್ನು ಈಡೇರಿಸಲಾಗುವುದು ಎಂದು ಭರವಸೆ ನೀಡಿದರು.

## ವಿದ್ಯಾರ್ಥಿಗಳಲ್ಲಿ ಸ್ಪರ್ಧಾ ಮನೋಭಾವನೆ ಮೂಡಿಸಿ: ಶಾಸಕ ಶಿವರಾಮ ಹೆಬ್ಬಾರ

• ಉದಯವಾಹಿನಿ ಶಿರಸಿ

ಶಿಕ್ಷಕರು ಗುಣಾತ್ಮಕ ಸಂಸ್ಕಾರದ ಪಠ್ಯದ ಜತೆಗೆ ಸ್ಪರ್ಧಾತ್ಮಕ ವಿಷಯಾಧಾರಿತ ಶಿಕ್ಷಣ ನೀಡಿದಾಗ ಮಾತ್ರ ವಿದ್ಯಾರ್ಥಿಗಳಲ್ಲಿ ಸ್ಪರ್ಧಾ ಮನೋಭಾವನೆ ಮೂಡಲು ಸಾಧ್ಯವಾಗಲಿದೆ' ಎಂದು ಶಾಸಕ ಶಿವರಾಮ ಹೆಬ್ಬಾರ ಹೇಳಿದರು. ಇಲ್ಲಿನ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಶನಿವಾರ ಹಮ್ಮಿಕೊಂಡಿದ್ದ 20ನೇ ವಾರ್ಷಿಕ ಸ್ನೇಹ ಸಮ್ಮೇಳನ, ಕದಂಬ ಪತ್ರಿಕೆ ಬಿಡುಗಡೆ ಮತ್ತು ಪ್ರತಿಭಾ ಪುರಸ್ಕಾರ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಪಾಠದೊಂದಿಗೆ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಿ ತಮ್ಮಲ್ಲಿರುವ ಪ್ರತಿಭೆ ವ್ಯಕ್ತ ಪಡಿಸಬೇಕು. ವಿದ್ಯಾರ್ಥಿಗಳು ಜೀವನದಲ್ಲಿ ಶ್ರಮವಹಿಸಿದರೆ ಮಾತ್ರ ಪ್ರತಿಫಲ ದೊರೆಯುತ್ತದೆ. ಅದಕ್ಕಾಗಿ ಕಷ್ಟಪಟ್ಟು ಶಿಕ್ಷಣದ ಕಡೆಗೆ ಹೆಚ್ಚು ಒತ್ತು ನೀಡಿ, ಉತ್ತಮ ಭವಿಷ್ಯ ರೂಪಿಸಿಕೊಳ್ಳಿ' ಎಂದರು.

ಬನವಾಸಿಯ ಪದವಿಪೂರ್ವ ಕಾಲೇಜ್‌ನಲ್ಲಿ ಮುಂದಿನ ದಿನಗಳಲ್ಲಿ ಸಂಗೀತ ಆಸಕ್ತಿಯಿರುವ ವಿದ್ಯಾರ್ಥಿಗಳಿಗೆ ಸಂಗೀತ ಶಿಕ್ಷಣ ಆರಂಭಿಸಿ, ಸಂಗೀತ ಶಿಕ್ಷಕರನ್ನು ನೇಮಿಸಿ. ಶಿಕ್ಷಣಕ್ಕೆ ಬೇಕಾಗುವ ವ್ಯವಸ್ಥೆ ಕಲ್ಪಿಸಿಕೊಡುತ್ತೇನೆ' ಎಂದು ಭರವಸೆ ನೀಡಿದರು. ಈ ವೇಳೆ ಅಭಿವೃದ್ಧಿ ಸಮಿತಿ ವತಿಯಿಂದ 2024-25ನೇ ಸಾಲಿನ ದ್ವಿತಿಯ ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು.

## ಮಕ್ಕಳಿಗೆ ಪಠ್ಯೇತರ ಚಟುವಟಿಕೆ ಅಗತ್ಯ

• ಉದಯವಾಹಿನಿ ಕಾರಟಗಿ

ಮಕ್ಕಳ ಜೀವನ ಉತ್ತಮವಾಗಿ ರೂಪಿಸುವಲ್ಲಿ ಶಿಕ್ಷಕರು ಮಕ್ಕಳನ್ನು ಪಠ್ಯೇತರ ಚಟುವಟಿಕೆಯಲ್ಲಿಯೂ ಕ್ರಿಯಾಶೀಲವಾಗಿರುವಂತೆ ಮಾಡಬೇಕು. ಪೋಷಕರು, ಶಿಕ್ಷಕರು ಪರಸ್ಪರ ಸಮನ್ವಯತೆಯಿಂದ ಕೆಲಸ ಮಾಡಿದರೆ ಮಕ್ಕಳ ಭವಿಷ್ಯ ಉತ್ತಮವಾಗಿ ರೂಪುಗೊಳ್ಳುತ್ತದೆ' ಎಂದು ತಾಲ್ಲೂಕು ಪಂಚಾಯಿತಿ ಇಒ ಲಕ್ಷ್ಮೀದೇವಿ ಹೇಳಿದರು.

ಸಮೀಪದ ಬೇವಿನಹಾಳ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳ ದಿನಾಚರಣೆ ಅಂಗವಾಗಿ ನಡೆದ ಪೋಷಕರ ಹಾಗೂ ಶಿಕ್ಷಕರ ಮಹಾಸಭೆಯಲ್ಲಿ ಅವರು ಮಾತನಾಡಿದರು.

ಮಕ್ಕಳ ಬದುಕು ರೂಪಿಸುವ ಜೊತೆಗೆ ಜೀವನ ಪಾಠದ ತರಬೇತಿಯನ್ನೂ ನೀಡಬೇಕು. ಮಕ್ಕಳ ಉಜ್ವಲ ಭವಿಷ್ಯಕ್ಕೆ ಒಳ್ಳೆಯ ಗುರು ಹಾಗೂ ಗುರಿ ಅಗತ್ಯ ಎಂದರು.

## ಕಾನೂನಿಗೆ ವಿರುದ್ಧವಾಗಿ ಹೋದಾಗ ಬಂಧಿಸದೇ ಮುತ್ತು ಕೊಡಬೇಕೆ?: ರಾಜಶೇಖರ ಪಾಟೀಲ

• ಉದಯವಾಹಿನಿ ಬೀದರ್

ಕಾನೂನು ಚೌಕಟ್ಟಿನಲ್ಲಿ ಹೋರಾಟವನ್ನು ಮಾಡಬೇಕು. ಕಾನೂನಿಗೆ ವಿರುದ್ಧವಾಗಿ ಹೋದಾಗ ಪೊಲೀಸರು ಬಂಧಿಸದೇ ನಿಮಗೇನು ಮುತ್ತು ಕೊಡಬೇಕೆ?' ಎಂದು ಮಾಜಿ ಸಚಿವ ರಾಜಶೇಖರ ಪಾಟೀಲ ಅವರು ಶಾಸಕ ಡಾ.ಸಿದ್ದಲಿಂಗಪ್ಪ ಪಾಟೀಲ ಅವರನ್ನು ಪ್ರಶ್ನಿಸಿದರು.

ನಗರದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. ಈಚೆಗೆ ಹುಮನಾಬಾದ್‌ನಲ್ಲಿ ನಡೆದ ರೈತರ ಪ್ರತಿಭಟನೆಯಲ್ಲಿ ಭಾಗವಹಿಸಿ, ಹೋರಾಟದ ದಿಕ್ಕು ತಪ್ಪಿಸಿ ತಾವೇ ಹೋರಾಟ ಮಾಡಿದಂತೆ ತೋರಿಸಿಕೊಳ್ಳುವ ಕೆಲಸ ಬಿಜೆಪಿ ನಾಯಕರು ಮಾಡಿದ್ದಾರೆ. ಹುಮನಾಬಾದ್ ರಾಷ್ಟ್ರೀಯ ಹೆದ್ದಾರಿ ಬಂದ್ ಮಾಡಲು ಶಾಸಕ ಡಾ.ಸಿದ್ದಲಿಂಗಪ್ಪ ಪಾಟೀಲ ಮುಂದಾಗಿದ್ದರು. ಪೊಲೀಸರು ಹಾಕಿದ ಬ್ಯಾರಿಕೇಡ್‌ಗಳನ್ನು ಹಾರಿ ಕೈಯಲ್ಲಿ ಮುಖ್ಯಮಂತ್ರಿಗಳು, ಸಕ್ಕರೆ ಸಚಿವರು, ಜಿಲ್ಲಾ ಉಸ್ತುವಾರಿ ಸಚಿವರು, ಪೌರಾಡಳಿತ ಸಚಿವರ ಭಾವಚಿತ್ರಗಳನ್ನು ಪ್ರದರ್ಶಿಸುವಾಗ ಪೊಲೀಸರು ತಡೆದಿದ್ದಕ್ಕೆ ಗಲಾಟೆ ಮಾಡಿದಾಗ ಬಂಧಿಸದೇ ಮತ್ತೇನು ಮಾಡಬೇಕು' ಎಂದರು.

'ಪೊಲೀಸರು ನಮ್ಮನ್ನು ಸಹ ಬ್ಯಾರಿಕೇಡ್‌ನಲ್ಲಿ ತಡೆದಿದ್ದರು. ಆದರೆ ನಾವು ಕಾನೂನು ಮುರಿದು ಮುಂದೆ ಹೋಗಲಿಲ್ಲ. ಹೀಗಾಗಿ ನಮ್ಮನ್ನು ಬಂಧಿಸಿಲ್ಲ. ರೈತರು ಯಾರ ಸಹಾಯ ಅಥವಾ ಬೆಂಬಲ ಕೇಳಿಲ್ಲ, ಕೈಯಲ್ಲಿ ಯಾವುದೇ ಫಲಕಗಳನ್ನು ತಂದಿಲ್ಲ, ಕಾನೂನು ಕೈಗೆತ್ತಿಕೊಂಡಿಲ್ಲ' ಎಂದರು. ವಿಧಾನ ಪರಿಷತ್ ಸದಸ್ಯ ಡಾ.ಚಂದ್ರಶೇಖರ ಪಾಟೀಲ, ವಿಧಾನ ಪರಿಷತ್ ಮಾಜಿ ಅರವಿಂದಕುಮಾರ ಅರಳಿ, ಮನ್ನಾನ ಸೇಠ್, ಜಿ.ಪಂ ಮಾಜಿ ಸದಸ್ಯ ವೀರಣ್ಣ ಪಾಟೀಲ, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಅಭಿಷೇಕ, ಅಪ್ಪರಮಿಯ್ಯಾ ಇದ್ದರು.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 07:30 ರಿಂದ 09:00 |
| ಗುಳಿಕ ಕಾಲ | ಮಧ್ಯಾಹ್ನ | 01:30 ರಿಂದ 03:00 |
| ಯಮಗಂಡ ಕಾಲ | ಬೆಳಿಗ್ಗೆ | 10:30 ರಿಂದ 12:00 |

**ಮೇಷ** ಇಂದು ಯಾವುದೇ ವಿರುದ್ಧ ಲಿಂಗದ ಸಹಾಯದಿಂದ ನೀವು ವ್ಯಾಪರದಲ್ಲಿ ಆರ್ಥಿಕ ಲಾಭವನ್ನು ಪಡೆಯುವ ಸಾಧ್ಯತೆ ಇದೆ. ಇತರರ ವ್ಯವಹಾರಗಳಲ್ಲಿ ನಿಮ್ಮ ಮೂಗುತೂರಿಸುವಿಕೆಯನ್ನು ಇಂದು ತಡೆಯಬೇಕು.

**ವೃಷಭ** ಆಶಾವಾದಿಗಳಾಗಿರಿ ಮತ್ತು ಜೀವನದ ಉಜ್ವಲ ಬದಿಯನ್ನು ನೋಡಿ. ನಿಮ್ಮ ಆತ್ಮವಿಶ್ವಾಸಭರಿತ ನಿರೀಕ್ಷೆಗಳು ನಿಮ್ಮ ಭರವಸೆಗಳು ಮತ್ತು ಆಸೆಗಳನ್ನು ಸಾಕ್ಷಾತ್ಕಾರಗೊಳಿಸಲು ಸಹಾಯ ಮಾಡುತ್ತವೆ.

**ಮಿಥುನ** ನೀವು ಸಂದಿಗ್ಧ ಪರಿಸ್ಥಿತಿಯನ್ನು ಎದುರಿಸಿದಲ್ಲಿ ಖಿನ್ನತೆಗೊಳಗಾಗಬೇಡಿ. ಆಹಾರದ ಸ್ವಾದಕ್ಕೆ ಉಪ್ಪು ಬೇಕಾದ ಹಾಗೆ ಅತೃಪ್ತಿಯಿಂದ ಮಾತ್ರ ನೀವು ಸಂತೋಷದ ಮೌಲ್ಯವನ್ನು ಅರ್ಥ ಮಾಡಿಕೊಳ್ಳುತ್ತೀರಿ.

**ಕರ್ಕಾಟಕ** ನೀವು ಜೀವನವನ್ನು ಸಂತೋಷದಿಂದ ಅನುಭವಿಸಲು ಸಿದ್ಧವಾಗುತ್ತಿದ್ದ ಹಾಗೆ ನಿಮಗೆ ಸಂತೋಷ ಹಾಗೂ ಆನಂದ. ಸ್ವಲ್ಪ ಹೆಚ್ಚು ಹಣ ಮಾಡಲು ನಿಮ್ಮ ನವೀನ ಕಲ್ಪನೆಯನ್ನು ಬಳಸಿ.

**ಸಿಂಹ** ನಿಮ್ಮ ಪ್ರೇಮಿ ಅಥವಾ ಪ್ರೇಮಿಕ ಇಂದು ತುಂಬಾ ಕೋಪದಲ್ಲಿ ಕಾಣಬಹುದು, ಇದರಿಂದಾಗಿ ಅವರ ಮನೆಯ ಪರಿಸ್ಥಿತಿ ಇರುತ್ತದೆ. ಅವರು ಕೋಪದಲ್ಲಿದ್ದರೆ , ಅವರನ್ನು ಸಮಾಧಾನಗೊಳಿಸಲು ಪ್ರಯತ್ನಿಸಿ.

**ಕನ್ಯಾ** ಚಾಲನೆ ಮಾಡುವಾಗ ಎಚ್ಚರ ವಹಿಸಿ. ನಿಮ್ಮ ಸೃಜನಶೀಲ ಪ್ರತಿಭೆಯನ್ನು ಸರಿಯಾಗಿ ಬಳಸಿದಲ್ಲಿ ಅದು ಅತ್ಯಂತ ಲಾಭದಾಯಕವೆಂದು ಸಾಬೀತಾಗಬಹುದು. ನಿಮ್ಮ ಸಾಮಾಜಿಕ ಜೀವನವನ್ನು ನಿರ್ಲಕ್ಷಿಸಬೇಡಿ.

**ತುಲಾ** ವಯಸ್ಸಾದವರು ತಮ್ಮ ಆರೋಗ್ಯವನ್ನು ನೋಡಿಕೊಳ್ಳಬೇಕು. ವಿದೇಶದಲ್ಲಿ ಮಲಗಿರುವ ನಿಮ್ಮ ಭೂಮಿಯನ್ನು ಇಂದು ಉತ್ತಮ ಬೆಲೆಗೆ ಮಾರಾಟ ಮಾಡಬಹುದು, ಅದು ನಿಮಗೆ ಲಾಭದಾಯಕವಾಗಲಿದೆ.

**ವೃಶ್ಚಿಕ** ಬಹಳಷ್ಟು ವಿಷಯಗಳು ನೀವು ಬಯಸಿದಂತಿರುವ ಹಾಸ್ಯದಿಂದ ತುಂಬಿದ ಒಂದು ದಿನ. ವ್ಯಾಪಾರ ಸಾಲಕ್ಕಾಗಿ ನಿಮ್ಮ ಬಳಿ ಬರುವವರನ್ನು ನಿರ್ಲಕ್ಷಿಸಿ. ಅನಿರೀಕ್ಷಿತ ಅತಿಥಿಗಳು ಸಂಜೆ ನಿಮ್ಮ ಮನೆಯಲ್ಲಿ ತುಂಬಿರುತ್ತಾರೆ.

**ಧನಸ್ಸು** ಬಾಕಿಯಿರುವ ಸಾಲಗಳನ್ನು ಸಂಗ್ರಹಿಸಬಹುದು ಅಥವಾ ಹೊಸ ಯೋಜನೆಗಳಿಗೆ ಕೆಲಸ ಮಾಡಲು ಹಣ ಕೇಳಬಹುದು. ಕುಟುಂಬ ಸದಸ್ಯರಿಗೆ ಸಹಾಯ ಮಾಡಲು ಮುಕ್ತ ಸಮಯದ ಲಾಭ ತೆಗೆದುಕೊಳ್ಳಿ.

**ಮಕರ** ಸ್ನೇಹಿತನ ಜೊತೆಗಿನ ನಿಮ್ಮ ಅಪಾರ್ಥ ಕೆಲವು ಅಹಿತಕರ ಪ್ರತಿಕ್ರಿಯೆಗಳನ್ನು ಉಂಟುಮಾಡಬಹುದು- ಯಾವುದೇ ನಿರ್ಧಾರ ಕೈಗೊಳ್ಳುವ ಮೊದಲು ಸಮತೋಲಿತ ನೋಟ ಹೊಂದಿ.

**ಕುಂಭ** ಮನರಂಜನೆ ಕ್ರೀಡಾ ಚಟುವಟಿಕೆಗಳು, ಹೊರಾಂಗಣ ಕಾರ್ಯಕ್ರಮಗಳನ್ನು ಒಳಗೊಂಡಿರಬೇಕು. ಹೊಸ ಹಣಗಳಿಕೆಯ ಅವಕಾಶಗಳು ಲಾಭದಾಯಕ ವಾಗಿರುತ್ತವೆ. ಕೆಲಸ ಒತ್ತಡ ಮತ್ತು ಸುಸ್ತಿನಿಂದ ಕೂಡಿರುತ್ತದೆ.

**ಮೀನ** ನಿಮ್ಮ ಸಂಗಾತಿಯ ಕೆಟ್ಟ ಆರೋಗ್ಯದಿಂದಾಗಿ ಪ್ರಣಯಕ್ಕೆ ಧಕ್ಕೆಯಾಗುತ್ತದೆ. ಈ ರಾಶಿಚಕ್ರದ ಜನರು ಇಂದು ಜನರನ್ನು ಭೇಟಿಯಾಗುವುದಕ್ಕಿಂತ ಒಂಟಿಯಾಗಿ ಸಮಯವನ್ನು ಕಳೆಯಲು ಇಷ್ಟಪಡುತ್ತಾರೆ.

### ಕಬ್ಬು ಬೆಳೆಗಾರರು, ರೈತ ಸಂಘ, ಹಸಿರು ಸೇನೆ ನೇತೃತ್ವದಲ್ಲಿ ನಡೆದ ಬೆಳೆಗಾರರ ಹೋರಾಟಕ್ಕೆ ಕೊನೆಗೂ ಜಯ

# ಮುಗಿದ ಕಬ್ಬಿನ ದರ ಸಮರ, ಬಿರುಸುಗೊಂಡ ಹಂಗಾಮು

• ಉದಯವಾಹಿನಿ ಮುಧೋಳ

ಸೂಕ್ತ ದರ ಹಾಗೂ ಹಿಂದಿನ ಬಾಕಿಗಾಗಿ ನಡೆಸುತ್ತಿದ್ದ ಹೋರಾಟ ಅಂತ್ಯಗೊಂಡು ಶನಿವಾರ ಕಬ್ಬಿನ ಹಂಗಾಮು ಆರಂಭವಾಗಿದೆ. ಜಿಲ್ಲೆಯ ತುಂಬ ಕಬ್ಬು ಹಂಗಾಮು ಬಿರುಸು ಪಡೆದುಕೊಂಡಿದೆ.


ಸರಕಾರ ಹಾಗೂ ಕಾರ್ಖಾನೆಗಳ ಮಾಲೀಕರ ನಡುವೆ ನಡೆದ ಮಾತುಕತೆ ಬಳಿಕ ಜಮಖಂಡಿ ಉಪವಿಭಾಗದ ಭಾಗಶಃ ಕಬ್ಬಿಗೆ ನ್ಯಾಯಯುತವಾದ ಬೆಲೆ ಘೋಷಣೆಯಾಗಿದೆ. ಕಬ್ಬು ಬೆಳೆಗಾರರು, ರೈತ ಸಂಘ, ಹಸಿರು ಸೇನೆ ನೇತೃತ್ವದಲ್ಲಿ ನಡೆದ ಬೆಳೆಗಾರರ ಹೋರಾಟಕ್ಕೆ ಕೊನೆಗೂ ಜಯ ಸಿಕ್ಕಿದೆ.

ಬೆಲೆ ಘೋಷಣೆ ಬಳಿಕ ಬೆಳೆಗಾರರು ಕಬ್ಬು ಕಟಾವು ಮಾಡಲು ಒಪ್ಪಿಗೆ ಸೂಚಿಸಿದ್ದಾರೆ. ಕಾರ್ಖಾನೆಗಳ ಗ್ಯಾಂಗ್‌ಗಳು ಗದ್ದೆಗಳಿಗೆ ತೆರಳಿ ಕಬ್ಬು ಕಟಾವು ಮಾಡಿ ಟ್ರೇಲರ್ ಭರ್ತಿ ಮಾಡಿ ಟ್ರ್ಯಾಕ್ಟರ್‌ಗಳ

- ಕಬ್ಬು ಬೆಳೆಗಾರರು, ಕಟಾವುದಾರರು, ಕೃಷಿ ಕಾರ್ಮಿಕರ ಮುಖದಲ್ಲಿ ಮಂದಹಾಸ
- ಕಬ್ಬು ಬೆಳೆಗಾರರು, ರೈತ ಸಂಘ, ಹಸಿರು ಸೇನೆ ನೇತೃತ್ವದಲ್ಲಿ ನಡೆದ ಬೆಳೆಗಾರರ ಹೋರಾಟಕ್ಕೆ ಕೊನೆಗೂ ಜಯ ಸಿಕ್ಕಿದೆ.

ಮೂಲಕ ಕಳುಹಿಸುತ್ತಿವೆ.

**ಕಟಾವು ಹಂತದಲ್ಲಿರುವ ಕಬ್ಬಿನ ಪ್ರಮಾಣ:** ಜಂಟಿ ಕೃಷಿ ಇಲಾಖೆ ಮಾಹಿತಿ ಪ್ರಕಾರ ಜಿಲ್ಲೆಯಲ್ಲಿ 1.20 ಕೋಟಿ ಮೆಟ್ರಿಕ್ ಟನ್ ಕಬ್ಬು ಕಟಾವಿಗೆ ಬಂದಿದೆ. ಜಿಲ್ಲೆಯ 13 ಸಕ್ಕರೆ ಕಾರ್ಖಾನೆಗಳು ಕಬ್ಬು ನುರಿಸಲಿವೆ. ಸತತ ನಾಲ್ಕು ತಿಂಗಳು ಕಬ್ಬು ಹಂಗಾಮು ನಡೆಯಲಿದೆ. ಜಿಲ್ಲೆಯ ಮುಧೋಳ, ಜಮಖಂಡಿ, ರಬಕವಿ-ಬನಹಟ್ಟಿ, ಬೀಳಗಿ ಹಾಗೂ ತೇರದಾಳ ತಾಲ್ಲೂಕಿನಲ್ಲಿ ಅತಿ ಹೆಚ್ಚು ಕಬ್ಬು ಬೆಳೆಯಲಾಗಿದೆ.


ಉದಯವಾಹಿನಿ ಚಿತ್ರ

### 40 ಸಾವಿರಕ್ಕೂ ಹೆಚ್ಚು ಕೃಷಿ ಕಾರ್ಮಿಕರ ಆಗಮನ

ಕಬ್ಬು ಹಂಗಾಮಿಗೆಂದೇ ಈಗಾಗಲೇ ಮುಧೋಳ, ಜಮಖಂಡಿ, ರಬಕವಿ-ಬನಹಟ್ಟಿ ಹಾಗೂ ತೇರದಾಳ ತಾಲ್ಲೂಕುಗಳಿಗೆ ಆಗಮಿಸಿ ಕಬ್ಬಿನ ಗದ್ದೆಗಳ ಸಮೀಪ ಠಿಕಾಣಿ ಹೂಡಿರುವ ಸಾವಿರಕ್ಕೂ ಅಧಿಕ ಗ್ಯಾಂಗ್‌ಗಳು ಶನಿವಾರ ಬೆಳಗ್ಗೆಯಿಂದಲೇ ಕಬ್ಬು ಕಟಾವು ಮಾಡಿ ಟ್ರ್ಯಾಕ್ಟರ್ ಟ್ರೇಲರ್ ಲೋಡ್ ಮಾಡಿವೆ. ಶನಿವಾರವೇ ಸಾವಿರಾರು ಟ್ರ್ಯಾಕ್ಟರ್‌ಗಳು ಕಬ್ಬು ತುಂಬಿದ ಟ್ರೇಲರ್‌ಗಳೊಂದಿಗೆ ಹೆದ್ದಾರಿಗಳ ಮೂಲಕ ಕಾರ್ಖಾನೆಗಳತ್ತ ಸಾಲಾಗಿ ಹೊರಟಿವೆ.

**ಗ್ಯಾಂಗ್‌ನವರ ಆತಂಕ ನಿವಾರಣೆ :** ಪ್ರತಿವರ್ಷ ಚಳಿಗಾಲದಲ್ಲಿ ಕಬ್ಬು ಹಂಗಾಮು ನಡೆಯುತ್ತದೆ. ಮರುವರ್ಷದ ಬೇಸಿಗೆ ಆರಂಭದಲ್ಲಿ ಕಬ್ಬು ಹಂಗಾಮು ಮುಗಿಯುತ್ತದೆ. ಮಹಾರಾಷ್ಟ್ರ ರಾಜ್ಯದ ಬೀಡ್ ಜಿಲ್ಲೆಯಿಂದ ಸಹಸ್ರಾರು ಸಂಖ್ಯೆಯ ಕಾರ್ಮಿಕರು ಕಬ್ಬು ಕಟಾವು ಮಾಡಲು ಜಿಲ್ಲೆಗೆ ಬಂದಿದ್ದಾರೆ. ಅಕ್ಟೋಬರ್ ಅಂತ್ಯದಲ್ಲೇ ಕಬ್ಬು ಹಂಗಾಮು ಆರಂಭವಾಗುತ್ತದೆ ಎಂಬ ನಂಬಿಕೆಯಿಂದ ಜಿಲ್ಲೆಗೆ ಬಂದು ಗದ್ದೆಗಳ ಸುತ್ತ ಠಿಕಾಣಿ ಹೂಡಿರುವ ಗ್ಯಾಂಗ್‌ನವರು ಹಂಗಾಮು ಆರಂಭವಾಗುವುದು ತಡವಾಗುತ್ತಿದ್ದಂತೆ ಆತಂಕಗೊಂಡಿದ್ದರು. ದರ ಸಮರ ಅಂತ್ಯವಾಗಿ ಕಾರ್ಖಾನೆಗಳು ಆರಂಭವಾಗಿರುವುದು ಕುಟುಂಬ ಸಹಿತ ದುಡಿಯಲು ಬಂದವರಿಗೆ ಸಂತಸ ಉಂಟು ಮಾಡಿದೆ ಎನ್ನುತ್ತಾರೆ ಕಬ್ಬಿನ ಗ್ಯಾಂಗ್ ಪ್ರಮುಖ ಮಲ್ಲೇಶ ರಾಠೋಡ. ದೀಪಾವಳಿ ಹಬ್ಬದ ನಂತರ ಕಬ್ಬು ಕಟಾವು ಮಾಡುವ ಕೃಷಿ ಕಾರ್ಮಿಕರ ಗ್ಯಾಂಗ್‌ಗಳು ಜಿಲ್ಲೆಗೆ ಆಗಮಿಸುತ್ತಿದ್ದು, ಕಬ್ಬಿನ ಗದ್ದೆಗಳ ಬಳಿ ಟೆಂಟ್ ಹಾಕಿ ಕಾರ್ಮಿಕರು ವಾಸಿಸುತ್ತಿದ್ದಾರೆ.

> ರೈತರು ಹಾಗೂ ಕಾರ್ಖಾನೆಗಳ ಮಧ್ಯೆ ನಡೆದ ದರ ಸಮರ ಅಂತ್ಯವಾಗಿದೆ. ಎರಡೂ ದಿನಗಳಲ್ಲಿ ಬಾಕಿ ಕೊಡಲು ಕಾರ್ಖಾನೆಗಳು ಒಪ್ಪಿಗೆ ಸೂಚಿಸಿವೆ. ಹೀಗಾಗಿ ಕಬ್ಬಿನ ಕಟಾವು, ಸಾಗಣೆ ಪ್ರಕ್ರಿಯೆ ಆರಂಭಗೊಂಡಿದೆ. ರೈತರು ಕಬ್ಬು ಪೂರೈಸಲು ಯಾವುದೇ ತೊಂದರೆ ಇಲ್ಲ ಎಂದಿದ್ದಾರೆ
> -ಹಣಮಂತ ನಬಾಬ, ರೈತ ಮುಖಂಡ ಶಿರೋಳ

**ಕಬ್ಬಿನ ಗ್ಯಾಂಗ್ ಬುಕ್ಕಿಂಗ್**
ಜಿಲ್ಲೆಯ ಕಾರ್ಖಾನೆಗಳು ಮತ್ತು ವೈಯಕ್ತಿಕವಾಗಿ ರೈತರು ಸಹ ಮಹಾರಾಷ್ಟ್ರ, ಮಧ್ಯಪ್ರದೇಶ, ರಾಜ್ಯದ ರಾಯಚೂರು, ವಿಜಯಪುರ, ಬಾಗಲಕೋಟೆ, ಬೆಳಗಾವಿ, ಕೊಪ್ಪಳ ಭಾಗದ ಕಬ್ಬು ಕಟಾವು ಮಾಡುವ ಗ್ಯಾಂಗ್‌ಗಳನ್ನು ಮುಂಗಡ ಹಣ ನೀಡಿ ಮೂರು ತಿಂಗಳ ಹಿಂದೆಯೇ ಬುಕ್ಕಿಂಗ್ ಮಾಡಿದ್ದರು. ಈಗಾಗಲೇ ಸಾವಿರಾರು ಗ್ಯಾಂಗ್‌ಗಳು ಜಿಲ್ಲೆಗೆ ಆಗಮಿಸಿವೆ. ದೊಡ್ಡ ಹಿಡುವಳಿದಾರರು ಯಂತ್ರೋಪಕರಣಗಳ ಮೂಲಕ ಕಬ್ಬು ಕಟಾವು ಮಾಡುತ್ತಿದ್ದಾರೆ. ಕಬ್ಬಿನ ಗ್ಯಾಂಗ್‌ಗಳು ಲಕ್ಷಕ್ಕೂ ಅಧಿಕ ಹೆಕ್ಟೇರ್ ಕಬ್ಬು ಕಟಾವು ಮಾಡಲಿವೆ.

ಅಂದಾಜು 40 ಸಾವಿರಕ್ಕೂ ಹೆಚ್ಚು ಜನ ಕೃಷಿ ಕಾರ್ಮಿಕರು ಆಗಮಿಸಿದ್ದಾರೆ. ಕಾರ್ಖಾನೆಗಳು ಆರಂಭವಾಗಿದ್ದರಿಂದ ಗಡಗಡ ನಡಗುವ ಚಳಿಯಲ್ಲೇ ಬೆಳಗಿನ ಜಾವದಲ್ಲೇ ಕಾರ್ಮಿಕರು ಕಬ್ಬು ಕಟಾವು ಮಾಡಿ ಟ್ರ್ಯಾಕ್ಟರ್ ಟ್ರೇಲರ್, ಲಾರಿ ಇಲ್ಲವೆ ಎತ್ತಿನ ಬಂಡಿಗಳಿಗೆ ಹೇರಿ ಸಾಗಿಸುತ್ತಿದ್ದಾರೆ.

ಪ್ರತಿ ಹಂಗಾಮು ಆರಂಭದ ಮುಂಚೆಯೇ ಕಬ್ಬಿನ ಗ್ಯಾಂಗ್‌ಗಳನ್ನು ಕರೆಸಲಾಗುತ್ತಿದೆ. ಸಕ್ಕರೆ ಕಾರ್ಖಾನೆಗಳಿಗೆ ರೈತರ ಜತೆ ಕೃಷಿ ಕಾರ್ಮಿಕರು ಸಾಥ್ ನೀಡುತ್ತಾರೆ. ಮಹಾರಾಷ್ಟ್ರ, ಮಧ್ಯಪ್ರದೇಶ ಸೇರಿ ರಾಜ್ಯದ ವಿವಿಧ ಜಿಲ್ಲೆಗಳಿಂದಲೂ ಗ್ಯಾಂಗ್‌ಗಳು ಜಿಲ್ಲೆಗೆ ಆಗಮಿಸಿವೆ ಎಂದಿದ್ದಾರೆ ಈರಣ್ಣ ಕಣಬೂರ, ಕೇನ್ ಮ್ಯಾನೇಜರ್, ಗೋದಾವರಿ ಸಕ್ಕರೆ ಕಾರ್ಖಾನೆ, ಸಮೀರವಾಡಿ, ಬೇರೆ ಬೇರೆ ಜಿಲ್ಲೆ, ರಾಜ್ಯದ ಕಬ್ಬಿನ ಗ್ಯಾಂಗ್ ಜತೆ ನಮ್ಮ ಭಾಗದ ಲೋಕಲ್ ಗ್ಯಾಂಗ್‌ಗಳು ಸಹ ಕಬ್ಬು ಕಟಾವು ಮಾಡಲಿವೆ. ಮೂರು ತಿಂಗಳು ಚಳಿ ಲೆಕ್ಕಿಸದೆ ದುಡಿಯುತ್ತಾರೆ ಎಂದಿದ್ದಾರೆ ಸುರೇಶ ಚಿಂಚಲಿ, ರೈತ ಮುಖಂಡ, ಶಿರೋಳ.

## ಮಸ್ಕಿ ಬೆಟ್ಟ ನವಿಲುಗಳ ನೆಚ್ಚಿನ ತಾಣ, ನವಿಲು ಧಾಮ ಸ್ಥಾಪನೆಗೆ ಮುಂದಾಗುವುದೆ ಇಲಾಖೆ

• ಉದಯವಾಹಿನಿ ಮಸ್ಕಿ

ನಿಸರ್ಗದತ್ತವಾಗಿ ನಿರ್ಮಿತವಾಗಿರುವ ಬೆಟ್ಟಗಳ ಸಾಲು,ಎಲ್ಲಿ ನೋಡಿದರೂ ಹಚ್ಚ ಹಸಿರು,ಈ ಹಚ್ಚ ಹಸಿರಿನ ಬೆಟ್ಟಗಳ ನಡುವೆ ಗರಿ ಬಿಚ್ಚಿ ಸ್ವಚ್ಛಂದವಾಗಿ ನಾಟ್ಯ ಮಾಡುವ ನಾಟ್ಯ ಮಯೂರಿ ಇದು ಕಂಡುಬರುವುದು ಮಸ್ಕಿಯ ಮಲ್ಲಿಕಾರ್ಜುನ ಬೆಟ್ಟದ ತಪ್ಪಲಿನಲ್ಲಿ.

ಹೌದು ಮಸ್ಕಿ ಪಟ್ಟಣದ ಎರಡನೇ ಶ್ರೀಶೈಲ ಎಂದೇ ಖ್ಯಾತಿ ಪಡೆದ ಐತಿಹಾಸಿಕ ಶ್ರೀ ಬೆಟ್ಟದ ಮಲ್ಲಿಕಾರ್ಜುನ ದೇವಾಲಯದ ಬೆಟ್ಟಗಳ ಸಾಲಿನಲ್ಲಿ ನವಿಲು ನರ್ತನ ಮಾಡುತ್ತಿರುವ ದೃಶ್ಯ ಮನಮೋಹಕವಾಗಿ ಕಾಣಸಿಗುತ್ತವೆ. ಈ ಬೆಟ್ಟಗಳ ಸಾಲು ಹಲವಾರು ಜಾತಿಯ ಪ್ರಾಣಿ ಪಕ್ಷಿಗಳಿಗೆ ಆಶ್ರಯತಾಣವಾಗಿ ಮಾರ್ಪಡುತ್ತಿದೆ.ಇಲ್ಲಿ ಸಹಸ್ರಾರು ನವಿಲುಗಳ ಜೊತೆಗೆ ಮೊಲ,ನರಿ,ಕಾಡುಹಂದಿ,ಉಡುವ,ಮೆಚ್ಚಿನ ಹಾವು,ಬುರಲಿ,ಕೌಜುಗ ಸೇರಿದಂತೆ ಇನ್ನೂ ಅನೇಕ ಬಗೆಯ ಪ್ರಾಣಿ-ಪಕ್ಷಿಗಳು ಈ ಪ್ರದೇಶದಲ್ಲಿ ವಾಸಿಸುತ್ತಿವೆ.

ಪಟ್ಟಣದ ದುರ್ಗದ ಗುಡ್ಡ,ಅಶೋಕ ಶಿಲಾ ಶಾಸನ ಹಿಂದೆ ಇರುವ ಬೆಟ್ಟದ ಪ್ರದೇಶದಲ್ಲಿ ದಟ್ಟವಾಗಿ ಬೆಳೆದಿರುವ ಜಾಲಿ ಗಿಡಗಳ ಪೊದೆಗಳು ನವಿಲುಗಳ ಆಶ್ರಯ ತಾಣವಾಗಿದ್ದು, ನವಿಲುಗಳ ಸಂತತಿ ಹೆಚ್ಚಾಗಲು ಕಾರಣವಾಗಿದೆ. ನವಿಲುಗಳು ಗುಂಪು ಗುಂಪಾಗಿ ರಸ್ತೆ ಬದಿ ಓಡಾಡುವುದನ್ನು ಕಂಡಾಗ ಸಾರ್ವಜನಿಕರ ಮನಸಲ್ಲಿ ಸಂಚಲನ ಮೂಡಿಸದೆ ಇರಲಾರದು.


ಉದಯವಾಹಿನಿ ಚಿತ್ರ

> ಮಸ್ಕಿಯಲ್ಲಿ ನವಿಲು ದಾಮ ಸ್ಥಾಪನೆ ಮಾಡಲಿಕ್ಕೆ ಈ ವಿಷಯವನ್ನು ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು.
> -ಸುಭಾಷ್ ಚಂದ್ರ ನಾಯ್ಕ್ ಕೈರವಾಡಗಿ ಆರ್.ಓ.ಎಫ್.ಲಿಂಗಸಗೂರು

ನವಿಲುಗಳಿಗೆ ಮೊಟ್ಟೆಗಳನ್ನು ಇಡಲು ಪೊದೆಗಳಿರಬೇಕು, ಮಸ್ಕಿಯ ಬೆಟ್ಟಗಳ ಸಾಲು ಇದಕ್ಕೆ ಪೂರಕವಾಗಿದ್ದು,ನವಿಲುಗಳ ಸಂತಾನಾಭಿವೃದ್ಧಿಗೆ ಅನುಕೂಲಕರವಾಗಿದೆ.

ಇನ್ನೂ ಬೆಳಿಗ್ಗೆ ಹಾಗೂ ಸಂಜೆ ಸಮಯದಲ್ಲಿ ಆಹಾರ ಹರಸಿ ಪೊದೆಯಿಂದ ಹೊರಗೆ ಬರುವ ನವಿಲುಗಳ ಹಿಂಡನ್ನು ನೋಡಲು ಇಲ್ಲಿನ ಜನ ಕಾತುರದಿಂದ ಕಾಯುತಾರೆ.ಕೆಲ ಪ್ರದೇಶಗಳಲ್ಲಿ ಏಳೆಂಟು ನವಿಲುಗಳು ತಮ್ಮ ಮರಿಗಳೊಂದಿಗೆ ನಸುಕಿನಲ್ಲಿ ಹೊರಬಂದು ಗರಿಬಿಚ್ಚಿ ನರ್ತಿಸುವುದು ನೋಡುಗರ ಮೈಮನ ಸೂರೆಗೊಳ್ಳುತ್ತದೆ.

ನವಿಲುಗಳನ್ನು ಕಂಡರೆ ಯಾರಿಗೆ ಇಷ್ಟ ಇಲ್ಲ ಹೇಳಿ,ಅದರಲ್ಲೂ ಈ ಭಾಗದ ಜನರಿಗೆ ನವಿಲು ಕಂಡರೆ ಎಲ್ಲಿಲ್ಲದ ಪ್ರೀತಿ. ದಾರಿಯುದ್ದಕ್ಕೂ ಸಾಗುವಾಗ ಬೆಟ್ಟದ ತಪ್ಪಲಿನಲ್ಲಿ ನವಿಲುಗಳು ಏನಾದರೂ ಕಂಡರೆ ಮನೆಗೆ ಹೋಗುವ ದಾರಿ ಮರೆತೇ ಹೋಗುತ್ತದೆ. ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಹಾದು ಹೋಗಿರುವ ಹಳ್ಳದ ಸುತ್ತಲಿನ ಪ್ರದೇಶದಲ್ಲಿಯೂ ಕೂಡಾ ನವಿಲುಗಳು ಹಿಂಡು ಹಿಂಡಾಗಿ ಸೇರುವ ದೃಶ್ಯ ಸರ್ವೇ ಸಾಮಾನ್ಯ.

ಆದ್ದರಿಂದ ಐತಿಹಾಸಿಕವಾಗಿ,ಧಾರ್ಮಿಕವಾಗಿ ಪ್ರಖ್ಯಾತಿ ಪಡೆದಿರುವ ಮಸ್ಕಿ ಪಟ್ಟಣದಲ್ಲಿ ನವಿಲು ಧಾಮವೊಂದು ನಿರ್ಮಾಣ ಮಾಡಬೇಕೆಂಬುದು ಸಾರ್ವಜನಿಕರ ಒತ್ತಾಸೆಯಾಗಿದೆ.

ಈ ನಿಟ್ಟಿನಲ್ಲಿ ಸರ್ಕಾರ ಸಕಾಲಕ್ಕೆ ಎಚ್ಚೆತ್ತು ನವಿಲುಗಳ ರಕ್ಷಣೆಗೆ ಮುಂದಾಗಬೇಕಿದೆ.

## ಕಿರು ಮೃಗಾಲಯಕ್ಕೆ ತಜ್ಞರ ತಂಡ: 4 ಕೃಷ್ಣ ಮೃಗಗಳ ಮರಣೋತ್ತರ ಪರೀಕ್ಷೆ


ಉದಯವಾಹಿನಿ ಚಿತ್ರ

• ಉದಯವಾಹಿನಿ ಬೆಳಗಾವಿ

ತಾಲ್ಲೂಕಿನ ಭೂತರಾಮನಹಟ್ಟಿಯ ಕಿತ್ತೂರು ರಾಣಿ ಚನ್ನಮ್ಮ ಕಿರು ಮೃಗಾಲಯಕ್ಕೆ ಭಾನುವಾರ ಭೇಟಿ ನೀಡಿದ ತಜ್ಞರ ತಂಡವು ನಾಲ್ಕು ಕೃಷ್ಣ ಮೃಗಗಳ ಮರಣೋತ್ತರ ಪರೀಕ್ಷೆ ನಡೆಸಿತು.

ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆಯ ಬೆಂಗಳೂರು ಶಾಖೆಯ ತಜ್ಞ ಡಾ.ಚಂದ್ರಶೇಖರ ಎನ್. ಬನ್ನೇರುಘಟ್ಟ ಶಾಖೆ ತಜ್ಞ ಡಾ.ಮಂಜುನಾಥ ವಿ., ಕರ್ನಾಟಕ ಮೃಗಾಲಯಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಸಡಾ.ಸುನೀಲ್ ಪನ್ವಾರ್ ಅವರ ತಂಡ ಭಾನುವಾರ ಬೆಳಿಗ್ಗೆ ಕಿರು ಮೃಗಾಲಯಕ್ಕೆ ಭೇಟಿ ನೀಡಿತು. ಬ್ಯಾಕ್ಟಿರಿಯಾ ಸೋಂಕಿನಿಂದ(ಗಳಲೆ ಕಾಯಿಲೆಯಿಂದ) ಗುರುವಾರ 20, ಶನಿವಾರ 8 ಕೃಷ್ಣಮೃಗ ಮೃತಪಟ್ಟಿದ್ದವು.

## ಮಕ್ಕಳ ಬೆಳವಣಿಗೆಯಲ್ಲಿ ಪಾಲಕರು, ಶಿಕ್ಷಕರ ಪಾತ್ರ ಮಹತ್ತರ

• ಉದಯವಾಹಿನಿ, ಬಾದಾಮಿ

ಪಾಲಕರು ಶಿಕ್ಷಕರ ಜೊತೆಗೆ ಕೈಗೂಡಿದಾಗ ಮಾತ್ರ ಉತ್ತಮ ಬೆಳವಣಿಗೆ ಸಾಧ್ಯ ಎಂದು ಶಿಕ್ಷಕ, ಸಾಹಿತಿ ರವಿ ಕಂಗಳ ಹೇಳಿದರು. ಅವರು ತಾಲ್ಲೂಕಿನ ಯಂಕಂಚಿ ಮಣಿನಾಗರ ಗ್ರಾಮ ಕಸ್ತೂರಬಾ ಗಾಂಧಿ ಬಾಲಕೀಯರ ವಸತಿ ಶಾಲೆಯಲ್ಲಿ ಮಕ್ಕಳ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಪೋಷಕರು-ಶಿಕ್ಷಕರ ಮಹಾಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಪೋಷಕರು ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಿದರೆ ಮಾತ್ರ ಮಕ್ಕಳು ಸಂಸ್ಕಾರವಂತರಾಗಲು ಸಾಧ್ಯ ಎಂದ ಅವರು ಮಕ್ಕಳ ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ, ಪೋಕ್ಸೊ ಕಾಯ್ದೆ, ಎಲ್.ಬಿ.ಎ.ಕುರಿತು ಸುವಿವರವಾಗಿ ಮಾಹಿತಿ ನೀಡಿದರು. ಶಾಲಾ ಪರಿಸರವನ್ನು ಕಂಡು ಸಂತಸ ವ್ಯಕ್ತಪಡಿಸಿದರು. ಮುಖ್ಯಶಿಕ್ಷಕಿ ಬಸಮ್ಮಾ ನರಸಾಪೂರ ಅಧ್ಯಕ್ಷತೆ ವಹಿಸಿ ಮಾತನಾಡಿ ಮಕ್ಕಳ ಸಹಾಯವಾಗಿ, ಪೋಕ್ಸೊ ಕಾಯ್ದೆ, ಮಕ್ಕಳ ಸುರಕ್ಷತೆ ಬಗ್ಗೆ ಸರಕಾರದ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಿದರು.

## ಖರೀದಿ ಪ್ರಾರಂಭಿಸದಿದ್ದರೆ ಹೋರಾಟ

• ಉದಯವಾಹಿನಿ, ನವಲಗುಂದ

ನವಲಗುಂದ ವಿಧಾನಸಭಾ ಕ್ಷೇತ್ರವೂ ಸೇರಿದಂತೆ ಜಿಲ್ಲೆಯ ಸಾವಿರಾರೂ ರೈತರು ಗೋವಿನಜೋಳ ಬೆಳೆದು ಸಂಕಷ್ಟದಲ್ಲಿದ್ದರೂ ಖರೀದಿ ಕೇಂದ್ರವನ್ನ ರಾಜ್ಯ ಸರಕಾರ ಆರಂಭಿಸಿಲ್ಲ. ಹೀಗೆ ಮುಂದುವರೆದರೇ ರಸ್ತೆಗಿಳಿದು ಹೋರಾಟ ಮಾಡಲಾಗುವುದೆಂದು ಮಾಜಿ ಸಚಿವ ಶಂಕರ ಪಾಟೀಲಮುನೇನಕೊಪ್ಪ ಅವರು ಎಚ್ಚರಿಸಿದರು.

ನವಲಗುಂದ ಪಟ್ಟಣದ ತಹಶೀಲ್ದಾರ ಕಚೇರಿ ಎದುರು ಇಡೀ ದಿನ ಧರಣಿ ನಡೆಸಿದ ಸಮಯದಲ್ಲಿ ಮಾತನಾಡಿದ ಅವರು, ರಾಜ್ಯ ಸರಕಾರ ಖರೀದಿ ಕೇಂದ್ರ ಆರಂಭಿಸಲು ಆಗದಿದ್ದರೆ ರೈತಕುಲಕ್ಕೆ ಪರಿಹಾರವನ್ನಾದರೂ ಕೊಡಲಿ ಎಂದರು. ಗೋವಿನಜೋಳ ಬೆಳೆದು ರೈತ ಹೊಲದಲ್ಲಿ ಜೀವನ ಕಳೆಯುವಂತಾಗಿದೆ. ಸರಕಾರಕ್ಕೆ ಇದ್ಯಾವುದು ಕಾಣುತ್ತಿಲ್ಲ. ಕಣ್ಣು, ಕಿವಿ ಸರಕಾರದಲ್ಲಿ ಉಳಿದೇ ಇಲ್ಲ. ಹಾಗಾಗಿಯೇ ಹೋರಾಟ ಅನಿವಾರ್ಯವಾಗಿದೆ ಎಂದರು.

## ಡಿ.6ರಂದು ಹಾಸನಕ್ಕೆ ಮುಖ್ಯಮಂತ್ರಿ

• ಉದಯವಾಹಿನಿ, ಹಾಸನ

ಮುಖ್ಯಮಂತ್ರಿ ಸಿದ್ದರಾಮಯ್ಯ ಡಿ.6 ರಂದು ಜಿಲ್ಲೆಗೆ ಭೇಟಿ ನೀಡಲಿದ್ದು, ತಮ್ಮ ಇಲಾಖೆಯಲ್ಲಿ ಪೂರ್ಣಗೊಂಡು ಉದ್ಘಾಟನೆಗೆ ಸಿದ್ಧವಿರುವ ಕಾಮಗಾರಿ, ಶಂಕುಸ್ಥಾಪನೆ ಕಾಮಗಾರಿಗಳು ಹಾಗೂ ವಿವಿಧ ಯೋಜನೆಗಳಡಿ ಫಲಾನುಭವಿಗಳಿಗೆ ಸವಲತ್ತು ವಿತರಣೆಯ ಸಂಪೂರ್ಣ ಮಾಹಿತಿ ನೀಡುವಂತೆ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಸೂಚಿಸಿದರು. ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ತಮಗೆ ವಹಿಸಿರುವ ಜವಾಬ್ದಾರಿಯನ್ನು ಎಚ್ಚರ ವಹಿಸಿ ನಿರ್ವಹಿಸುವಂತೆ ನಿರ್ದೇಶನ ನೀಡಿದರು. ಇಲಾಖಾವಾರು ಮಾಹಿತಿ ಸಿದ್ಧಪಡಿಸಿ ನೀಡಬೇಕು.

ಜಿಲ್ಲಾ ಪಂಚಾಯಿತಿ ಅಡಿಯಲ್ಲಿ ಬರುವ ಇಲಾಖೆಗಳ ಪಟ್ಟಿ ಸಿದ್ಧಪಡಿಸಿ ನೀಡಬೇಕು. ಆಯಾ ತಾಲ್ಲೂಕು ತಹಶೀಲ್ದಾರರೂ ಮಾಹಿತಿ ನೀಡಬೇಕು. ಮುಂದುವರಿದ ಕಾಮಗಾರಿಗಳಲ್ಲಿ ಶೇ. 80 ರಷ್ಟು ಪೂರ್ಣಗೊಂಡಿರುವ ಕಾಮಗಾರಿಗಳ ಬಗ್ಗೆಯೂ ಪಟ್ಟಿ ತಯಾರಿಸಿ ನೀಡುವಂತೆ ತಿಳಿಸಿದರು. ಸಕಾಲ, ಐಪಿಜಿಆರ್‌ಎಸ್‌ನಲ್ಲಿ ಸಲ್ಲಿಕೆಯಾಗಿರುವ ಅರ್ಜಿಗಳನ್ನು ನಿಗದಿತ ಅವಧಿಯಲ್ಲಿ ವಿಲೇವಾರಿ ಮಾಡಬೇಕು ಎಂದರು. ಹೆಚ್ಚುವರಿ ಜಿಲ್ಲಾಧಿಕಾರಿ ಮಂಜುನಾಥ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ವೆಂಕಟೇಶ್ ನಾಯ್ಡು, ಕೃಷ್ಣಮೂರ್ತಿ, ಬಾಬು, ಹಾಜರಿದ್ದರು.

## ಬಿಹಾರ ಜನರ ಹೃದಯ ಚೋರಿ ಮಾಡಿದ ಪ್ರಧಾನಿ ಮೋದಿಜೀ

• ಉದಯವಾಹಿನಿ, ಚಿಂಚೋಳಿ

ದೇಶದ ಪ್ರಧಾನ ಮಂತ್ರಿ, ನರೇಂದ್ರ ಮೋದಿಜೀಯವರು ಬಿಹಾರ ಜನರ ಹೃದಯಗಳನ್ನು ಚೋರಿ ಮಾಡಿ ಅಪಾರ ಜನಮೆಚ್ಚುಗೆ ಪಡೆದು ಎನ್‌ಡಿಎ ಮೈತ್ರಿಕೂಟಕ್ಕೆ ಐತಿಹಾಸಿಕ ದಿಗ್ವಿಜಯ ತಂದು ಕೊಟ್ಟಿದ್ದಾರೆ ಎಂದು ನಿಡಗುಂದಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಮುಕುಂದರಾವ ದೇಶಪಾಂಡೆ ತಿಳಿಸಿದ್ದಾರೆ.



ಪತ್ರಿಕಾ ಪ್ರಕಟಣೆ ಹೊರಡಿಸಿದ ಅವರು,ಅಭಿವೃದ್ಧಿ ಕೇಂದ್ರಿತ ನಾಯಕತ್ವ,ದೇಶದ ಪ್ರಗತಿಗೆ ಸಮರ್ಪಿತ ದೃಷ್ಟಿಕೋನ ಮತ್ತು ಬಿಹಾರದ ಜನಜೀವನದ ಬಗ್ಗೆ ಇರುವ ನಿಸ್ವಾರ್ಥ ಬದ್ಧತೆ ಇವೆಲ್ಲವು ಮತ್ತೊಮ್ಮೆ ಜನತೆಗೆ ವಿಶ್ವಾಸದ ನಂಬಿಕೆ ಕೈಹಿಡಿದಿದ್ದಾರೆ. ಗೃಹ ಸಚಿವ ಅಮಿತ್ ಶಾರವರ ಚುನಾವಣಾ ಚಾಣಕ್ಯನ ತಂತ್ರಗಳು ಬಿಜೆಪಿ ರಾಷ್ಟ್ರಾಧ್ಯಕ್ಷ ಜೆಪಿ ನಡ್ಡಾ ಸಂಘಟನಾ ಶಕ್ತಿ ಹಾಗೂ ನಿತೀಶಕುಮಾರವರ ಆಡಳಿತ ಅನುಭವ ಇವುಗಳ ಸಮನ್ವಯದಿಂದ ಬಿಹಾರದಲ್ಲಿ ಪ್ರಚಂಡ ಬಹುಮತದ ವಿಜಯ ಸಾಧಿಸಲು ಸಾಧ್ಯವಾಯಿತು.

ಬಿಹಾರದ ಜನತೆ ಮತ್ತೆ ಒಂದು ಬಾರಿ ಜಂಗಲ್ ರಾಜ್‌ಗೆ ಸ್ಪಷ್ಟವಾಗಿ ತಿರಸ್ಕಾರ ಮಾಡಿದ್ದು ಸುಳ್ಳು ಪ್ರಚಾರ,ಆರೋಪ ಹಾಗೂ ಮತಗಳಚೋರಿಯ ನಾಟಕಗಳನ್ನು ಮತದಾರರು ನಂಬಲಿಲ್ಲ, ಮತ ಚೋರಿ ಕಥೆಗೂ ಬಿಹಾರದ ಜನರು ಕಿವಿಗೊಡದೆ ಅಭಿವೃದ್ಧಿಗೆ ಸತ್ಯಕ್ಕೆ ಗೆಲ್ಲಿಸಿದ್ದಾರೆ,ಬಿಹಾರದಲ್ಲಿ ಹೊಸ ಅಭಿವೃದ್ಧಿಯ ಯುಗ ಆರಂಭವಾಗಲಿದೆ ಎಂದರು.

## ಬುಡಕಟ್ಟು ಸಮುದಾಯ ಮುನ್ನೆಲೆಗೆ ಬರಲಿ: ಜಿಲ್ಲಾಧಿಕಾರಿ

• ಉದಯವಾಹಿನಿ, ಕಾರವಾರ

ಬುಡಕಟ್ಟು ಸಮುದಾಯಗಳು ಶಿಕ್ಷಣ, ಸರ್ಕಾರದ ಸೌಲಭ್ಯಗಳನ್ನು ಪಡೆದುಕೊಂಡು ಸಮಾಜದ ಮುನ್ನೆಲೆಗೆ ಬರಬೇಕಿದೆ' ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಸಾಜಿದ್ ಮುಲ್ಲಾ ಹೇಳಿದರು.

ಇಲ್ಲಿನ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಪರಿಶಿಷ್ಟ ಪಂಗಡಗಳ ಇಲಾಖೆ ವತಿಯಿಂದ ಹಮ್ಮಿಕೊಂಡಿದ್ದ ಭಗವಾನ್ ಬಿರ್ಸಾಮುಂಡಾ ಜಯಂತಿ ಹಾಗೂ ಜನಜಾತೀಯ ಗೌರವ ದಿನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕಾಡಿನಂಚಿನಲ್ಲಿ ಉಳಿದು ಕಾಡಿನ ಪ್ರಾಣಿಗಳು ಮತ್ತು ನಿಸರ್ಗದೊಂದಿಗೆ ಬದುಕಿ, ತಮ್ಮ ಪ್ರದೇಶಗಳ ಹಕ್ಕಿಗಾಗಿ ಬಿರ್ಸಾ ಮುಂಡಾ ಹೋರಾಡಿದ್ದರು.



ಉದಯವಾಹಿನಿ ಚಿತ್ರ

> ಜಿಲ್ಲೆಯ ಸಿದ್ದಿ ಜನಾಂಗದವರು ಕೇವಲ ಒಂದೇ ಕ್ಷೇತ್ರಕ್ಕೆ ಸೀಮಿತವಾಗದೇ ಉನ್ನತ ಶಿಕ್ಷಣ ಪಡೆದು ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಬೇಕು -ಜಿಲ್ಲಾಧಿಕಾರಿ

ಬ್ರಿಟಿಷರ ಬಂದೂಕಿನ ಎದುರು ಬಿಲ್ಲು ಬಾಣಗಳ ಮೂಲಕವೇ ಅವರು ಯುದ್ಧ ಸಾರಿದ್ದರು. ಹಕ್ಕು, ಸ್ವಾಭಿಮಾನಕ್ಕೆ ಹೋರಾಡಿದ ಬಿರ್ಸಾ ಮುಂಡಾ ಬುಡಕಟ್ಟು ಸಮುದಾಯಕ್ಕೆ ಪ್ರೇರಣೆಯಾಗಬೇಕು' ಎಂದರು.

ಜಿಲ್ಲಾಧಿಕಾರಿ ಕೆ.ಲಕ್ಷ್ಮಿ ಪ್ರಿಯಾ, ಜಿಲ್ಲಾ ಪಂಚಾಯಿತಿ ಸಿಇಒ ಡಾ. ದಿಲೀಷ್ ಶಶಿ ಚಾಲನೆ ನೀಡಿದರು. ಬಿರ್ಸಾ ಮುಂಡಾ ಅವರ ಕುರಿತು ಉಪನ್ಯಾಸ ನೀಡಿದ ಸೂರ್ಯ ಪುಟ್ಟಸಿದ್ದಿ ಮಾತನಾಡಿ, ಆದಿವಾಸಿ ಕುಟುಂಬದ ಬಿರ್ಸಾ ಮುಂಡಾ ಬುಡಕಟ್ಟು ಜನಾಂಗದ ಕಲೆ, ಸಂಸ್ಕೃತಿ, ಆಚಾರ ವಿಚಾರಗಳು ನಶಿಸುವುದನ್ನು ತಡೆದು, ಬ್ರಿಟೀಷರ ದಬ್ಬಾಳಿಕೆ ವಿರೋಧಿಸಿದರು. ಆದಿವಾಸಿ ಸಮುದಾಯದ ಸಾಮಾಜಿಕ ನ್ಯಾಯ, ಸಾಂಸ್ಕೃತಿಕ ಪುನರುಜ್ಜೀವನಕ್ಕೆ ಜೀವನ ಮುಡಿಪಿಟ್ಟರು' ಎಂದರು.

## ಸಹಕಾರ ತತ್ವ ಉಳಿಸಲು ಎಲ್ಲರೂ ಬದ್ಧರಾಗೋಣ: ಚಂದ್ರಶೇಖರಗೌಡ

• ಉದಯವಾಹಿನಿ, ಶಿಕಾರಿಪುರ

ಸಹಕಾರ ಸಂಘಗಳ ಮೂಲಕ ಜಿಲ್ಲೆಗೆ ಕೇಂದ್ರ ಸರ್ಕಾರ ನೀಡುತ್ತಿದ್ದ ಪುನರ್ಧನ ಅನುದಾನ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ. ಅದು ಹೆಚ್ಚಾಗಬೇಕು. ಇಲ್ಲವಾದರೆ ಸಹಕಾರಿ ಕ್ಷೇತ್ರ ಹಿನ್ನಡೆ ಅನುಭವಿಸುತ್ತದೆ' ಎಂದು ಡಿಸಿಸಿ ಬ್ಯಾಂಕ್ ನಿರ್ದೇಶಕ ಚಂದ್ರಶೇಖರಗೌಡ ಕಳವಳ ವ್ಯಕ್ತಪಡಿಸಿದರು.

ಪಟ್ಟಣದ ಸುರಭಿ ಭವನದಲ್ಲಿ ಜಿಲ್ಲಾ ಸಹಕಾರಿ ಯೂನಿಯನ್, ಡಿಸಿಸಿ ಬ್ಯಾಂಕ್, ತಾಲ್ಲೂಕಿನ ಎಲ್ಲಾ ಸಹಕಾರ ಸಂಘಗಳ ಸಹಯೋಗದಲ್ಲಿ ನಡೆದ 72ನೇ ಸಹಕಾರ ಸಪ್ತಾಹ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ರಾಜ್ಯಕ್ಕೆ ನಬಾರ್ಡ್ ನೀಡುತ್ತಿದ್ದ


ಉದಯವಾಹಿನಿ ಚಿತ್ರ

ಅನುದಾನ ಶೇ 50ಕ್ಕೂ ಹೆಚ್ಚು ಕಡಿತಗೊಂಡಿದೆ. ಅದರಿಂದ ರಾಜ್ಯದಲ್ಲಿ ರೈತರಿಗೆ ನೀಡುವ ಬೆಳೆಸಾಲ ಕಡಿಮೆಯಾಗುವ ಆತಂಕ ಇದೆ. ಅದಕ್ಕಾಗಿ ಗ್ರಾಮೀಣ ಪ್ರದೇಶದಲ್ಲಿನ ಸಹಕಾರಿ ಸಂಸ್ಥೆಗಳನ್ನು ಬಲಗೊಳಿಸುವ ಅನಿವಾರ್ಯತೆ ಇದೆ. ಜಿಲ್ಲೆಯ ಡಿಸಿಸಿ ಬ್ಯಾಂಕ್ 1,200 ಕೋಟಿ ಬೆಳೆಸಾಲ ನೀಡಿದ್ದು, ಕೃಷಿಯೇತರ ಸಾಲ ರೂ. 500 ಕೋಟಿ ನೀಡುವ ಮೂಲಕ ಸಮನ್ವಯತೆ ಸಾಧಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿದೆ. ಸಹಕಾರ ತತ್ವ ಬಲಿಷ್ಠವಾದದ್ದು. ಅದು ರಾಜಕೀಯ ಹೊರತಾಗಿ ಕಟ್ಟಿ ಬೆಳೆಸಬೇಕು. ಆಗ ಗ್ರಾಮೀಣ ಪ್ರದೇಶದ ಎಲ್ಲಾ ರೈತರಿಗೆ ಅದರ ಸದುಪಯೋಗ ದೊರೆಯುತ್ತದೆ' ಎಂದರು.

## ವಿದ್ಯುತ್ ಪೂರೈಕೆಗೆ ಆಗ್ರಹಿಸಿ ಅಧಿಕಾರಿಗೆ ಮನವಿ

• ಉದಯವಾಹಿನಿ, ಬ್ಯಾಡಗಿ

ಒಣಗುತ್ತಿರುವ ಬೆಳೆಗೆ ನೀರು ಹಾಯಿಸಲು ರೈತರ ಪಂಪ್ ಸೆಟ್‌ಗಳಿಗೆ ಹಗಲು ಹೊತ್ತು ನಿರಂತರ 7 ಗಂಟೆ ವಿದ್ಯುತ್ ಪೂರೈಸಬೇಕು, ಹಾಳಾದ ಟಿಸಿ ಬದಲಾಯಿಸಬೇಕು ಎಂದು ಆಗ್ರಹಿಸಿ ರೈತ ಸಂಘದ ಕಾರ್ಯಕರ್ತರು ಹೆಸ್ಕಾಂನ ಎಇಇ ರಾಜು ಅರಳಿಕಟ್ಟಿ ಅವರಿಗೆ ಮನವಿ ಸಲ್ಲಿಸಿದರು. ನೇತೃತ್ವ ವಹಿಸಿದ್ದ ರೈತ ಮುಖಂಡ ಕೆ.ವಿ.ದೊಡ್ಡಗೌಡ್ರ ಮಾತನಾಡಿ, ಒಂದೆಡೆ ಪ್ರಕೃತಿ ಮುನಿಸಿಕೊಂಡ ಪರಿಣಾಮ ಬೆಳೆ ಹಾನಿಯಾಗಿದ್ದರೆ, ಇನ್ನೊಂದೆಡೆ ಸರ್ಕಾರ ಗೋವಿನ ಜೋಳದ ಖರೀದಿ ಕೇಂದ್ರ ತೆರೆಯದೆ ರೈತರನ್ನು ಸಂಕಷ್ಟಕ್ಕೆ ತಳ್ಳಿದೆ. ನಿರಂತರ ವಿದ್ಯುತ್ ಪೂರೈಕೆಯಾಗದೆ ಬೆಳೆಗಳಿಗೆ ನೀರುಣಿಸಲು


ಉದಯವಾಹಿನಿ ಚಿತ್ರ

ಸಾಧ್ಯವಾಗದೆ ಬೆಳೆಗಳು ಒಣಗುತ್ತಿವೆ. ಇದರಿಂದ ಕೈಗೆ ಬಂದ ತುತ್ತು ಬಾಯಿಗೆ ಬರದಂತಾಗಿದೆ. ಇದರಿಂದ ರೈತರು ನೆಮ್ಮದಿಯ ಜೀವನ ಸಾಗಿಸದೆ ತೀವ್ರ ಸಂಕಷ್ಟಕ್ಕೆ ಒಳಗಾಗಬೇಕಾಗಿದೆ. ವಿದ್ಯುತ್ ಕಂಬದಲ್ಲಿ ಅಳವಡಿಸಿ ಟಿಸಿ ಹಾಳಾಗಿದ್ದು ಅವುಗಳನ್ನು ಕೂಡಲೆ ಬದಲಿಸಿ ನಿರಂತರ ವಿದ್ಯುತ್ ಪೂರೈಸಬೇಕು ಎಂದು ಆಗ್ರಹಿಸಿದರು.

# ವಿಷಮುಕ್ತ ಕೃಷಿ ಆದಾಗ ಮಾತ್ರ ರೋಗಮುಕ್ತ ಸಮಾಜ ನಿರ್ಮಾಣವಾಗಲು ಸಾಧ್ಯ

### ಪ್ರತಿಯೊಂದು ಬೆಳೆಗಳಿಗೆ ಭೂಮಿಯಲ್ಲಿ ಹಾಕುವ ಗೊಬ್ಬರ ಕೆಮಿಕಲ್‌ನಿಂದ ಕೂಡಿದೆ: ಮಹೇಶ ಬೀದರಕರ್

• ಉದಯವಾಹಿನಿ, ಚಿಂಚೋಳಿ

ರೈತರ ಜಮೀನುಗಳಲ್ಲಿ ಬೆಳೆಯುವ ಪ್ರತಿಯೊಂದು ಬೆಳೆಗಳಿಗೆ ಭೂಮಿಯಲ್ಲಿ ಹಾಕುವ ಗೊಬ್ಬರ ಕೆಮಿಕಲ್‌ನಿಂದ ಕೂಡಿದೆ ಇದರಿಂದ ಸಾರ್ವಜನಿಕರಿಗೆ ರೋಗರುಜಿನಗಳು ಬರುವುದು ಸಹಜ ಗೋ ಸಾಗಣಿಕೆ ಮಾಡಿ ಜೈವಿಕ ದೇಸಿ ಸ್ವದೇಶಿ ರಸಗೊಬ್ಬರ ಉತ್ಪಾದಿಸಿದರೆ ಯಾವುದೇ ರೋಗರುಜಿನಗಳು ಬರುವುದಿಲ್ಲ ಎಂದು ಪ್ರಾಧ್ಯಾಪಕ ಮಹೇಶ ಬೀದರಕರ್ ಹೇಳಿದರು.

**ಗೋಗೆ ದೊಡ್ಡ ಶಕ್ತಿ ಇದೆ**

ನಗರದ ಹೊರವಲಯದ ರೇಣುಕಾ ಗೋಶಾಲೆಯಲ್ಲಿ ವಿಶ್ವ ಹಿಂದು ಪರಿಷತ್ ಹಾಗೂ ಬಜರಂಗದಳ ವತಿಯಿಂದ ಸಂಘದ ಶತಾಬ್ದಿ 2025ರ ಅಂಗವಾಗಿ ಹಮ್ಮಿಕೊಂಡ ಗೋಪಾಷ್ಠಮಿ, ಗೋಸೇವಕರಿಗೆ ಗೋ ಆಧಾರಿತ ರೈತರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ವಿಶೇಷ ಉಪಾನ್ಯಾಸ ನೀಡಿದ ಅವರು,ವಿಷಮುಕ್ತ ಕೃಷಿ ಆದಾಗ ಮಾತ್ರ ರೋಗಮುಕ್ತ ಸಮಾಜ ನಿರ್ಮಾಣವಾಗಲು ಸಾಧ್ಯವಾಗುತ್ತದೆ.

ಗೋ ಆಧಾರಿತ ಜೀವನ ಗೋ ಆಧಾರಿತ ಕೃಷಿ ಪದ್ಧತಿ,100ವರ್ಷಗಳ ಹಿಂದೆ ಎಕರೆಗೆ 23ಕ್ವಿಂಟಲ್ ದಿಂದ 50ಕ್ವಿಂಟಲ್ ಬೆಳೆ ಬೆಳೆಸುತ್ತಿದ್ದರೂ ಆದರೆ ಈಗಿನ ಕಾಲದಲ್ಲಿ ಎಕರೆಗೆ 5ಕ್ವಿಂಟಲ್ ಬೆಳೆ ಬೆಳೆಸಲು ಕಷ್ಟ,ಏಕೆಂದರೆ ಭೂಮಿಗೆ ಮತ್ತು ಬೆಳೆಗಳಿಗೆ ಕೆಮಿಕಲ್‌ವುಳ್ಳ ಔಷಧಿ ಸಿಂಪಡನೆ ಕಾರಣ ಇಳುವರಿ ಬರುತ್ತಿಲ್ಲ ಎಲ್ಲರೂ ಗೋ ಸಾಕಿದರೆ ದೇಸಿ ಸಮುದ್ರವಿದ್ದಂತೆ,ಗೋಗೆ ದೊಡ್ಡ ಶಕ್ತಿವಿದೆ ಗೊಬ್ಬರದಿಂದ ಇಳುವರಿ ಜೋತೆ ಅಂತರ್ಜಲ ಹೆಚ್ಚುತ್ತದೆ, ಭೂಮಿ ಫಲವತ್ತತೆ ಬೆಳೆಯುತ್ತದೆ,ಪಂಚ ಗವ್ಯಾಗಳು ಸಿಗುತ್ತವೆ. ಭಾರತ ದೇಶಕ್ಕೆ ಪಶ್ಚಿಮ ರಾಷ್ಟ್ರಗಳು ರೈತ ಪರಂಪರೆಯಾಗಿ ಬೆಳೆಯಲು ಕೊಡುತ್ತಿಲ್ಲ ಷಡ್ಯಂತ್ರ ಮಾಡುತ್ತಿವೆ,ಸ್ವತಃ ಎಳಿಗೆಗಾಗಿ ದೇಶದ ಅಭಿವೃದ್ಧಿಗಾಗಿ ಸ್ವದೇಶಿ ಉತ್ಪಾನಗಳು ಬೆಳೆಸೋಣ ರೈತ ಸ್ವಲಂಬಿಯಾಗಿ ಗೋ ಉಳಿಸೋಣ ಎಂದರು. ವಕೀಲ ಸಾವನ್ ಕಲಬುರ್ಗಿ, ಶ್ರೀಕಾಂತ ನಾಗಶೆಟ್ಟಿ,ರೇಣುಕಾ ಗೋಶಾಲೆ ಮುಖ್ಯಸ್ಥ ನರಸಿಂಗರಾವ ಧರ್ಮಶ ಮಾತನಾಡಿದರು.

ಸುಲೇಪೇಟ ಖಟ್ಟಲಿಂಗೇಶ್ವರ ಮಠದ ಪರಮಪೂಜ್ಯ ಪ್ರಭುದೇವ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಶರಣು ನಾಟೀಕಾರ ಸ್ವಾಗತಿಸಿದರು,ರೇವಣಸಿದ್ದಪ್ಪ ಮೋಘಾ ನಿರೂಪಿಸಿದರು,ವೀರೇಂದ್ರ ಮುರುಡಾ ವಂದಿಸಿದರು. ಈ ಸಂದರ್ಭದಲ್ಲಿ ಆಕಾಶ ರಾಯಪ್ಪಗೌಡ, ಸಂಗಮೇಶ ಕಲ್ವಾ,ಮಹೇಶ ಭೂತಾಳಿ,ನಾಗೇಶ ಪಿತ್ತಲ್,ಮಲ್ಲಿಕಾರ್ಜುನ ಉಡುಪಿ,ಪ್ರಶಾಂತ ರುಸ್ತಾಂಪೂರ,ಆರ್.ಆರ್.ಪಾಟೀಲ,ಬಸವರಾಜ ದೇಶಮುಖ,ಮಖ್ದುಮ್ ಖಾನ,ದೌಲಪ್ಪ ಸುಣಗಾರ,ಬಸವಂತರೆಡ್ಡಿ, ನಾರಾಯಣ,ಸೇರಿದಂತೆ ಅನೇಕರಿದ್ದರು.


ಉದಯವಾಹಿನಿ ಚಿತ್ರ

> ಪ್ರತಿದಿನ ಗೋಮಾತೆ ಪೂಜಿಸಬೇಕು,ಕ್ರೀಮಿಕೀಟನಾಶಕ ಮತ್ತು ವಿದೇಶಿ ಗೊಬ್ಬರ ಬಳಕೆ ಮಾಡಿದರೆ ಭೂಮಿಯ ಫಲವತ್ತತೆ ಹಾಳಾಗುವುದಲ್ಲದೆ ಮನುಷ್ಯನ ಆರೋಗ್ಯ ಕೂಡ ಹಾಳಾಗುತ್ತಿದೆ,ನಾವೆಲ್ಲರೂ ಸ್ವದೇಶಿ ಗೋಮಾತೆ ಗೊಬ್ಬರ ಬೆಳೆಸಲು ಗೋ ಸೇವಕರಾಗಬೇಕು,ಇದರಿಂದ ಸಮಾಜಕ್ಕೆ ಮತ್ತು ಜಮೀನುಗಳಿಗೆ ಬಹಳಷ್ಟು ಲಾಭದಾಯಕ,ಕೆಮಿಕಲ್ ಗೊಬ್ಬರ ಸಿಂಪಡನೆ ಮಾಡುವುದರಿಂದ ಭೂಮಿಯ ಮೇಲ್ಪದರ ಗಟ್ಟಿಯಾಗುತ್ತಿದೆ,ದೇಸಿ ಗೊಬ್ಬರ ಬಳಕೆಯಿಂದ ಭೂಮಿಯ ಫಲವತ್ತತೆ ಹೆಚ್ಚುತ್ತದೆ, ಹಾಗೂ ನೀರಿನ ಅಂತರ್ಜಲ ಹೆಚ್ಚುತ್ತದೆ,ಗೋ ಆಕಳು ಸಾಕುವುದರಿಂದ ಯಾವುದೇ ರೋಗರುಜಿನಗಳು ಬರುವುದಿಲ್ಲ,ಈಡಿ ಬ್ರಹ್ಮಾಂಡ ರಕ್ಷಕ ಗೋಮಾತೆಯಿದೆ -ಚನ್ನಬಸಂತರೆಡ್ಡಿ

ಭಾರತೀಯ ಚಹಾ, ಸಾಂಬಾರ ಪದಾರ್ಥಗಳ ಮೇಲಿನ ಆಮದು ಸುಂಕ ಇಳಿಕೆ: ಯಾವುದಕ್ಕೆಲ್ಲಾ ಅನ್ವಯ?

# ಭಾರತದ ಕೃಷಿಕರಿಗೆ ಸಿಹಿ ಸುದ್ದಿ ನೀಡಿದ ಡೊನಾಲ್ಡ್ ಟ್ರಂಪ್




- ಅಮೆರಿಕದಲ್ಲಿ ಸುಂಕಗಳಿಂದಾಗಿ ಏರುತ್ತಿರುವ ದೇಶೀಯ ಬೆಲೆಗಳ ಬಿಸಿಯಿಂದಾಗಿ 200 ಕೃಷಿ ಉತ್ಪನ್ನಗಳ ಮೇಲಿನ ಆಮದು ಸುಂಕ ಇಳಿಸಿದ ಟ್ರಂಪ್
- ಕರಿಮೆಣಸು, ಲವಂಗ, ಜೀರಿಗೆ, ಏಲಕ್ಕಿ, ಅರಿಶಿನ, ಶುಂಠಿ, ಚಹಾ ಮತ್ತು ಗೋಡಂಬಿ ಸೇರಿ ಪ್ರಮುಖ ಮಸಾಲೆಗಳು ಮತ್ತು ಕೃಷಿ ಉತ್ಪನ್ನಗಳಿಗೆ ತೆರಿಗೆ ವಿನಾಯಿತಿ
- ಭಾರತದ ಪ್ರಮುಖ ರಫ್ತುಗಳಾದ ಸಿಗಡಿ, ಬಾಸ್ಮತಿ ಅಕ್ಕಿ, ರತ್ನಗಳು, ಆಭರಣಗಳು ಮತ್ತು ಉಡುಪುಗಳ ಮೇಲಿನ ಸುಂಕ ನಿರ್ಬಂಧಗಳು ಮುಂದುವರಿಕೆ

**ವಾಷಿಂಗ್ಟನ್:** ಭಾರತ ರಷ್ಯಾದಿಂದ ತೈಲ ಖರೀದಿಸುತ್ತಿರುವ ಕಾರಣಕ್ಕೆ ಭಾರತ ಮೇಲೆ ಸುಂಕ ಸಮರ ಸಾರಿದ್ದ ಅಮೆರಿಕ ಅಧ್ಯಕ್ಷ ದೊನಾಲ್ಡ್ ಟ್ರಂಪ್ ಇದೀಗ ಭಾರತೀಯ ಸಾಂಬಾರ ಪದಾರ್ಥಗಳ ಮೇಲಿನ ಸುಂಕವನ್ನು ಇಳಿಸುವ ನಿರ್ಧಾರ ಕೈಗೊಂಡಿದ್ದಾರೆ. ಸುಂಕಗಳ ಕಾರಣದಿಂದಾಗಿ ದೇಶೀಯ ಬೆಲೆಗಳು ಏರುತ್ತಿರುವುದರ ಬಿಸಿ ತಟ್ಟಿರುವ ಕಾರಣದಿಂದ ಸುಮಾರು 200 ಆಹಾರ, ಕೃಷಿ ಮತ್ತು ಕೃಷಿ ಉತ್ಪನ್ನಗಳ ಮೇಲಿನ ಆಮದು ಸುಂಕವನ್ನು ಕಡಿಮೆ ಮಾಡಲು ಟ್ರಂಪ್ ನಿರ್ಧರಿಸಿದ್ದಾರೆ. ಇದರಿಂದ ಭಾರತೀಯ ಮಸಾಲೆ ವ್ಯಾಪಾರಿಗಳು ಮತ್ತು ಚಹಾ ಬೆಳೆಗಾರರು ಸೇರಿದಂತೆ ಜಾಗತಿಕ ರಫ್ತುದಾರರಿಗೆ ಮತ್ತು ಅಮೆರಿಕದ ಗ್ರಾಹಕರಿಗೆ ದೊಡ್ಡ ನಿರಾಳತೆ ಸಿಕ್ಕಂತಾಗಿದೆ.

**ಭಾರತದ ಕೃಷಿ ಉತ್ಪನ್ನಗಳಿಗೆ ವಿನಾಯಿತಿ:**

ಈ ಪಟ್ಟಿಯಲ್ಲಿ ಕರಿ ಮೆಣಸು, ಲವಂಗ, ಜೀರಿಗೆ, ಏಲಕ್ಕಿ, ಅರಿಶಿನ, ಶುಂಠಿ, ವಿವಿಧ ಬಗೆಯ ಚಹಾ, ಮಾವಿನ ಹಣ್ಣಿನ ಉತ್ಪನ್ನಗಳು ಮತ್ತು ಗೋಡಂಬಿ ಸೇರಿದಂತೆ ಕೆಲವು ಬಗೆಯ ಬೀಜಗಳು ಸೇರಿವೆ. ಇವೆಲ್ಲವನ್ನೂ ಭಾರತ ಅಮೆರಿಕಕ್ಕೆ ರಫ್ತು ಮಾಡುತ್ತದೆ. ಟ್ರಂಪ್ ಅವರ ಈ ಸುಂಕ ವಿನಾಯಿತಿಯು ಭಾರತದ ಪ್ರಮುಖ ಕೃಷಿ ರಫ್ತುಗಳಿಗೆ ಪ್ರಮುಖ ಉತ್ತೇಜನ ನೀಡಲಿದೆ.



**ಭಾರತದ ರಫ್ತು ವಲಯಕ್ಕೆ ಪ್ರಯೋಜನ**

**ಒಟ್ಟಾರೆಯಾಗಿ, ಈ ಸುಂಕ ವಿನಾಯಿತಿಗಳು ಭಾರತದಿಂದ ಸುಮಾರು 1 ಶತಕೋಟಿ ಡಾಲರ್‌ಗಿಂತ ಹೆಚ್ಚಿನ ಕೃಷಿ ರಫ್ತುಗಳಿಗೆ ಮಾತ್ರ ಅನ್ವಯಿಸುತ್ತವೆ. ಭಾರತ ಸರ್ಕಾರದ ಅಧಿಕಾರಿಗಳ ಪ್ರಕಾರ, ಕಳೆದ ವರ್ಷ 491 ದಶಲಕ್ಷ ಡಾಲರ್ ಮೌಲ್ಯದ ರಫ್ತು ಹೊಂದಿದ್ದ 50 ಸಂಸ್ಕರಿಸಿದ ಆಹಾರ ಉತ್ಪನ್ನಗಳು (ಕಾಫಿ ಮತ್ತು ಚಹಾ ಸಾರಗಳು, ಕೋಕೋ ಉತ್ಪನ್ನಗಳು, ರಸಗಳು, ಹಣ್ಣಿನ ತಿರುಳುಗಳು, ಮಾವಿನ ಉತ್ಪನ್ನಗಳು ಮತ್ತು ತರಕಾರಿ ಮೇಣಗಳು ಸೇರಿದಂತೆ) ಹೆಚ್ಚು ಪ್ರಯೋಜನ ಪಡೆಯಲಿವೆ. ನಂತರದ ಸ್ಥಾನದಲ್ಲಿ, ಕಳೆದ ವರ್ಷ 359 ದಶಲಕ್ಷ ಡಾಲರ್ ರಫ್ತು ಹೊಂದಿದ್ದ ಮಸಾಲೆಗಳು ಇವೆ. 48 ಹಣ್ಣುಗಳು ಮತ್ತು ಬೀಜಗಳು (ತೆಂಗಿನಕಾಯಿ, ಸೀಬೆ, ಮಾವು, ಗೋಡಂಬಿ, ಬಾಳೆಹಣ್ಣು, ಅಡಿಕೆ ಮತ್ತು ಅನಾನಸ್) ಸಹ ಇದರಿಂದ ಪ್ರಯೋಜನ ಪಡೆಯಲಿವೆ. ಇವುಗಳ ರಫ್ತು ಮೌಲ್ಯ ಸುಮಾರು 55 ದಶಲಕ್ಷ ಡಾಲರ್ ಎಂದು ಅಂದಾಜಿಸಲಾಗಿದೆ. ಇದು ಭಾರತದ ಒಟ್ಟು 5.7 ಶತಕೋಟಿ ಡಾಲರ್ ಕೃಷಿ ರಫ್ತಿನ ಸುಮಾರು ಐದನೇ ಒಂದು ಭಾಗದಷ್ಟಿದೆ. ವಿನಾಯಿತಿ ಪಡೆದ ಉತ್ಪನ್ನಗಳು ಕಳೆದ ವರ್ಷದ ಭಾರತದ 86 ಶತಕೋಟಿ ಸರಕುಗಳ ರಫ್ತಿನ ಸುಮಾರು 40% ರಷ್ಟಿದೆ.**

2024ರಲ್ಲಿ ಭಾರತದಿಂದ ಅಮೆರಿಕಕ್ಕೆ 500 ದಶಲಕ್ಷ ಡಾಲರ್‌ಗಿಂತ ಹೆಚ್ಚು ಮೌಲ್ಯದ ಮಸಾಲೆಗಳನ್ನು ರಫ್ತು ಮಾಡಲಾಗಿತ್ತು. ಇದೇ ಅವಧಿಯಲ್ಲಿ ಭಾರತದಿಂದ ಚಹಾ ಮತ್ತು ಕಾಫಿ ಆಮದು ಮೌಲ್ಯ ಸುಮಾರು 83 ದಶಲಕ್ಷ ಡಾಲರ್ ಇತ್ತು. ಅಲ್ಲದೆ, ಅಮೆರಿಕವು ವಿಶ್ವದಾದ್ಯಂತ ಒಟ್ಟು 843 ದಶಲಕ್ಷ ಡಾಲರ್ ಮೌಲ್ಯದ ತಾಜಾ ಅಥವಾ ಒಣ ಗೋಡಂಬಿ ಆಮದು ಮಾಡಿಕೊಂಡಿದ್ದು, ಇದರಲ್ಲಿ ಭಾರತದ ಪಾಲು ಸುಮಾರು 20% ರಷ್ಟಿದೆ. ಈ ಗೋಡಂಬಿಗೂ ಸುಂಕದಿಂದ ವಿನಾಯಿತಿ ಸಿಕ್ಕಿದೆ.

**ಯಾವ ಉತ್ಪನ್ನಗಳಿಗೆ ವಿನಾಯಿತಿ ಸಿಕ್ಕಿಲ್ಲ?**

ಭಾರತದಿಂದ ಅಮೆರಿಕಕ್ಕೆ ಬಹು-ಶತಕೋಟಿ ಡಾಲರ್ ರಫ್ತುಗಳಾಗಿರುವ ಸೀಫುಡ್ (ವಿಶೇಷವಾಗಿ ಸಿಗಡಿ) ಮತ್ತು ಬಾಸ್ಮತಿ ಅಕ್ಕಿಗೆ ಮಾತ್ರ ಸುಂಕ ವಿನಾಯಿತಿ ಸಿಕ್ಕಿಲ್ಲ. ಅದೇ ರೀತಿ, ಭಾರತೀಯ ರತ್ನಗಳು, ಆಭರಣಗಳು ಮತ್ತು ಉಡುಪುಗಳ ಮೇಲಿನ 50% ಯುಎಸ್ ಸುಂಕ ನಿರ್ಬಂಧಗಳು ಸಹ ಮುಂದುವರಿದಿವೆ. ನವದೆಹಲಿ ರಷ್ಯಾದ ತೈಲ ಆಮದನ್ನು ನಿಲ್ಲಿಸಿ, ಅಮೆರಿದಕ ಇಂಧನವನ್ನು ಹೆಚ್ಚು ಖರೀದಿಸಲು ಮುಂದಾದರೆ ಮಾತ್ರ ವ್ಯಾಪಾರ ಒಪ್ಪಂದ ಸಾಧ್ಯ ಎಂದು ಟ್ರಂಪ್ ಹೇಳಿದ್ದಾರೆ.

## ದೆಹಲಿಯಲ್ಲಿ ಸ್ಫೋಟ ಸಂಭವಿಸಿದ ಸ್ಥಳದಲ್ಲಿ ಮೂರು ಕಾರ್ಟ್ರಿಜ್ ವಶ

**ನವದೆಹಲಿ:** ರಾಷ್ಟ್ರ ರಾಜಧಾನಿ ದೆಹಲಿಯ ಕೆಂಪುಕೋಟೆಯ ಮೆಟ್ರೊ ನಿಲ್ದಾಣ ಸಮೀಪ ಕಾರ್ ಬಾಂಬ್ ಸ್ಫೋಟ ಪ್ರಕರಣ ಸಂಬಂಧ ಸ್ಥಳೀಯ ಪೊಲೀಸರು ಘಟನಾ ಸ್ಥಳದಲ್ಲಿ 9 ಎಂಎಂನ ಮೂರು ಕಾಟ್ರೇಜ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ಅಧಿಕಾರಿಗಳ ಪ್ರಕಾರ, ಎರಡು ಕಾರ್ಟ್ರಿಜ್‌ಗಳು ಜೀವಂತ ಗುಂಡುಗಳಾಗಿದ್ದರೆ, ಮೂರನೆಯದು ಖಾಲಿ ಶೆಲ್ ಆಗಿದೆ.9 ಎಂಎಂ ಮದ್ದುಗುಂಡುಗಳನ್ನು ಸಾಮಾನ್ಯವಾಗಿ ಭದ್ರತಾ ಪಡೆಗಳು ಮತ್ತು ಪೊಲೀಸ್ ಸಿಬ್ಬಂದಿ ಬಳಸುವುದರಿಂದ ಈ ಆವಿಷ್ಕಾರ ಮಹತ್ವದ್ದಾಗಿದೆ.

ಆದಾಗ್ಯೂ, ಸ್ಥಳದಲ್ಲಿ ಯಾವುದೇ ಪಿಸ್ತೂಲ್ ಅಥವಾ ಶಸ್ತ್ರಾಸ್ತ್ರದ ಭಾಗ ಕಂಡುಬಂದಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದು, ಗುಂಡುಗಳು ಅಲ್ಲಿಗೆ ಹೇಗೆ ಬಂದವು ಎಂಬ ಪ್ರಶ್ನೆಗಳು ಎದ್ದಿವೆ. ನವೆಂಬರ್ 10ರಂದು ಪ್ರಮುಖ ಶಂಕಿತ ಡಾ. ಉಮರ್ ನಬಿ ಚಲಾಯಿಸುತ್ತಿದ್ದ ಹುಂಡೈ ಐ20 ಕಾರಿನ ಸಂಪೂರ್ಣ ಚಲನೆಯನ್ನು ಪತ್ತೆಹಚ್ಚುವ 43 ಸಿಸಿಟಿವಿ ಚಿತ್ರಗಳು ಲಭ್ಯವಾಗಿವೆ.

ಸ್ಫೋಟದ ಸ್ಥಳದಿಂದ ತೆಗೆದ ಡಿಎನ್‌ಎ ಉಮರ್‌ನ ತಾಯಿಯಿಂದ ತೆಗೆದ ಮಾದರಿಗಳಿಗೆ ಹೊಂದಿಕೆಯಾದ ಬಳಿಕ, ದಾಳಿಗೆ ಉಮರ್‌ನ ಡಿಎನ್‌ಎಯನ್ನು ಔಪಚಾರಿಕವಾಗಿ ಜೋಡಿಸಿದ ನಂತರ ಅಧಿಕಾರಿಗಳು ಅವನ ಗುರುತನ್ನು ದೃಢಪಡಿಸಿದ್ದಾರೆ. ಈ ಹಿಂದೆಂದೂ ನೋಡಿರದ ಚಿತ್ರಗಳು, ಸ್ಫೋಟಕ್ಕೆ ಕೆಲವೇ ಗಂಟೆಗಳ ಮೊದಲು ಫರೀದಾಬಾದ್ ವಿಶ್ವವಿದ್ಯಾಲಯದ ಕ್ಯಾಂಪಸ್‌ನಿಂದ ಹಳೆ ದೆಹಲಿಯವರೆಗೆ ಉಮರ್‌ನ ಚಲನವಲನಗಳನ್ನು ಖಚಿತಪಡಿಸಿವೆ.

ದೆಹಲಿ-ಎನ್‌ಸಿಆರ್‌ನ ಅನೇಕ ಜಿಲ್ಲೆಗಳು, ಹೆದ್ದಾರಿಗಳು ಮತ್ತು ಪ್ರಮುಖ ಚೆಕ್‌ಪೋಸ್ಟ್‌ಗಳಾದ್ಯಂತ 5,000ಕ್ಕೂ ಹೆಚ್ಚು ಸಿಸಿಟಿವಿ ಕ್ಯಾಮೆರಾಗಳ ದೃಶ್ಯಗಳನ್ನು ಬಳಸಿಕೊಂಡು ಅಧಿಕಾರಿಗಳು ಈ ಮಾರ್ಗವನ್ನು ಒಟ್ಟುಗೂಡಿಸಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಕೆಂಪುಕೋಟೆ ಮೆಟ್ರೋ ನಿಲ್ದಾಣದ ಗೇಟ್ ಸಂಖ್ಯೆ 1ರ ಬಳಿ ಸಂಭವಿಸಿದ ಸ್ಫೋಟಕ್ಕೆ ಕಾರಣವಾದ ಅಮೋನಿಯಂ ನೈಟ್ರೇಟ್‌ಗಿಂತ ಹೆಚ್ಚು ಶಕ್ತಿಶಾಲಿಯಾದ ಕನಿಷ್ಠ ಒಂದು ಮಾದರಿಯನ್ನು ವಿಧಿವಿಜ್ಞಾನ ತಂಡಗಳು ಸ್ಥಳದಿಂದ ಗುರುತಿಸಿವೆ.





## ಹೆಚ್ಚಿನ ಅಶ್ರುವಾಯು, ಮದ್ದುಗುಂಡುಗಳ ಖರೀದಿ



**ಕೊಚ್ಚಿ:** ಪ್ರತಿಭಟನೆ ವೇಳೆ ಹಿಂಸಾಚಾರ ತಪ್ಪಿಸಲು ಮತ್ತು ಗುಂಪು ಚದುರಿಸಲು ಬೇಕಾಗುವ ವಸ್ತು ಸೇರಿ ಹೆಚ್ಚುವರಿಯಾಗಿ ಅಶ್ರುವಾಯು ಮದ್ದುಗುಂಡುಗಳನ್ನು ಕೇರಳ ಪೊಲೀಸರು ಖರೀದಿಸಲಿದ್ದಾರೆ. ಪೊಲೀಸರ ಕೋರಿಕೆಯ ಮೇರೆಗೆ ರಾಜ್ಯ ಸರ್ಕಾರವು 7,500 ಅಶ್ರುವಾಯು ಮದ್ದುಗುಂಡುಗಳನ್ನು ಖರೀದಿಸಲು ಅನುಮೋದನೆ ನೀಡಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಗೃಹ ಇಲಾಖೆಯ ಆದೇಶದ ಪ್ರಕಾರ, ಮಧ್ಯಪ್ರದೇಶದ ಗ್ವಾಲಿಯರ್‌ನ ತೇಕನ್‌ಪುರದಲ್ಲಿರುವ ಗಡಿ ಭದ್ರತಾ ಪಡೆ ಯ ಘಟಕದಿಂದ 77.13 ಲಕ್ಷ ರೂ. ಮೌಲ್ಯದ ಮದ್ದುಗುಂಡುಗಳನ್ನು ಖರೀದಿಸಲು ಅನುಮತಿ ನೀಡಲಾಗಿದೆ. ಪೊಲೀಸ್ ಪ್ರಧಾನ ಕಚೇರಿಯ ಹಿರಿಯ ಅಧಿಕಾರಿಯೊಬ್ಬರು, ಜಿಲ್ಲೆಯ ಸಶಸ್ತ್ರ ಮೀಸಲು ಶಿಬಿರಗಳು ಟಿಯರ್ ಸೋಕ್ ಮದ್ದುಗುಂಡುಗಳನ್ನು ನಿರ್ವಹಿಸುತ್ತವೆ ಎಂದು ಹೇಳಿದರು. ಖಾಲಿಯಾಗಿರುವ ಕಾರಣ ನಾವು ಹೆಚ್ಚಿನ ಮದ್ದುಗುಂಡುಗಳ ಬೇಡಿಕೆ ಇಟ್ಟಿದ್ದು ನಿಯಮಿತವಾಗಿ, ನಾವು ಅದನ್ನು ಬಿಎಸ್‌ಎಫ್‌ನಿಂದ ಖರೀದಿಸುತ್ತೇವೆ ಎಂದು ಅವರು ಹೇಳಿದರು.

ಕಳೆದ ತಿಂಗಳು, ಕೋಝಿಕ್ಕೋಡ್ ಪೊಲೀಸರು ಪೇರಂಬ್ರಾದಲ್ಲಿ ಸಂಸದ ಶಫಿ ಪರಂಬಿಲ್ ಸೇರಿದಂತೆ ಕಾಂಗ್ರೆಸ್ ಕಾರ್ಯಕರ್ತರ ಗುಂಪನ್ನು ಚದುರಿಸಲು ಅಶ್ರುವಾಯು ಮತ್ತು ರಬ್ಬರ್ ಗುಂಡು ಬಳಸಲಾಗಿತ್ತು. ಇದರಿಂದಾಗಿ ಹಲವರಿಗೆ ಗಾಯಗಳಾಗಿವೆ. ಕೇರಳ ಪೊಲೀಸ್‌ರ ಪ್ರಕಾರ, ಗುಂಪುಗಳನ್ನು ಚದುರಿಸಲು ಅಶ್ರುವಾಯು ಬಳಸಬಹುದು. ಅಶ್ರುವಾಯು ಯಾವುದೇ ದೈಹಿಕ ಗಾಯವನ್ನು ಉಂಟುಮಾಡುವುದಿಲ್ಲ.

## ಕಲ್ಲು ಕ್ವಾರಿ ಕುಸಿತ ಓರ್ವ ಸಾವು

**ಸೋನ್‌ಭದ್ರ:** ಸೋನ್‌ಭದ್ರದ ಓಬ್ರಾ ಪ್ರದೇಶದ ಬಿಲ್ಲಿ-ಮಾರ್ಕುಂಡಿ ಗಣಿಯಲ್ಲಿ ಗಣಿಗಾರಿಕೆಯ ಸಮಯದಲ್ಲಿ ಕಲ್ಲು ಕ್ವಾರಿಯ ಒಂದು ಭಾಗ ಕುಸಿತ ಕುಸಿದು ಭೀಕರ ಅವಘಡ ಸಂಭವಿಸಿದೆ. ಹಲವಾರು ಕಾರ್ಮಿಕರು ಸಿಲುಕಿಕೊಂಡಿರುವ ಶಂಕೆ ವ್ಯಕ್ತವಾಗಿದೆ. ಇಲ್ಲಿಯವರೆಗೆ ಒಬ್ಬರ ಮೃತದೇಹ ಪತ್ತೆಯಾಗಿದ್ದು, ಉಳಿದ ಕಾರ್ಮಿಕರನ್ನು ರಕ್ಷಿಸಲು ಎಲ್ಲಾ ಪ್ರಯತ್ನಗಳು ನಡೆಯುತ್ತಿವೆ. ರಕ್ಷಣಾ ಕಾರ್ಯಾಚರಣೆಗಳು ನಡೆಯುತ್ತಿವೆ.

ಗಾಯಾಳುಗಳನ್ನು ರಕ್ಷಿಸಲು ಮತ್ತು ರಕ್ಷಿಸಲು ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಆರ್‌ಎಫ್ ತಂಡಗಳು ಅವಿಶ್ರಾಂತವಾಗಿ ಕೆಲಸ ಮಾಡುತ್ತಿವೆ. 'ಕೃಷ್ಣ ಮೈನ್ಸ್' ಎಂದು ಕರೆಯಲ್ಪಡುವ ಕಲ್ಲು ಕ್ವಾರಿಯ ದೊಡ್ಡ ಭಾಗವು ಇದ್ದಕ್ಕಿದ್ದಂತೆ ಕುಸಿದು ಬಿದ್ದಾಗ ಈ ಅಪಘಾತ ಸಂಭವಿಸಿದೆ. ಮುಖ್ಯಮಂತ್ರಿಗಳ ಕಾರ್ಯಕ್ರಮದ ಕಾರಣದಿಂದಾಗಿ ಜಿಲ್ಲೆಯಲ್ಲಿ ಗಣಿಗಾರಿಕೆ ಚಟುವಟಿಕೆಗಳನ್ನು ನಿಷೇಧಿಸಲಾಗಿತ್ತು, ಆದರೆ ಇದರ ಹೊರತಾಗಿಯೂ, ಕ್ವಾರಿಯಲ್ಲಿ ಅಕ್ರಮ ಕೆಲಸ ಮುಂದುವರೆದಿದೆ. ಒಂದು ದೊಡ್ಡ ಬಂಡೆ ಒಡೆದು ಕಾರ್ಮಿಕರ ಮೇಲೆ ಬಿದ್ದಿದೆ ಇದರಿಂದಾಗಿ ಇಡೀ ಪ್ರದೇಶದಲ್ಲಿ ಕುಸಿತ ಉಂಟಾಗಲು ಕಾರಣವಾಯಿತು, ಇದರಿಂದಾಗಿ ಸ್ಥಳದಲ್ಲಿ ಆತಂಕದ ವಾತಾವರಣ ನಿರ್ಮಾಣವಾಯಿತು.

ಪ್ರಾಥಮಿಕ ಮಾಹಿತಿಯ ಪ್ರಕಾರ, ಸುಮಾರು 15 ಕಾರ್ಮಿಕರು ಅವಶೇಷಗಳ ಅಡಿಯಲ್ಲಿ ಸಿಲುಕಿರುವ ಶಂಕೆ ವ್ಯಕ್ತವಾಗಿದೆ. ರಕ್ಷಣಾ ತಂಡಗಳು ಇಲ್ಲಿಯವರೆಗೆ ಒಬ್ಬ ಕಾರ್ಮಿಕನ ಶವವನ್ನು ಹೊರತೆಗೆದಿದ್ದು, ಇತರರಿಗಾಗಿ ಹುಡುಕಾಟ ಮುಂದುವರೆದಿದೆ. ಗಾಯಗೊಂಡವರು ಮತ್ತು ಸಿಕ್ಕಿಬಿದ್ದ ಕಾರ್ಮಿಕರ ನಿಖರ ಸಂಖ್ಯೆ ಇನ್ನೂ ಸ್ಪಷ್ಟವಾಗಿಲ್ಲ, ಏಕೆಂದರೆ ಅನೇಕರು ಆಳವಾದ ಅವಶೇಷಗಳ ಅಡಿಯಲ್ಲಿ ಹೂತುಹೋಗಿರುವ ಸಾಧ್ಯತೆಯಿದೆ. ಘಟನೆಯ ನಂತರ ಸ್ಥಳದಲ್ಲಿ ಹೆಚ್ಚಿನ ಸಂಖ್ಯೆಯ ಜನರು ಜಮಾಯಿಸಿದ್ದು, ರಕ್ಷಣಾ ತಂಡಗಳಿಗೆ ಆರಂಭಿಕ ತೊಂದರೆಗಳನ್ನುಂಟು ಮಾಡಿದೆ. ಸ್ಥಳೀಯ ಶಾಸಕರೂ ಆಗಿರುವ ಉತ್ತರ ಪ್ರದೇಶದ ಸಮಾಜ ಕಲ್ಯಾಣ ರಾಜ್ಯ ಸಚಿವ ಗೊಂಡ್, ಜಿಲ್ಲಾ ಅಧಿಕಾರಿಗಳೊಂದಿಗೆ ಸ್ಥಳಕ್ಕೆ ಭೇಟಿ ಪರಿಶೀಲನೆ ನಡೆಸಿದರು.

## ಪ್ರಸಕ್ತ ಹಣಕಾಸು ವರ್ಷದಲ್ಲಿ 7 ಉಪಗ್ರಹಗಳ ಉಡಾವಣೆಗೆ ಇಸ್ರೋ ಯೋಜನೆ

**ಕೋಲ್ಕತಾ:** ಪ್ರಸಕ್ತ ಹಣಕಾಸು ವರ್ಷದಲ್ಲಿ ಇಸ್ರೋ 7 ಉಪಗ್ರಹಗಳ ಉಡಾವಣೆಗೆ ಯೋಜನೆ ರೂಪಿಸಿದ್ದು, 2027ರಲ್ಲಿ ಭಾರತ ಪ್ರಥಮ ಮಾನವಸಹಿತ ಅಂತರಿಕ್ಷ ಯಾನಕ್ಕೆ ಸಜ್ಜಾಗುತ್ತಿದೆ ಎಂದು ಸಂಸ್ಥೆಯ ಅಧ್ಯಕ್ಷ ವಿ.ನಾರಾಯಣನ್ ಅವರು ತಿಳಿಸಿದ್ದಾರೆ.

ಪಿಟಿಐ ಸುದ್ದಿಸಂಸ್ಥೆಗೆ ಸಂದರ್ಶನ ನೀಡಿರುವ ಅವರು, ಇಸ್ರೋ ವಿಜ್ಞಾನ, ತಂತ್ರಜ್ಞಾನ ಮತ್ತ ಕೈಗಾರಿಕಾ ಸಾಮರ್ಥ್ಯದಲ್ಲಿ ಕ್ಷೇತ್ರ ಪ್ರಗತಿ ಸಾಧಿಸುತ್ತಿದೆ ಎಂದು ನುಡಿದಿದ್ದಾರೆ.ಇಸ್ರೋ ಒಂದು ವಾಣಿಜ್ಯಕ ಸಂಪರ್ಕ ಉಪಗ್ರಹ, ಬಹುಮುಖಿ ಪಿಎಸ್‌ಎಲ್‌ವಿ ಮತ್ತು ಜಿಎಸ್‌ಎಲ್‌ವಿ ಸೇರಿದಂತೆ ಪ್ರಸಕ್ತ ಹಣಕಾಸು ವರ್ಷ ಮುಗಿಯುವುದರೊಳಗೆ ಏಳು ಉಪಗ್ರಹಗಳ ಉಡಾವಣೆಗೆ ಎದುರು ನೋಡುತ್ತಿದೆ. 2028ರಕ್ಕು ಚಂದ್ರಯಾನ-4ರ ಗುರಿ ಹಾಕಿಕೊಂಡಿದ್ದೇವೆ ಎಂದು ಅವರು ಹೇಳಿದರು. ಜಪಾನ್ ಏರೋಸ್ಪೇಸ್ ಎಕ್ಸ್‌ಪ್ಲೋರೇಷನ್ ಏಜೆನ್ಸಿ (ಜಕ್ಸಾ)ಯೊಂದಿಗಿನ ಚಂದ್ರನ ಧ್ರುವ ಶೋಧನೆಯ ಲುಪೆಕ್ಸ್ ಯೋಜನೆ ಕೂಡ ಇಸ್ರೋದ ಮತ್ತೊಂದು ಮಹತ್ವದ ಕಾರ್ಯಕ್ರಮವಾಗಿದ ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ಅದೇವೇಳೆ ಗಗನಯಾನ ಬೇಡಿಕೆಗನುಗುಣವಗಿ ಮುಂದಿನ ಮೂರು ವರ್ಷಗಳಲ್ಲಿ ತನ್ನ ವಾರ್ಷಿಕ ವ್ಯೋಮ ನೌಕೆ ಉತ್ಪಾದನೆಯನ್ನು ಮೂರು ಪಟ್ಟು ಹೆಚ್ಚಿಸಲಿದೆ ಎಂದರು.ಚಂದ್ರಯಾನ-4 ಯೋಜನೆ ಚಂದ್ರನಿಂದ ಮಾದರಿಗಳನ್ನು ತೆಗೆದು ಭೂಮಿಗೆ ತರುವ ಕುರಿತಂತೆ ಹಮ್ಮಿಕೊಂಡಿರುವ ಯೋಜನೆಯಾಗಿದೆ. ಪ್ರಸ್ತುತ ಅಮೆರಿಕಾ, ರಷ್ಯಾ ಮತ್ತು ಚೀನಾ ಈ ಮೂರು ದೇಶಗಳು ಮಾತ್ರ ಈ ಸಾಮರ್ಥ್ಯ ಹೊಂದಿವೆ ಎಂದು ಅವರು ವಿವರಿಸಿದರು. ಲೂಪೆಕ್ಸ್ ಯಾನವು ಚಂದ್ರನ ದಕ್ಷಿಣ ಧ್ರುವದಲ್ಲಿ ನೀರು ಮತ್ತು ಹಿಮದ ಅಧ್ಯಯನ ಮಾಡಲಿದೆ ಎಂದರು. ಇಸ್ರೋ ಭಾರತೀಯ ಬಾಹ್ಯಾಕಾಶ ನಿಲ್ದಾಣ ನಿರ್ಮಾಣ ಕಾರ್ಯ ಆರಂಭಿಸಿದ್ದು, ಇದನ್ನು 2035ರ ವೇಳೆಗೆ ಪೂರ್ಣಗೊಳಿಸುವ ಗುರಿ ಹಾಕಿಕೊಳ್ಳಲಾಗಿದೆ. 2028 ವೇಳೆಗೆ ಐದು ಮಾಡ್ಯೂಲ್‌ಗಳ ಪೈಕಿ ಒಂದನ್ನು ಕಕ್ಷೆಗೆ ಸೇರ್ಪಡೆಗೊಳಿಸಲಾಗುವುದು.




**ಚಂದ್ರಯಾನ ಅಭಿಯಾನ**

**ಪಿಎಸ್‌ಎಲ್‌ವಿಯನ್ನು ಸಂಪೂರ್ಣ ಭಾರತದಲ್ಲಿ ತಯಾರಿಸಿದ್ದು, ಇದರ ಪ್ರಥಮ ಉಡಾವಣೆ ಒಂದು ಮೈಲುಗಲ್ಲಾಗಲಿದೆ ಎಂದು ನಾರಯಣನ್ ಹೇಳಿದರು. ಚಂದ್ರನಿಂದ ಮಾದರಿಗಳನ್ನು ತೆಗೆದುಕೊಂಡು ಬರುವ ಚಂದ್ರಯಾನ-4 ಯೋಜನೆಗೆ ಸರ್ಕಾರದ ಅನುಮೋದನೆ ನೀಡಿದೆ. ಇದು ಭಾರತದ ಅತಿ ಗಹನ ಚಂದ್ರಯಾನ ಅಭಿಯಾನವಾಗಿದೆ ಎಂದು ಇಸ್ರೋ ಅಧ್ಯಕ್ಷರು ಪ್ರತಿಪಾದಿಸಿದರು.**

## ಗ್ರೀನ್ ಕಾರ್ಡ್ ಹೆಚ್ಚಳಕ್ಕೆ ಅಮೆರಿಕ ಚಿಂತನೆ

**ವಾಷಿಂಗ್ಟನ್:** ಭಾರತೀಯ ಉದ್ಯೋಗ ಆಧಾರಿತ ಗ್ರೀನ್ ಕಾರ್ಡ್ ಹೆಚ್ಚಳ ಮಾಡಲು ಅಮೆರಿಕಾ ಮುಂದಾಗಿದ್ದು ಇದರಿಂದ ಅನೇಕ ಭಾರತೀಯರಿಗೆ ಪ್ರಯೋಜನವಾಗಲಿದೆ.

ಹೀಗಾಗಲೇ ಎಚ್-1 ಬಿ ವೀಸಾ ಪಡೆಯಲು 1 ಲಕ್ಷ ಡಾಲರ್ ಶುಲ್ಕ ನಿಗದಿ ಮಾಡಿದ್ದರಿಂದ ಹೊಸದಾಗಿ ಎಚ್-1ಬಿ ಶುಲ್ಕ ಪಡೆಯಲು ಭಾರತೀಯರು ಪರದಾಡುವ ಸಮಯದಲ್ಲಿ ಗ್ರೀನ್ ಕಾರ್ಡ್ ಹೊಂದಿರುವ ಭಾರತೀಯರನ್ನು ಮತ್ತಷ್ಟು ಉತ್ತೇಜಿಸಲು ಮುಂದಾಗಿದೆ.

ಇದರಿಂದ ಅಮೆರಿಕಾದಲ್ಲಿ ಗ್ರೀನ್ ಕಾರ್ಡ್‌ಗಾಗಿ ಕಾಯುತ್ತಿರುವ ಅನೇಕ ಭಾರತೀಯ ನುರಿತ ಕಾರ್ಮಿಕರಿಗೆ ಹೊಸಭರವಸೆ ಸೃಷ್ಟಿ ಮಾಡಿದ್ದು ಹೊಸ ಹೊಸ ಆಸೆ, ಆಕಾಂಕ್ಷೆ ಹೆಚ್ಚಳವಾಗಿವೆ.



ಕುಟುಂಬ ಆಧಾರಿತ ವರ್ಗಗಳು ಸ್ಥಳದಲ್ಲಿ ಲಾಕ್ ಆಗಿದ್ದರೂ ಸಹ, ಅಮೇರಿಕಾ ಮುಂದಿನ ತಿಂಗಳು ವೀಸಾ ನೀಡಿಕೆಯ ವೇಳೆ ಗ್ರೀನ್ ಕಾರ್ಡ್ ಸಂಖ್ಯೆ ಹೆಚ್ಚಳ ಮಾಡುವ ಉದ್ದೇಶ ಹೊಂದಿದೆ. ಡೊನಾಲ್ಡ್ ಟ್ರಂಪ್ ನೇತೃತ್ವದ ಸರ್ಕಾರ ಈಗ ಯಾವ ಅರ್ಜಿಗಳನ್ನು ಪ್ರಕ್ರಿಯೆಗೊಳಿಸುತ್ತದೆ ಎಂಬುದನ್ನು ನಿರ್ಧರಿಸುತ್ತದೆ. ಆದ್ಯತೆಯ ದಿನಾಂಕ, ಅರ್ಜಿಯನ್ನು ಮೊದಲು ಸಲ್ಲಿಸಿದ ದಿನ, ಪ್ರಕಟಿತ ಕಟ್‌ಆಫ್ ಸೇರಿದಂತೆ ವಿವಿಧ ವಿಷಯಗಳನ್ನು ಪರಿಗಣಿಸಿ ಗ್ರೀನ್ ಕಾರ್ಡ್ ನೀಡಲು ಮುಂದಾಗಿದೆ.

**ಭಾರತೀಯರು ಪರದಾಡುವ ಸಮಯ**

ಅಮೆರಿಕಾದಲ್ಲಿ ಗ್ರೀನ್ ಕಾರ್ಡ್ ನೀಡುವುದರಿಂದ ಭಾರತೀಯ ವೃತ್ತಿಪರರು ಮತ್ತು ಹೂಡಿಕೆದಾರರ ದೊಡ್ಡ ಸಮೂಹಕಕೆ ಅನುಕೂಲವಾಗಲಿದೆ. ಇದಕ್ಕಾಗಿ ಲಕ್ಷಾಂತರ ಮಂದಿ ಎದುರು ನೋಡುತ್ತಿದ್ದಾರೆ. ಕುಟುಂಬ ಮತ್ತು ಉದ್ಯೋಗ ಎರಡಕ್ಕೂ ಸಲ್ಲಿಸಲು ದಿನಾಂಕಗಳನ್ನು ಬಳಸುವುದನ್ನು ಮುಂದುವರಿಸುತ್ತದೆ, ಅರ್ಹ ಅರ್ಜಿದಾರರು ಮುಂಚಿತವಾಗಿ ಅಗತ್ಯ ದಾಖಲೆಗಳನ್ನು ಸಲ್ಲಿಸಲು, ಆದ್ಯತೆಯ ದಿನಾಂಕಗಳನ್ನು ಲಾಕ್ ಮಾಡಲು ಮತ್ತು ಗ್ರೀನ್ ಕಾರ್ಡ್ ಸಂಖ್ಯೆ ಇನ್ನೂ ಲಭ್ಯವಿಲ್ಲದಿದ್ದರೂ ಸಹ ಕೆಲಸ ಮತ್ತು ಪ್ರಯಾಣ ದಾಖಲೆಗಳನ್ನು ಪಡೆಯಲು ಅನುವು ಮಾಡಿಕೊಡುತ್ತದೆ.

**ಮಿನಿ ನ್ಯೂಸ್**

### ಅಸ್ಸಾಂನಲ್ಲಿ ದೆಹಲಿ ಸ್ಫೋಟ ಬೆಂಬಲಿಸಿ ಪೋಸ್ಟ್ ಮಾಡಿದ್ದ ಮತ್ತೊಬ್ಬನ ಬಂಧನ

**ಗುವಾಹಟಿ:** ದೆಹಲಿ ಸ್ಫೋಟವನ್ನು ಬೆಂಬಲಿಸುವ ಸಾಮಾಜಿಕ ಮಾಧ್ಯಮ ಪೋಸ್ಟ್‌ಗಳನ್ನು ಹಾಕಿದ್ದಕ್ಕಾಗಿ ಅಸ್ಸಾಂನಲ್ಲಿ ಮತ್ತೊಬ್ಬನನ್ನು ಬಂಧಿಸಲಾಗಿದ್ದು, ಈ ಸಂಬಂಧಬಂಧಿತರ ಸಂಖ್ಯೆ ಈವರೆಗೂ ಸಂಖ್ಯೆ 21ಕ್ಕೆ ಏರಿಕೆಯಾಗಿದೆ. ಭಯೋತ್ಪಾದಕರಿಗೆ ಆನ್‌ಲೈನ್‌ನಲ್ಲಿ ಬೆಂಬಲ ನೀಡುವ ಯಾವುದೇ ವ್ಯಕ್ತಿಯನ್ನು ಬಿಡಲಾಗುವುದಿಲ್ಲ ಎಂದು ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರುಬ ಎಚ್ಚರಿಸಿದ್ದಾರೆ.

ತಮ್ಮ ಸಾಮಾಜಿಕ ಜಾಲ ತಾಣ ಎಕ್ಸ್‌ನಲ್ಲಿ ಸಪೋಸ್ಟ್ ಮಾಡಿರುವ ಅವರು, ಇನ್ನೊಬ್ಬ ದೇಶವಿರೋಧಿಯನ್ನು ಪೊಲೀಸರು ಬಂಧಿಸಿದ್ದಾರೆ. ಇದರಿಂದ ಬಂಧಿತರ ಸಂಖ್ಯೆ ಅನ್ನು 21ಕ್ಕೆ ಏರಿಕೆಯಾಗಿದೆ ದೆಹಲಿ ಭಯೋತ್ಪಾದನಾ ದಾಳಿಯ ಹಿಂದೆ ಭಯೋತ್ಪಾದಕರಿಗೆ ಆನ್‌ಲೈನ್‌ನಲ್ಲಿ ಬೆಂಬಲ ವ್ಯಕ್ತಪಡಿಸುವುದನ್ನು ನಾವು ಸಹಿಸುವುದಿಲ್ಲ ಎಂದು ಎಚ್ಚರಿಕೆ ನೀಡಿದ್ದಾರೆ. ಬಂಧಿತರಲ್ಲಿ ತಲಾ ಮೂವರು ಕಮ್ರೂಪ್ ಮತ್ತು ಬೊಂಗೈಗಾಂವ್‌ನಿಂದ, ತಲಾ ಇಬ್ಬರು ಚಿರಾಂಗ್, ಲಖಿಂಪುರ ಮತ್ತು ಬರ್ಪೇಟಾದಿಂದ ಮತ್ತು ದರ್‍ರಾಂಗ್, ಗೋಲ್‌ಪಾರಾ, ನಲ್ಬರಿ, ಹೈಲಕಂಡಿ, ಹೊಜೈ, ಸೌತ್ ಸಲಾರಾ, ಕೊಕ್ರಜಾರ್ ಬಜಾಲಿ ಮತ್ತು ಧುಬ್ರಿಯಿಂದ ತಲಾ ಒಬ್ಬರು ಸೇರಿದ್ದಾರೆ.

### ಪಶ್ಚಿಮ ಬಂಗಾಳದಲ್ಲಿ SIRಗೆ ಚುನಾವಣಾ ಆಯೋಗ ಸಿದ್ಧತೆ

**ಕೋಲ್ಕತ್ತಾ:** ಮುಂದಿನ 5 ತಿಂಗಳಲ್ಲಿ ನಡೆಯಲಿರುವ ಪಶ್ಚಿಮ ಬಂಗಾಳದ ಚುನಾವಣೆಗೆ ಸಿದ್ಧತೆ ಆರಂಭಗೊಂಡಿದೆ. ಮುಖ್ಯ ಚುನಾವಣಾ ಅಧಿಕಾರಿ ಮನೋಜ್ ಕುಮಾರ್ ಅಗರ್ವಾಲ್ ಅವರು ಎಲ್ಲಾ ಜಿಲ್ಲಾ ಚುನಾವಣಾ ಅಧಿಕಾರಿಗಳಿಗೆ ವಿಶೇಷ ಮತಪಟ್ಟಿ ಪರಿಷ್ಕರಣೆ ಕಾರ್ಯ ಪೂರ್ಣಕ್ಕೆ ಸೂಚನೆ ನೀಡಿದ್ದು ಜನರಿಗೆ ನೀಡಿರುವ ಮತದಾನ ಫಾರ್ಮ್‌ಗಳನ್ನು ಈ ತಿಂಗಳೊಳಗೆ ಸಂಗ್ರಹಿಸಲು ನಿರ್ದೇಶನ ನೀಡಿದ್ದಾರೆ.

ಜಿಲ್ಲಾ ಅಧಿಕಾರಿಗಳೊಂದಿಗೆ ನಡೆದ ವಿಡಿಯೋ ಸಮೇಳನದಲ್ಲಿ ಈ ಸೂಚನೆಗಳನ್ನು ನೀಡಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ನವೆಂಬರ್ ಅಂತ್ಯದೊಳಗೆ ಜಿಲ್ಲಾ ಅಧಿಕಾರಿಗಳಿಗೆ ಸೂಚನೆಯನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಲಾಗಿದೆ.

ರಾಜ್ಯದಲ್ಲಿ 7.55 ಕೋಟಿಗೂ ಹೆಚ್ಚು ಎಣಿಕೆ ಫಾರ್ಮ್‌ಗಳನ್ನು (ಶೇಕಡಾ 98.5) ವಿತರಿಸಲಾಗಿದೆ ಎಂದು ಅವರು ಹೇಳಿದರು. ಸಭೆಯಲ್ಲಿ, ಫಾರ್ಮ್‌ಗಳ ವಿತರಣೆ ಏಕೆ ಇನ್ನೂ ಶೇಕಡಾ 100 ರಷ್ಟು ತಲುಪಿಲ್ಲ ಎಂದು ಅಗರ್ವಾಲ್ ಪ್ರಶ್ನಿಸಿದರು. ಯಾವುದೇ ಲೋಪ ಸಹಿಸಲಾಗುವುದಿಲ್ಲ ಎಂದು ಜಿಲ್ಲಾ ಅಧಿಕಾರಿಗಳಿಗೆ ತಿಳಿಸಲಾಗಿದೆ. ಇದಲ್ಲದೆ ಸ್ಥಳೀಯ ಸಮಸ್ಯೆಗಳನ್ನು ತಕ್ಷಣ ಪರಿಹರಿಸಲು ಅವರಿಗೆ ಸೂಚಿಸಲಾಗಿದೆ ಎಂದು ಅವರು ತಿಳಿಸಿದರು.

### ಮೂವರು ನಕ್ಸಲರ ಎನ್‌ಕೌಂಟರ್

**ಸುಕಾ:** ಛತ್ತೀಸ್‌ಗಢದ ಸುಕಾ ಜಿಲ್ಲೆಯಲ್ಲಿ ಭದ್ರತಾ ಸಿಬ್ಬಂದಿಯೊಂದಿಗೆ ನಡೆದ ಗುಂಡಿನ ಚಕಮಕಿಯಲ್ಲಿ ಮೂವರು ನಕ್ಸಲರು ಸಾವನ್ನಪ್ಪಿದ್ದಾರೆ. ಭೆಜ್ಜಿ ಮತ್ತು ಚಿಂತಗುಫಾ ಪೊಲೀಸ್ ಠಾಣೆ ಪ್ರದೇಶಗಳ ಅರಣ್ಯ ಬೆಟ್ಟಗಳಲ್ಲಿ ಇಂದು ಬೆಳಿಗ್ಗೆ ಜಿಲ್ಲಾ ಮೀಸಲು ಪಡೆ ತಂಡವು ನಕ್ಸಲರು ಇರುವ ಬಗ್ಗೆ ಮಾಹಿತಿ ಕಲೆಹಾಕಿ ಕಾರ್ಯಾಚರಣೆ ವೇಳೆ ಗುಂಡಿನ ಚಕಮಕಿ ನಡೆಯಿತು ಎಂದು ಪೊಲೀಸ್ ವರಿಷ್ಠಾಧಿಕಾರಿ ಕಿರಣ್ ಚವಾಣ್ ತಿಳಿಸಿದ್ದಾರೆ. ಇಲ್ಲಿಯವರೆಗೆ, ಗುಂಡಿನ ಚಕಮಕಿಯಲ್ಲಿ ಮೂವರು ನಕ್ಸಲರು ಸಾವನ್ನಪ್ಪಿದ್ದಾರೆ, ಕಾರ್ಯಾಚರಣೆ ಇನ್ನೂ ಮುಂದುವರೆದಿದೆ ಎಂದು ಅವರು ಹೇಳಿದರು.ಇತ್ತೀಚಿನ ಕಠಿಣ ಕ್ರಮಗಳೊಂದಿಗೆ, ಈ ವರ್ಷ ಛತ್ತೀಸ್‌ಗಢದಲ್ಲಿ ನಡೆದ ನಕ್ಸಲ್ ವಿರೋಧಿ ಕಾರ್ಯಾಚರಣೆಯಲ್ಲಿ ಈವರೆಗೆ 262 ನಕ್ಸಲರು ಸಾವನ್ನಪ್ಪಿದ್ದಾರೆ.

### ಗಂಭೀರ ಸ್ವರೂಪಕ್ಕೆ ತಿರುಗಿದ ದೆಹಲಿ ವಾಯು ಗುಣಮಟ್ಟ

**ನವದೆಹಲಿ:** ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಬೆಳಿಗ್ಗೆ ವಾಯು ಗುಣಮಟ್ಟ ಗುಣಮಟ್ಟ ಸೂಚ್ಯಂಕ ಮತ್ತೊಮ್ಮೆ 'ಗಂಭೀರ' ವರ್ಗಕ್ಕೆ ತಲುಪಿದ್ದು, ಮಾಲಿನ್ಯ ಬಿಕ್ಕಟ್ಟನ್ನು ಇನ್ನಷ್ಟು ಹೆಚ್ಚಿಸಿದೆ. ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ಇತ್ತೀಚಿನ ಮಾಹಿತಿಯ ಪ್ರಕಾರ, ನಗರದ ಸರಾಸರಿ ವಾಯು ಗುಣಮಟ್ಟ ಸೂಚ್ಯಂಕ ಸುಮಾರು 490 ದಾಖಲಾಗಿದ್ದು, ಇದು ತುಂಬಾ ಆತಂಕಕಾರಿ ಪರಿಸ್ಥಿತಿಯಾಗಿದೆ. ಅಲಿಪುರ ಮತ್ತು ವಜೀರ್‌ಪುರದಂತಹ ಪ್ರದೇಶಗಳಲ್ಲಿ, ವಾಯು ಗುಣಮಟ್ಟ ಸೂಚ್ಯಂಕ 556 ತಲುಪಿದೆ, ಇದು ಇಂದಿನ ಅತ್ಯಂತ ಕೆಟ್ಟ ಪರಿಸ್ಥಿತಿಯಾಗಿದೆ.

ಶೀತ ಗಾಳಿ ಮತ್ತು ಮಂಜು ಮಾಲಿನ್ಯ ಕಣಗಳನ್ನು ಮೇಲ್ಮೈ ಬಳಿ ಹಿಡಿದಿಟ್ಟುಕೊಳ್ಳುತ್ತಿದ್ದು, ವಿಷಕಾರಿ ಗಾಳಿಯ ಹರಡುವಿಕೆಯನ್ನು ಹೆಚ್ಚಿಸುತ್ತಿದೆ. ಪಿಎಂ 2.5 ಮತ್ತು ಪಿಎಂ 10 ಮಟ್ಟಗಳು ಗಾಳಿಯಲ್ಲಿ ಪ್ರಮುಖ ಮಾಲಿನ್ಯಕಾರಕಗಳಾಗಿ ಉಳಿದಿವೆ, ಇದು ಸಾರ್ವಜನಿಕ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಮುಂಬರುವ ದಿನಗಳಲ್ಲಿ ಪರಿಹಾರದ ಭರವಸೆ ಇಲ್ಲ ಎನ್ನಲಾಗಿದೆ.


# ಮೇಯರ್ ಹತ್ಯೆ ವಿರೋಧಿಸಿ ಮೆಕ್ಸಿಕೋದಲ್ಲಿ ಭುಗಿಲೆದ್ದ 'ಜೆನ್ ಜಿ' ಆಕ್ರೋಶ

**ದೇಶದಲ್ಲಿ ಹೆಚ್ಚುತ್ತಿರುವ ಹಿಂಸಾಚಾರವನ್ನು ನಿಯಂತ್ರಿಸುವಲ್ಲಿ ಈ ನೀತಿಗಳು ವಿಫಲವಾಗಿವೆ ಎಂದು ಪ್ರತಿಭಟನಾಕಾರರ ಆರೋಪ**

**ಮೆಕ್ಸಿಕೋ:** ಮೆಕ್ಸಿಕೋದಾದ್ಯಂತ ಸಾವಿರಾರು ಜನರು ಬೀದಿಗಿಳಿದು ಶನಿವಾರ ಸರ್ಕಾರದ ಭದ್ರತಾ ನೀತಿಗಳ ವಿರುದ್ಧ ಪ್ರತಿಭಟನೆ ನಡೆಸಿದರು. ದೇಶದಲ್ಲಿ ಹೆಚ್ಚುತ್ತಿರುವ ಹಿಂಸಾಚಾರವನ್ನು ನಿಯಂತ್ರಿಸುವಲ್ಲಿ ಈ ನೀತಿಗಳು ವಿಫಲವಾಗಿವೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಜೆನೆರೇಷನ್ Z ಎಂಬ ಹೆಸರಿನಲ್ಲಿ ನಡೆದ ಈ ಪ್ರತಿಭಟನೆಗಳು, ಈ ತಿಂಗಳ ಆರಂಭದಲ್ಲಿ ನಡೆದ ಭ್ರಷ್ಟಾಚಾರ ವಿರೋಧಿ ಮೇಯರ್ ಹತ್ಯೆ ಘಟನೆಯಿಂದ ಪ್ರತಿಭಟನೆಯ ಕಿಡಿ ಹೊತ್ತಿದೆ. ಮೆಕ್ಸಿಕೋ ಸಿಟಿಯಲ್ಲಿ, ಪ್ರತಿಭಟನಾಕಾರರು ಕಾರ್ಲೋಸ್ ಸತ್ತಿಲ್ಲ; ಸರ್ಕಾರವೇ ಕೊಂದಿದೆ ಎಂದು ಘೋಷಣೆ ಕೂಗಿದರು. ಉರುವಾಪನ್ ನಗರದ ಮೇಯರ್ ಕಾರ್ಲೋಸ್ ಮಂಜೊ ಅವರನ್ನು ನವೆಂಬರ್ 1 ರಂದು ನಡೆದ ಡೇ ಆಫ್ ದಿ ಡೆಡ್ ಕಾರ್ಯಕ್ರಮದಲ್ಲಿ ಹತ್ಯೆಗೈಯ್ಯಲಾಗಿತ್ತು.

ಕೆಲವು ಪ್ರತಿಭಟನಾಕಾರರು, ಮೆಕ್ಸಿಕನ್ ಅಧ್ಯಕ್ಷೆ ಕ್ಲಾಡಿಯಾ ಶೀನ್‌ಬಾಮ್ ವಾಸಿಸುವ ಮತ್ತು ಕೆಲಸ ಮಾಡುವ ನ್ಯಾಷನಲ್ ಪ್ಯಾಲೇಸ್ ಸುತ್ತಲಿನ ಲೋಹದ ಬೇಲಿಗಳನ್ನು ಹರಿದುಹಾಕಿದರು. ಇದಕ್ಕೆ ಪ್ರತಿಕ್ರಿಯೆಯಾಗಿ, ಗಲಭೆ ಪೊಲೀಸರು ಅಶ್ರುವಾಯು ಮತ್ತು ಅಗ್ನಿಶಾಮಕ ಯಂತ್ರಗಳನ್ನು ಬಳಸಿ ಪರಿಸ್ಥಿತಿಯನ್ನು ನಿಯಂತ್ರಿಸಲು ಯತ್ನಿಸಿದರು. ಮೆಕ್ಸಿಕೋ ಸಿಟಿಯ ಭದ್ರತಾ ಮುಖ್ಯಸ್ಥ ಪಾಬ್ಲೊ ವರ್ಝ್ಕ್ವೆಝ್, ಹಲವು ಗಂಟೆಗಳ ಕಾಲ, ಈ ಪ್ರತಿಭಟನೆ ಶಾಂತಿಯುತವಾಗಿ ನಡೆಯುತ್ತಿತ್ತು. ಆದರೆ, ಮುಖಕ್ಕೆ ಮುಸುಕು ಹಾಕಿಕೊಂಡ ಕೆಲವರು ಹಿಂಸಾಚಾರ ನಡೆಸಲು ಪ್ರಾರಂಭಿಸಿದರು ಎಂದು ಸುದ್ದಿಗಾರರಿಗೆ ತಿಳಿಸಿದರು. ಪ್ರತಿಭಟನಾಕಾರರು, ಕಾರ್ಲೋಸ್ ಮಂಜೊ ಅವರನ್ನು ನೀವು ಹೀಗೆಯೇ ರಕ್ಷಿಸಬೇಕಿತ್ತು ಎಂದು ಭದ್ರತಾ ಪಡೆಗಳ ವಿರುದ್ಧ ಘೋಷಣೆ ಕೂಗಿದರು ಎಂದು ರಾಯಿಟರ್ಸ್ ಸುದ್ದಿ ಸಂಸ್ಥೆ ವರದಿ ಮಾಡಿದೆ.



**ಪ್ಯಾಲೇಸ್‌ಗೆ ಮುತ್ತಿಗೆ, ಹಿಂಸಾಚಾರ**

ಅಪರಾಧ-ವಿರೋಧಿ ನೀತಿಗಳಿಗೆ ಹೆಸರುವಾಸಿಯಾಗಿದ್ದ ಮೇಯರ್ ಒಬ್ಬರ ಸಾರ್ವಜನಿಕ ಹತ್ಯೆಯ ನಂತರ, ಮೆಕ್ಸಿಕೋದಲ್ಲಿ ಹೆಚ್ಚುತ್ತಿರುವ ಹಿಂಸಾಚಾರವನ್ನು ಖಂಡಿಸಿ ಜನರೇಷನ್ ಜಿ ಹೆಸರಿನಲ್ಲಿ ಸಾವಿರಾರು ಯುವಜನರು ಈ ಬೃಹತ್ ಪ್ರತಿಭಟನೆ ನಡೆಸಿದರು.

- ಮೆಕ್ಸಿಕೋದಾದ್ಯಂತ 'ಜನರೇಷನ್ Z ಎಂಬ ಹೆಸರಿನಲ್ಲಿ ಪ್ರತಿಭಟನೆ
- 'ಕಾರ್ಲೋಸ್ ಸತ್ತಿಲ್ಲ; ಸರ್ಕಾರವೇ ಕೊಂದಿದೆ' ಎಂದು ಘೋಷಣೆ
- 100 ಪೊಲೀಸ್ ಅಧಿಕಾರಿಗಳು ಗಾಯಗೊಂಡಿದ್ದು, 40 ಮಂದಿ ಆಸ್ಪತ್ರೆಗೆ ದಾಖಲು

ದೇಶದ ಇತರೆ ನಗರಗಳಲ್ಲಿಯೂ ಪ್ರತಿಭಟನಾ ಮೆರವಣಿಗೆಗಳು ನಡೆದವು. ವಿಶೇಷವಾಗಿ ಪಶ್ಚಿಮ ರಾಜ್ಯವಾದ ಮೈಕೋಕಾನ್‌ನಲ್ಲಿ ಆಕ್ರೋಶ ತೀವ್ರವಾಗಿತ್ತು. ಮೆಕ್ಸಿಕೋ ಸಿಟಿಯಲ್ಲಿ, ಕೆಲವು ಪ್ರತಿಭಟನಾಕಾರರು ಅಧ್ಯಕ್ಷೆ ಶೀನ್‌ಬಾಮ್ ಅವರ 'ಮೊರೆನಾ' ಪಕ್ಷದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, ಮೊರೆನಾ, ತೊಲಗಿ ಎಂದು ಘೋಷಣೆ ಕೂಗಿದರು.

ಈ ಪ್ರತಿಭಟನೆಗೆ ಕರೆ ನೀಡಿದ್ದ 'ಜನರೇಷನ್ ಜಿ ಮೆಕ್ಸಿಕೋ' ಎಂಬ ಗುಂಪು, ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿರುವ ಘೋಷಣಾ ಪತ್ರದಲ್ಲಿ ತಾವು ಯಾವುದೇ ಪಕ್ಷಕ್ಕೆ ಸೇರಿಲ್ಲವೆಂದು ಸ್ಪಷ್ಟಪಡಿಸಿದೆ. ಹಿಂಸಾಚಾರ, ಭ್ರಷ್ಟಾಚಾರ ಮತ್ತು ಅಧಿಕಾರ ದುರುಪಯೋಗದಿಂದ ಬೇಸತ್ತಿರುವ ಮೆಕ್ಸಿಕನ್ ಯುವಜನರನ್ನು ತಾವು ಪ್ರತಿನಿಧಿಸುವುದಾಗಿ ಹೇಳಿಕೊಂಡಿದೆ. ಆದರೆ, ಶೀನ್‌ಬಾಮ್ ಅವರ ಸರ್ಕಾರವು ಈ ಪ್ರತಿಭಟನೆಗಳ ಹಿಂದಿನ ಉದ್ದೇಶವನ್ನು ಪ್ರಶ್ನಿಸಿದೆ. ಬಲಪಂಥೀಯ ರಾಜಕೀಯ ವಿರೋಧಿಗಳು ಈ ಪ್ರತಿಭಟನೆಗಳನ್ನು ಆಯೋಜಿಸಿದ್ದು, ಸಾಮಾಜಿಕ ಮಾಧ್ಯಮಗಳಲ್ಲಿ ಚಾಟ್‌ಗಳ ಮೂಲಕ ಪ್ರಚಾರ ಮಾಡಿದ್ದಾರೆ ಎಂದು ಆರೋಪಿಸಿದೆ.

**40 ಮಂದಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ**

**ಈ ಘರ್ಷಣೆಯ ಕುರಿತು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಮೆಕ್ಸಿಕೋ ಸಿಟಿಯ ಸಾರ್ವಜನಿಕ ಭದ್ರತಾ ಕಾರ್ಯದರ್ಶಿ ಪಾಬ್ಲೊ ವಾಜ್ಕ್ವೆಜ್, 100 ಪೊಲೀಸ್ ಅಧಿಕಾರಿಗಳು ಗಾಯಗೊಂಡಿದ್ದು, ಅವರಲ್ಲಿ 40 ಮಂದಿಗೆ ಆಸ್ಪತ್ರೆ ಚಿಕಿತ್ಸೆ ಅಗತ್ಯವಾಗಿದೆ ಎಂದು ತಿಳಿಸಿದ್ದಾರೆ. ಅಲ್ಲದೆ, 20 ನಾಗರಿಕರೂ ಗಾಯಗೊಂಡಿದ್ದಾರೆ. 20 ಜನರನ್ನು ಬಂಧಿಸಲಾಗಿದ್ದು, ಇನ್ನೂ 20 ಜನರನ್ನು ಆಡಳಿತಾತ್ಮಕ ಅಪರಾಧಗಳಿಗಾಗಿ ವಶಕ್ಕೆ ಪಡೆಯಲಾಗಿದೆ ಎಂದು ಅವರು ಸ್ಥಳೀಯ ಮಾಧ್ಯಮಕ್ಕೆ ಮಾಹಿತಿ ನೀಡಿದರು.**

# ಧರ್ಮೇಂದ್ರ ಆರೋಗ್ಯದಲ್ಲಿ ಚೇತರಿಕೆ

**90ನೇ ವರ್ಷದ ಹುಟ್ಟುಹಬ್ಬಕ್ಕೆ ಸಿದ್ಧತೆ**

ಬಾಲಿವುಡ್‌ನ ಜನಪ್ರಿಯ ನಟ ಧರ್ಮೇಂದ್ರ, ಅವರು ಡಿಸೆಂಬರ್ 8ರಂದು 90ನೇ ವಸಂತಕ್ಕೆ ಕಾಲಿಡಲಿದ್ದಾರೆ. ಅವರ ಹುಟ್ಟುಹಬ್ಬವನ್ನು ಈ ಬಾರಿ ಸಡಗರದಿಂದ ಆಚರಣೆ ಮಾಡಲು ಕುಟುಂಬದವರು ಸಜ್ಜಾಗುತ್ತಿದ್ದಾರೆ. ಈ ಬಗ್ಗೆ ಬಾಲಿವುಡ್ ಹಂಗಾಮಾ ವರದಿ ಮಾಡಿದೆ. ಇತ್ತೀಚೆಗೆ ಧರ್ಮೇಂದ್ರ, ಅವರ ಆರೋಗ್ಯ ಹದಗೆಟ್ಟಿತ್ತು. ಹಿರಿಯ ನಟ ಧರ್ಮೇಂದ್ರ, ಅವರನ್ನು ಇತ್ತೀಚೆಗೆ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರ ಆರೋಗ್ಯದಲ್ಲಿ ಏರುಪೇರು ಉಂಟಾದ ಕಾರಣ ಐಸಿಯುನಲ್ಲಿ ಚಿಕಿತ್ಸೆ ನೀಡಲಾಗಿತ್ತು. ಉಸಿರಾಟಕ್ಕೆ ವೆಂಟಿಲೇಟರ್ ವ್ಯವಸ್ಥೆ ಮಾಡಲಾಗಿತ್ತು. ಅವರ ಸ್ಥಿತಿ ಗಂಭೀರ ಆಗಿದ್ದರಿಂದ ಅಭಿಮಾನಿಗಳು ಮತ್ತು



ಕುಟುಂಬದವರಿಗೆ ಆತಂಕ ಆಗಿತ್ತು. ಆದರೆ ಬಳಿಕ ಅವರನ್ನು ಡಿಸ್ಚಾರ್ಜ್ ಮಾಡಲಾಯಿತು. ಈಗ ಧರ್ಮೇಂದ್ರ ಅವರ ಆರೋಗ್ಯ ಸುಧಾರಣೆ ಆಗುತ್ತಿದೆ. ಈ ಸುದ್ದಿ ಕೇಳಿ ಎಲ್ಲರಿಗೂ ಖುಷಿ ಆಗಿದೆ. ಶೀಘ್ರದಲ್ಲೇ ಧರ್ಮೇಂದ್ರ ಅವರ ಹುಟ್ಟುಹಬ್ಬ ಬರುತ್ತಿದೆ. ಈ ಬಾರಿ ಸಡಗರದಿಂದ ಹುಟ್ಟುಹಬ್ಬ ಆಚರಣೆ ಮಾಡಲು ಕುಟುಂಬದವರು ನಿರ್ಧರಿಸಿದ್ದಾರೆ. ಡಿಸೆಂಬರ್ 8ರಂದು ಧರ್ಮೇಂದ್ರ ಅವರ ಹುಟ್ಟುಹಬ್ಬ. ಈ ಬಾರಿ ಅವರು 90ನೇ ವರ್ಷಕ್ಕೆ ಕಾಲಿಡಲಿದ್ದಾರೆ. ಹಾಗಾಗಿ ಇದು ಸ್ಪೆಷಲ್. ಅಲ್ಲದೇ ತೀವ್ರ ಅನಾರೋಗ್ಯದಿಂದ ಅವರು ಚೇತರಿಸಿಕೊಂಡಿರುವ ಕಾರಣದಿಂದ ಬಹಳ ಸಂಭ್ರಮದಿಂದ ಕುಟುಂಬದವರು ಹುಟ್ಟುಹಬ್ಬ ಆಚರಣೆ ಮಾಡಲು ತೀರ್ಮಾನಿಸಿದ್ದಾರೆ.



# ನನ್ನಿಂದ ಆಗ್ತಿಲ್ಲ, ನಾನು ಸಾಯುತ್ತೇನೆ! ಬಿಕ್ಕಿ ಬಿಕ್ಕಿ ಅತ್ತ ಸಂಜನಾ!

ಬಿಗ್ ಬಾಸ್ ಮನೆಗೆ ಸಂಜನಾ ಗಲ್ರಾನಿ ಎಂಟ್ರಿ ಕೊಟ್ಟಾಗಿನಿಂದ ಈವರೆಗೂ ಚೆನ್ನಾಗಿ ಆಟ ಆಡುತ್ತಲೇ ಬರುತ್ತಿದ್ದಾರೆ. ಮನೆ ಹೊರಗೆ ಮಾತ್ರವಲ್ಲ ಬಿಗ್ ಬಾಸ್ ಮನೆ ಒಳಗೂ ಎಲ್ಲರೂ ಇವರನ್ನು ಮೆಚ್ಚಿಕೊಂಡಿದ್ದಾರೆ. ಅಗತ್ಯವಿದ್ದಾಗ ಮಾತ್ರ ಮನೆಯಲ್ಲಿ ಧ್ವನಿ ಎತ್ತುತ್ತಾರೆ. ಟಾಸ್ಕ್‌ಗಳಲ್ಲಿ ಕೂಡಾ ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಆಟವಾಡುತ್ತಾರೆ ಮತ್ತು ಗೆಲ್ಲುತ್ತಾರೆ. ಹಾಗೆಯೇ ಅವರು ಕೆಲವೊಮ್ಮೆ ಭಾವುಕರಾಗುತ್ತಾರೆ ಹಾಗೆಯೇ ಪ್ರೇಕ್ಷಕರನ್ನು ಅಳುವಂತೆ ಮಾಡುತ್ತಾರೆ. ಎಲ್ಲಾ ನೆಗೆಟಿವ್ ಅಂಶಗಳ ಹೊರತಾಗಿಯೂ, ಸಂಜನಾ ಕೂಡ ಬಹಳಷ್ಟು ಪಾಸಿಟಿವ್ ಅಂಶಗಳನ್ನು ಹೊಂದಿದ್ದಾರೆ. ಇಲ್ಲಿವರೆಗೆ ಸಂಜನಾ ಪ್ರೇಕ್ಷಕರ ಮತಗಳಿಂದ ಉಳಿಯುತ್ತಾ ಬಂದಿದ್ದಾರೆ. ನಿರೂಪಕ ನಾಗಾರ್ಜುನ ಪ್ರತಿ ವಾರ ಬಂದಾಗಲೂ ಸಂಜನಾ ಬಗ್ಗೆ ಬಹಳಷ್ಟು ಮಾತನಾಡುತ್ತಾರೆ. ಮನೆಯಲ್ಲಿ ಎಲ್ಲರೊಂದಿಗೆ ಮೋಜು ಮಾಡುವ ಸಂಜನಾಗೆ ಈ ವಾರ ಮನೆಯಲ್ಲಿ ಅನ್ಯಾಯವಾಗಿದೆ ಎಂದು ಹೊರಗೆ ಮಾತು ಕೇಳಿ ಬರುತ್ತಿದೆ.

ಕನ್ನಡ, ತೆಲುಗು, ತಮಿಳು ಹೀಗೆ ಅನೇಕ ಭಾಷೆಯ ಸಿನಿಮಾಗಳಲ್ಲಿ ಸಂಜನಾ ಗಲ್ರಾನಿ ಮಿಂಚಿದ್ದಾರೆ. ಕನ್ನಡದಲ್ಲಿ ಸಂಜನಾ ಗಲ್ರಾನಿ ಗಂಡ ಹೆಂಡತಿ ಚಿತ್ರದ ಮೂಲಕವೇ ಬಹಳಷ್ಟು ಖ್ಯಾತಿ ಪಡೆದವರು.



# ವಾರ್ತೆಗಳು ಓದುತ್ತಿರುವವರು ಶಂಕರ್‌ನಾಗ್

**ಹೊಸ ಸಿನಿಮಾಗೆ ಆಕರ್ಷಕ ಟೈಟಲ್**

ಕನ್ನಡದ ಖ್ಯಾತ ನಿರ್ದೇಶಕ ನಾಗಶೇಖರ್ ಅವರು ಹೊಸ ಸಿನಿಮಾದಲ್ಲಿ ಹೀರೋ ಆಗಿ ಅಭಿನಯಿಸುತ್ತಿದ್ದಾರೆ. 'ವಾರ್ತೆಗಳು ಓದುತ್ತಿರುವವರು ಶಂಕರ್‌ನಾಗ್' ಎಂದು ಈ ಸಿನಿಮಾಗೆ ಡಿಫರೆಂಟ್ ಆಗಿ ಶೀರ್ಷಿಕೆ ಇಡಲಾಗಿದೆ. ಇತ್ತೀಚೆಗೆ ಈ ಚಿತ್ರದ ಮುಹೂರ್ತ ಕಾರ್ಯಕ್ರಮ ನಡೆಯಿತು. ಈಗಾಗಲೇ ಸಿನಿಮಾಗೆ ಶೂಟಿಂಗ್ ಶುರುವಾಗಿದೆ. ನಿರ್ದೇಶಕ ನಾಗಶೇಖರ್ ಅವರು ನಟನಾಗಿಯೂ ಬೇಡಿಕೆ ಹೊಂದಿದ್ದಾರೆ. ಹಲವಾರು ಸಿನಿಮಾಗಳಲ್ಲಿ ಅವರು ಅಭಿನಯಿಸಿದ್ದಾರೆ. ನಿರ್ದೇಶಕನಾಗಿ ಅವರು ತಮ್ಮದೇ ಛಾಪು ಮೂಡಿಸಿದ್ದಾರೆ. 'ಮೈನಾ', 'ಮಾಸ್ತಿ ಗುಡಿ', 'ಸಂಜು ವೆಡ್ಸ್ ಗೀತಾ' ಮುಂತಾದ ಸಿನಿಮಾಗಳ ಮೂಲಕ ಜನಮನ ಗೆದ್ದಿದ್ದಾರೆ. ಅದರ ನಡುವೆ ಅವರು ನಟನೆಯನ್ನೂ ಮುಂದುವರಿಸಿದ್ದಾರೆ. ಹೌದು, ನಾಗಶೇಖರ್ ಅವರು ಈಗ ನಾಯಕನಾಗಿ ಅಭಿನಯಿಸುತ್ತಿದ್ದಾರೆ. ಆ ಸಿನಿಮಾಗೆ 'ವಾರ್ತೆಗಳು ಓದುತ್ತಿರುವವರು ಶಂಕರ್‌ನಾಗ್' ಎಂದು ಆಕರ್ಷಕ ಶೀರ್ಷಿಕೆ ಇಡಲಾಗಿದೆ.


ಹಾಸ್ಯ ಕಲಾವಿದನಾಗಿ ಚಿತ್ರರಂಗಕ್ಕೆ ಬಂದವರು ನಾಗಶೇಖರ್. 2002ರಲ್ಲಿ 'ನಿನಗಾಗಿ' ಸಿನಿಮಾ ಮೂಲಕ ಅವರು ನಟನೆ ಆರಂಭಿಸಿದರು. ನಂತರ 50ಕ್ಕೂ ಅಧಿಕ ಸಿನಿಮಾಗಳಲ್ಲಿ ಅವರು ನಟಿಸಿದರು. ಈಗ ನಾಗಶೇಖರ್ ಅವರು ಬಹಳ ದಿನಗಳ ಬಳಿಕ ಮತ್ತೆ ತೆರೆಮೇಲೆ ಬರುತ್ತಿದ್ದಾರೆ. ಶೀರ್ಷಿಕೆ ಮೂಲಕ ಗಮನ ಸೆಳೆದಿರುವ 'ವಾರ್ತೆಗಳು ಓದುತ್ತಿರುವವರು ಶಂಕರ್‌ನಾಗ್' ಸಿನಿಮಾ ಸಖತ್ ಕೌತುಕ ಮೂಡಿಸಿದೆ. 'ವಾರ್ತೆಗಳು ಓದುತ್ತಿರುವವರು ಶಂಕರ್‌ನಾಗ್' ಸಿನಿಮಾಗೆ ಜಿಯಾ ಉಲ್ಲಾ ಖಾನ್ ಅವರು ನಿರ್ದೇಶನ ಮಾಡುತ್ತಿದ್ದಾರೆ. ಇತ್ತೀಚೆಗೆ ನಾಗಶೇಖರ್ ಅವರ ಹುಟ್ಟುಹಬ್ಬ ಆಚರಿಸಲಾಯಿತು.

# ರಾಜಮೌಳಿ ಕೆಲಸ ಕೆಡಿಸಲು ಪ್ರಯತ್ನಿಸಿದ ಕಿಡಿಗೇಡಿಗಳು

ಮಹೇಶ್ ಬಾಬು ಮತ್ತು ರಾಜಮೌಳಿ ಕಾಂಬಿನೇಷನ್‌ನಲ್ಲಿ ಬರುತ್ತಿರುವ 'ವಾರಾಣಸಿ' ಸಿನಿಮಾದ ಟೈಟಲ್ ಟೀಸರ್ ಬಿಡುಗಡೆ ಆಗಿದೆ. ಹೈದರಾಬಾದ್‌ನ ರಾಮೋಜಿ ಫಿಲ್ಮ್ ಸಿಟಿಯಲ್ಲಿ ದೊಡ್ಡ ಕಾರ್ಯಕ್ರಮ ಮಾಡಲಾಗಿದೆ. ಅಲ್ಲಿ ಕೆಲವರು ಡ್ರೋನ್ ತಂದು ಹಾರಿಸಿದ್ದಾರೆ. ಇದರಿಂದಾಗಿ ದೊಡ್ಡ ಪರದೆಯಲ್ಲಿ ಟೈಟಲ್ ಟೀಸರ್ ಪ್ಲೇ ಮಾಡುವುದು ತಡವಾಯಿತು. ಈ ಬಗ್ಗೆ ರಾಜಮೌಳಿ ಮಾತನಾಡಿದರು.

ನಿರ್ದೇಶಕ ರಾಜಮೌಳಿ ಅವರು ಏನೇ ಮಾಡಿದರೂ ಪರ್ಫೆಕ್ಟ್ ಆಗಿ ಮಾಡುತ್ತಾರೆ. ವರ್ಷಗಟ್ಟಲೆ ಶ್ರಮಹಾಕಿ ಅವರು ಸಿನಿಮಾ ನಿರ್ದೇಶಿಸುತ್ತಾರೆ. ಆದರೆ ಅವರ ಶ್ರಮವನ್ನು ಕ್ಷಣಾರ್ಧದಲ್ಲಿ ಹಾಳು ಮಾಡಲು ಕೆಲವು ಕಿಡಿಗೇಡಿಗಳು ಕಾದಿರುತ್ತಾರೆ. ರಾಜಮೌಳಿ ಅವರ ಹೊಸ ಸಿನಿಮಾ 'ವಾರಾಣಸಿ' ವಿಚಾರದಲ್ಲೂ ಹಾಗೆಯೇ ಆಗಿದೆ. ಮಹೇಶ್ ಬಾಬು ಅಭಿನಯದ ಈ ಚಿತ್ರದ ಟೈಟಲ್ ಟೀಸರ್ ಬಿಡುಗಡೆ ಮಾಡಲು ಕೆಲವು ಕಿಡಿಗೇಡಿಗಳು ಅಡ್ಡಿಪಡಿಸಿದರು. ಇದರಿಂದ ರಾಜಮೌಳಿ ಅವರು ಅಭಿಮಾನಿಗಳ ಬಳಿ ಕ್ಷಮೆ ಕೇಳುವಂತಾಯಿತು. ಹೈದರಾಬಾದ್‌ನ ರಾಮೋಜಿ ಫಿಲ್ಮ್ ಸಿಟಿಯಲ್ಲಿ ಗ್ಲೋಬ್ ಟ್ರಾಟರ್ ಇವೆಂಟ್ ಮಾಡಲಾಗಿದೆ. ಇದರಲ್ಲಿ ಅಂದಾಜು 50 ಸಾವಿರ ಜನರು ಭಾಗಿ ಆಗಿರುವ ಸಾಧ್ಯತೆ ಇದೆ. ಇಷ್ಟು ಜನರ ಎದುರಿನಲ್ಲಿ ದೊಡ್ಡ ಎಲ್‌ಡಿಡಿ ಪರದೆ ಮೂಲಕ 'ವಾರಾಣಸಿ' ಟೈಟಲ್ ಟೀಸರ್ ಪ್ರದರ್ಶನ ಮಾಡಬೇಕು ಎಂಬುದು ರಾಜಮೌಳಿ ಅವರ ಪ್ಲ್ಯಾನ್ ಆಗಿತ್ತು. ಆದರೆ ಅದಕ್ಕೆ ತಾಂತ್ರಿಕ ಸಮಸ್ಯೆ ಉಂಟಾಯಿತು! ಅದಕ್ಕಾಗಿ ರಾಜಮೌಳಿ ಕ್ಷಮೆ ಕೇಳಿದರು. ಅಲ್ಲದೇ, ಅಸಲಿ ವಿಷಯ ಏನೆಂಬುದನ್ನು ವಿವರಿಸಿದರು.

'ಕಳೆದ ರಾತ್ರಿ ನಾವು ಈ ದೊಡ್ಡ ಪರದೆಯಲ್ಲಿ ಗ್ಲಿಂಪ್ಸ್ ಪ್ಲೇ ಮಾಡಿ ಪರೀಕ್ಷಿಸಲಿಲ್ಲ. ಯಾಕೆಂದರೆ ಅದನ್ನು ಲೀಕ್ ಮಾಡಲು, ನಮ್ಮ ಒಂದು ವರ್ಷದ ಶ್ರಮವನ್ನು ಹಾಳು ಮಾಡಲು ಇಲ್ಲೊಂದು ಡ್ರೋನ್ ಹಾರಾಡುತ್ತಿತ್ತು. ಅದಕ್ಕಾಗಿ ನಾವು ಟೆಸ್ಟ್ ಮಾಡದೆಯೇ ರಿಸ್ಕ್ ತೆಗೆದುಕೊಂಡೆವು. ಆದರೆ ಈಗ ಗ್ಲಿಂಪ್ಸ್ ಪ್ಲೇ ಮಾಡಲು ವಿದ್ಯುತ್ ಶಕ್ತಿ ಸಾಕಾಗುತ್ತಿಲ್ಲ. ಅದಕ್ಕಾಗಿ ಇನ್ನೂ 10 ನಿಮಿಷ ಹಿಡಿಯಬಹುದು' ಎಂದು ರಾಜಮೌಳಿ ಹೇಳಿದರು.



# ನಾಯಿ ಇದೆ ಎಚ್ಚರಿಕೆ

**ನ.28ಕ್ಕೆ ಬಿಡುಗಡೆ ಆಗಲಿದೆ**

ಭಿನ್ನ ಶೀರ್ಷಿಕೆಯ 'ನಾಯಿ ಇದೆ ಎಚ್ಚರಿಕೆ' ಸಿನಿಮಾ ಈಗಾಗಲೇ ಟ್ರೇಲರ್ ಮೂಲಕ ಗಮನ ಸೆಳೆದಿದೆ. ಈ ಚಿತ್ರ ಈಗ ಬಿಡುಗಡೆಗೆ ಸಜ್ಜಾಗಿದೆ. ನವೆಂಬರ್ 28ರಂದು ರಿಲೀಸ್ ಮಾಡಲು ತೀರ್ಮಾನಿಸಲಾಗಿದೆ. ಡಾಕ್ಟರ್ ಲೀಲಾ ಮೋಹನ್ ಪಿವಿಆರ್ ಅವರು ಈ ಸಿನಿಮಾದಲ್ಲಿ ಪ್ರಮುಖ ಪಾತ್ರ ಮಾಡಿದ್ದಾರೆ. ವೈದ್ಯಕೀಯ ಹಾಗೂ ಸಿನಿಮಾ ಎರಡೂ ಕ್ಷೇತ್ರದಲ್ಲಿ ಡಾ. ಲೀಲಾ ಮೋಹನ್ ಪಿ.ವಿ.ಆರ್. ಅವರು ತೊಡಗಿಕೊಂಡಿದ್ದಾರೆ. ಅವರೇ ನಿರ್ಮಾಣ ಮಾಡಿ ಮುಖ್ಯ ಭೂಮಿಕೆಯಲ್ಲಿ ನಟಿಸಿರುವ 'ನಾಯಿ ಇದೆ ಎಚ್ಚರಿಕೆ' ಸಿನಿಮಾ ಈಗ ಬಿಡುಗಡೆಗೆ ಸಜ್ಜಾಗಿದೆ.

ನವಂಬರ್ 28ರಂದು ರಾಜ್ಯದ್ಯಂತ ಅದ್ದೂರಿಯಾಗಿ ಈ ಸಿನಿಮಾ ಬಿಡುಗಡೆ ಮಾಡಲು ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದಾರೆ. ಈ ಸಿನಿಮಾ ಮಾತ್ರವಲ್ಲದೇ ಬ್ಯಾಕ್ ಟು ಬ್ಯಾಕ್ ಸಿನಿಮಾಗಳಲ್ಲಿ ಕಾಣಿಸಿಕೊಳ್ಳಲು ಅವರು ಸಜ್ಜಾಗಿದ್ದಾರೆ.

'ನಾಯಿ ಇದೆ ಎಚ್ಚರಿಕೆ' ಸಿನಿಮಾ ತನ್ನ ಟೈಟಲ್ ಕಾರಣದಿಂದಲೇ ಕುತೂಹಲ ಮೂಡಿಸಿದೆ. ಬಣ್ಣದ ಲೋಕಕ್ಕೆ ಲೀಲಾ ಮೋಹನ್ ಅವರು ಹೊಸಬರಲ್ಲ. ಬಾಲ್ಯದಿಂದಲೇ ಅಭಿನಯ, ಬರವಣಿಗೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಆಸಕ್ತಿ ಹೊಂದಿದ್ದರು. 2016ರಲ್ಲಿ ಗಿರಿರಾಜ. ಬಿ.ಎಂ., ಪರಮೇಶ್, ಕಲಾಮಧ್ಯಮ ಶಿಕ್ಷಕರಿಂದ ಅಭಿನಯ ಮತ್ತು ರಂಗಭೂಮಿ ತರಬೇತಿಯನ್ನು ಅವರು ಪಡೆದುಕೊಂಡರು.

ಬಳಿಕ ಆಕ್ಸಿಡೆಂಟ್, ಓಎಸ್‌ಟಿ, ಹೈವೇ, ಟ್ರಕ್ ಮುಂತಾದ ಕಿರುಚಿತ್ರಗಳಲ್ಲಿ ನಟಿಸಿ ಅನುಭವ ಪಡೆದರು. 2018ರಿಂದ ಆಲ್ಬಮ್ ಹಾಡುಗಳಲ್ಲೂ ಲೀಲಾ ಮೋಹನ್ ಅವರು ಕಾಣಿಸಿಕೊಂಡರು. ಬಳಿಕ ಪೂರ್ಣ ಪ್ರಮಾಣದಲ್ಲಿ 'ಕನ್ಯಾ', 'ಗಡಿಯಾರ' ಸಿನಿಮಾಗಳಲ್ಲಿ ಅಭಿನಯಿಸಿದರು. ಈಗ 'ನಾಯಿ ಇದೆ ಎಚ್ಚರಿಕೆ' ಸಿನಿಮಾದಲ್ಲಿ ಅವರು ಮುಖ್ಯ ಭೂಮಿಕೆ ನಿಭಾಯಿಸಿದ್ದಾರೆ. ಈ ಸಿನಿಮಾವನ್ನು ಅವರು ನಿರ್ಮಿಸುವುದರ ಜೊತೆಗೆ ಹೀರೋ ಆಗಿ ಅಭಿನಯಿಸಿದ್ದಾರೆ. ಇನ್ನೂ ಹಲವು ಸಿನಿಮಾಗಳಲ್ಲಿ ಲೀಲಾ ಮೋಹನ್ ಅವರು ನಟಿಸಿದ್ದಾರೆ. ಕೌರವ ವೆಂಕಟೇಶ್ ನಿರ್ದೇಶನದ ಸಿನಿಮಾದಲ್ಲಿ ಅವರು ಇದ್ದಾರೆ. 'ಉಗ್ರಾವತಾರ' ಚಿತ್ರದಲ್ಲಿ ಸೈಕೋ ಪಾತ್ರ ಮಾಡಿದ್ದಾರೆ. 'ರೇ1' ಚಿತ್ರದಲ್ಲಿ ಖಳನಾಯಕನಾಗಿ ಕಾಣಿಸಿಕೊಂಡಿದ್ದಾರೆ.



# 93 ವರ್ಷಗಳ ಇತಿಹಾಸದಲ್ಲೇ ಟೀಮ್ ಇಂಡಿಯಾಗೆ ಹೀನಾಯ ಸೋಲು..!



**ಕೇವಲ 93 ರನ್‌ಗಳಿಗೆ ಆಲೌಟ್**

ಕೊಲ್ಕತ್ತಾದ ಈಡನ್ ಗಾರ್ಡನ್ಸ್ ಮೈದಾನದಲ್ಲಿ ನಡೆದ ಮೊದಲ ಟೆಸ್ಟ್ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಸೌತ್ ಆಫ್ರಿಕಾ ತಂಡವು 159 ರನ್‌ಗಳಿಗೆ ಆಲೌಟಾದರೆ, ಟೀಮ್ ಇಂಡಿಯಾ ಪ್ರಥಮ ಇನಿಂಗ್ಸ್‌ನಲ್ಲಿ 189 ರನ್ ಕಲೆಹಾಕಿತು. ಇನ್ನು ದ್ವಿತೀಯ ಇನಿಂಗ್ಸ್‌ನಲ್ಲಿ ಸೌತ್ ಆಫ್ರಿಕಾ 153 ರನ್‌ಗಳಿಗೆ ಆಲೌಟ್ ಆಗಿದೆ. ಮೊದಲ ಇನಿಂಗ್ಸ್‌ನಲ್ಲಿನ 30 ರನ್‌ಗಳ ಮುನ್ನಡೆಯೊಂದಿಗೆ ದ್ವಿತೀಯ ಇನಿಂಗ್ಸ್‌ನಲ್ಲಿ 124 ರನ್‌ಗಳ ಗುರಿ ಪಡೆದ ಟೀಮ್ ಇಂಡಿಯಾ ಕೇವಲ 93 ರನ್‌ಗಳಿಸಿ ಆಲೌಟ್ ಆಗಿದೆ. ಈ ಮೂಲಕ ಭಾರತ ತಂಡ 30 ರನ್‌ಗಳಿಂದ ಸೋಲನುಭವಿಸಿದೆ.

ಭಾರತ ತಂಡವು ಟೆಸ್ಟ್ ಕ್ರಿಕೆಟ್ ಆಡಲು ಶುರುವಾಗಿ ಬರೋಬ್ಬರಿ 93 ವರ್ಷಗಳಾಗಿವೆ. ಈ 93 ವರ್ಷಗಳಲ್ಲಿ ಟೀಮ್ ಇಂಡಿಯಾ ಹಲವು ಏಳು ಬೀಳುಗಳನ್ನು ಕಂಡಿದೆ. ಈ ಏಳು ಬೀಳುಗಳ ನಡುವೆ ಇದೀಗ ಭಾರತ ತಂಡವು ಅತ್ಯಲ್ಪ ಮೊತ್ತವನ್ನು ಬೆನ್ನತ್ತಲಾಗದೇ ಸೋತು ಭಾರೀ ಮುಖಭಂಗ ಅನುಭವಿಸಿದೆ.

ಕೊಲ್ಕತ್ತಾದ ಈಡನ್ ಗಾರ್ಡನ್ಸ್ ಮೈದಾನದಲ್ಲಿ ನಡೆದ ಸೌತ್ ಆಫ್ರಿಕಾ ವಿರುದ್ಧದ ಮೊದಲ ಟೆಸ್ಟ್ ಪಂದ್ಯದಲ್ಲಿ ಭಾರತ ತಂಡವು 30 ರನ್‌ಗಳಿಂದ ಸೋಲೊಪ್ಪಿಕೊಂಡಿದೆ. ಈ ಪಂದ್ಯದ ಕೊನೆಯ ಇನಿಂಗ್ಸ್‌ನಲ್ಲಿ 124 ರನ್‌ಗಳ ಗುರಿ ಪಡೆದ ಟೀಮ್ ಇಂಡಿಯಾ 93 ರನ್‌ಗಳಿಸುವಷ್ಟರಲ್ಲಿ ಸರ್ಪಪತನ ಕಂಡಿದೆ. ಈ ಮೂಲಕ ಟೀಮ್ ಇಂಡಿಯಾಗೆ ತವರಿನಲ್ಲಿ ಹೀನಾಯ ಸೋಲುಣಿಸಿದ ಹೆಗ್ಗಳಿಕೆಯನ್ನು ಸೌತ್ ಆಫ್ರಿಕಾ ತಂಡ ತನ್ನದಾಗಿಸಿಕೊಂಡಿದೆ. ಅಂದರೆ ಭಾರತ ತಂಡವು ತವರು ಮೈದಾನದಲ್ಲಿ ಒಮ್ಮೆಯೂ 130 ಕ್ಕಿಂತ ಕಡಿಮೆ ಗುರಿಯನ್ನು ಬೆನ್ನತ್ತಲಾಗದೇ ಸೋತ ಚರಿತ್ರೆಯೇ ಇರಲಿಲ್ಲ. 2024 ರಲ್ಲಿ ಮುಂಬೈನ ವಾಂಖೆಡೆ ಸ್ಟೇಡಿಯಂನಲ್ಲಿ ನಡೆದ ನ್ಯೂಝಿಲೆಂಡ್ ವಿರುದ್ಧದ ಟೆಸ್ಟ್ ಪಂದ್ಯದ ಕೊನೆಯ ಇನಿಂಗ್ಸ್‌ನಲ್ಲಿ 147 ರನ್‌ಗಳ ಗುರಿ ಬೆನ್ನತ್ತಲಾಗದೇ ಟೀಮ್ ಇಂಡಿಯಾ 25 ರನ್‌ಗಳಿಂದ ಸೋತಿದ್ದು ತವರಿನಲ್ಲಿನ ಹೀನಾಯ ಸೋಲಾಗಿತ್ತು. ಇದೀಗ ಅದಕ್ಕಿಂತ ಕೆಟ್ಟ ದಾಖಲೆಯೊಂದನ್ನು ಟೀಮ್ ಇಂಡಿಯಾ ನಿರ್ಮಿಸಿದೆ.ಸೌತ್ ಆಫ್ರಿಕಾ ತಂಡ ನೀಡಿದ 124 ರನ್‌ಗಳ ಸುಲಭ ಗುರಿ ಬೆನ್ನತ್ತಿದ ಟೀಮ್ ಇಂಡಿಯಾ ಕೇವಲ 93 ರನ್‌ಗಳಿಗೆ ಆಲೌಟ್ ಆಗಿದೆ. ಈ ಮೂಲಕ ತವರಿನಲ್ಲಿ ಅತ್ಯಲ್ಪ ಗುರಿ ಬೆನ್ನತ್ತಲಾಗದೇ ಅತ್ಯಂತ ಹೀನಾಯ ಸೋಲನುಭವಿಸಿದೆ. ಅಷ್ಟೇ ಅಲ್ಲದೆ ಭಾರತದಲ್ಲಿನ ಟೆಸ್ಟ್ ಪಂದ್ಯದಲ್ಲಿ ಅತೀ ಕಡಿಮೆ ಗುರಿ ಪಡೆದು 100 ರನ್‌ಗಳಿಸಲಾಗದೇ ಟೀಮ್ ಇಂಡಿಯಾ ಸೋತಿರುವುದು ಇದೇ ಮೊದಲು. ಹೀಗಾಗಿ ಸೌತ್ ಆಫ್ರಿಕಾ ವಿರುದ್ಧದ ಭಾರತದ ಈ ಸೋಲು ಇತಿಹಾಸ ಪುಟಗಳಲ್ಲಿ ಅಚ್ಚಳಿಯದೇ ಉಳಿಯಲಿದೆ.

# ಇಬ್ಬರು OP... RCB ಎಷ್ಟು ಆಟಗಾರರನ್ನು ಖರೀದಿಸಬಹುದು

**8 ವಿದೇಶಿ ಆಟಗಾರರಿಗೆ ಮಾತ್ರ ಅವಕಾಶ**

ಇಂಡಿಯನ್ ಪ್ರೀಮಿಯರ್ ಲೀಗ್‌ನ 19ನೇ ಆವೃತ್ತಿಗಾಗಿ ಡಿಸೆಂಬರ್ 16 ರಂದು ಮಿನಿ ಹರಾಜು ನಡೆಯಲಿದೆ. ಅಬುಧಾಬಿಯಲ್ಲಿ ನಡೆಯಲಿರುವ ಈ ಹರಾಜಿನಲ್ಲಿ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರಾಂಚೈಸಿ 6+2 ಯೋಜನೆಯೊಂದಿಗೆ ಕಾಣಿಸಿಕೊಳ್ಳಲಿದೆ. ಅಂದರೆ ಒಟ್ಟು 8 ಆಟಗಾರರನ್ನು ಖರೀದಿಸಲು ಆರ್‌ಸಿಬಿಗೆ ಅವಕಾಶವಿದೆ,

ಇಂಡಿಯನ್ ಪ್ರೀಮಿಯರ್ ಲೀಗ್ ಸೀಸನ್-19 ಕ್ಕಾಗಿ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರಾಂಚೈಸಿ ಬರೋಬ್ಬರಿ 17 ಆಟಗಾರರನ್ನು ತಂಡದಲ್ಲೇ ಉಳಿಸಿಕೊಂಡಿದೆ. ಅಲ್ಲದೆ 8 ಆಟಗಾರರನ್ನು ತಂಡದಿಂದ ರಿಲೀಸ್ ಮಾಡಿದೆ. ಆರ್‌ಸಿಬಿ ತಂಡದಿಂದ ರಿಲೀಸ್ ಆದ ಆಟಗಾರರೆಂದರೆ ಲಿಯಾಮ್ ಲಿವಿಂಗ್ ಸ್ಟೋನ್, ಮಯಾಂಕ್ ಅಗರ್ವಾಲ್, ಟಿಮ್ ಸೈಫರ್ಟ್, ಬ್ಲೆಸಿಂಗ್ ಮುಝುರಬಾನಿ, ಸ್ವಸ್ತಿಕ್ ಚಿಕಾರ, ಮನೋಜ್ ಭಾಂಡಗೆ, ಮೋಹಿತ್ ರಾಠಿ, ಲುಂಗಿ ಎನ್‌ಗಿಡಿ. ಈ ಎಂಟು ಆಟಗಾರರ ರಿಲೀಸ್‌ನೊಂದಿಗೆ ಆರ್‌ಸಿಬಿ 16.40 ಕೋಟಿ ರೂ. ಹರಾಜು ಮೊತ್ತ ಹೊಂದಿದೆ.

ಅಂದರೆ ಐಪಿಎಲ್ ಮಿನಿ ಹರಾಜಿನಲ್ಲಿ ಆರ್‌ಸಿಬಿ 16.40 ಕೋಟಿ ರೂ.ನೊಂದಿಗೆ ಕಾಣಿಸಿಕೊಳ್ಳಲಿದೆ. ಅಲ್ಲದೆ ಈ ಮೊತ್ತದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರಾಂಚೈಸಿಯು ಒಟ್ಟು 8 ಆಟಗಾರರನ್ನು ಖರೀದಿಸಬಹುದು. ಅಂದರೆ ಐಪಿಎಲ್




ನಿಯಮದ ಪ್ರಕಾರ ಒಂದು ತಂಡವು ಗರಿಷ್ಠ 25 ಆಟಗಾರರನ್ನು ಹೊಂದಬಹುದು. ಇತ್ತ ಆರ್‌ಸಿಬಿ ತಂಡವು 17 ಆಟಗಾರರನ್ನು ರಿಟೈನ್ ಮಾಡಿಕೊಂಡಿರುವ ಕಾರಣ ಮುಂದಿನ ಸೀಸನ್‌ಗಾಗಿ ಇನ್ನೂ 8 ಆಟಗಾರರನ್ನು ಖರೀದಿಸಬಹುದು. ಈ 8 ಆಟಗಾರರಲ್ಲಿ 6 ಮಂದಿ ಭಾರತೀಯರನ್ನು ಖರೀದಿಸಬಹುದು. ಅಂದರೆ ಆರ್‌ಸಿಬಿಗೆ ಉಳಿದಿರುವುದು 6+2 ಸ್ಲಾಟ್‌ಗಳು ಮಾತ್ರ. ಐಪಿಎಲ್ ನಿಯಮದ ಪ್ರಕಾರ ಒಂದು ತಂಡದಲ್ಲಿ 8 ವಿದೇಶಿ ಆಟಗಾರರಿಗೆ ಮಾತ್ರ ಅವಕಾಶ ನೀಡಬಹುದು. ಆರ್‌ಸಿಬಿ ತಂಡದಲ್ಲಿ ಈಗಾಗಲೇ ವಿದೇಶಿ ಆಟಗಾರರಾಗಿ ಫಿಲ್ ಸಾಲ್ಟ್, ಜೋಶ್ ಹೇಝಲ್‌ವುಡ್, ನುವಾನ್ ತುಷಾರ, ಟಿಮ್ ಡೇವಿಡ್, ರೊಮಾರಿಯೊ ಶೆಫರ್ಡ್ ಹಾಗೂ ಜೇಕಬ್ ಬೆಥೆಲ್ ಇದ್ದಾರೆ. ಅದರಂತೆ ಹರಾಜಿನ ಮೂಲಕ ಇಬ್ಬರು ವಿದೇಶಿ ಆಟಗಾರರನ್ನು ಮಾತ್ರ ಖರೀದಿಸಲು ಆರ್‌ಸಿಬಿಗೆ ಅವಕಾಶವಿದೆ. ಇನ್ನುಳಿದ ಸ್ಥಾನಗಳಿಗೆ ಭಾರತೀಯ ಆಟಗಾರರನ್ನು ಆಯ್ಕೆ ಮಾಡಿಕೊಳ್ಳಬಹುದು. ಅದರಂತೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರಾಂಚೈಸಿಯು 6+2 ಲೆಕ್ಕಾಚಾರದೊಂದಿಗೆ ಹರಾಜಿನಲ್ಲಿ ಕಾಣಿಸಿಕೊಳ್ಳಲಿದೆ. ಈ ಮೂಲಕ 16.40 ಕೋಟಿ ರೂ.ನಲ್ಲಿ ಆರ್‌ಸಿಬಿ ಯಾರನ್ನೆಲ್ಲಾ ಖರೀದಿಸಲಿದೆ ಎಂಬುದನ್ನು ಕಾದು ನೋಡಬೇಕಿದೆ.

# ತಂಡದ ನಾಯಕ ಯಾರೆಂದು ತಿಳಿಸಿದ ಸಿಎಸ್‌ಕೆ

ಐಪಿಎಲ್ 2026ರ ಮಿನಿ ಹರಾಜಿಗೂ ಮುನ್ನ ಚೆನ್ನೈ ಸೂಪರ್ ಕಿಂಗ್ಸ್ ಫ್ರಾಂಚೈಸಿಯು 15 ಆಟಗಾರರನ್ನು ರಿಟೈನ್ ಮಾಡಿಕೊಂಡಿದೆ. ಹಾಗೆಯೇ 10 ಆಟಗಾರರನ್ನು ತಂಡದಿಂದ ರಿಲೀಸ್ ಮಾಡಿದೆ. ಇದರ ಜೊತೆಗೆ ರವೀಂದ್ರ ಜಡೇಜಾ ಹಾಗೂ ಸ್ಯಾಮ್ ಕರನ್ ಅವರನ್ನು ರಾಜಸ್ಥಾನ್ ರಾಯಲ್ಸ್‌ಗೆ ನೀಡಿ ಸಂಜು ಸ್ಯಾಮ್ಸನ್ ಅವರನ್ನು ಖರೀದಿಸಿದೆ.

ಇಂಡಿಯನ್ ಪ್ರೀಮಿಯರ್ ಲೀಗ್ ಸೀಸನ್-19 ರಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಮುನ್ನಡೆಸುವವರು ಯಾರು ಇಂತಹದೊಂದು ಪ್ರಶ್ನೆ ಹುಟ್ಟಿಕೊಳ್ಳಲು ಮುಖ್ಯ ಕಾರಣ ಸಂಜು ಸ್ಯಾಮ್ಸನ್ ಎಂಟ್ರಿ. ರಾಜಸ್ಥಾನ್ ರಾಯಲ್ಸ್ ತಂಡದ ನಾಯಕರಾಗಿದ್ದ ಸಂಜು ಸ್ಯಾಮ್ಸನ್ ಅವರನ್ನು ಸಿಎಸ್‌ಕೆ ಟ್ರೇಡ್ ಮಾಡಿಕೊಂಡಿದೆ. ಅದರಂತೆ ಮುಂದಿನ ಸೀಸನ್‌ನಲ್ಲಿ ಸ್ಯಾಮ್ಸನ್ ಚೆನ್ನೈ ಸೂಪರ್ ಕಿಂಗ್ಸ್ ಪರ ಕಣಕ್ಕಿಳಿಯಲಿದ್ದಾರೆ. ಅತ್ತ ರಾಜಸ್ಥಾನ್ ರಾಯಲ್ಸ್ ತಂಡದ ನಾಯಕರಾಗಿ ಕಾಣಿಸಿಕೊಂಡಿದ್ದ ಕಾರಣ ಸಂಜು ಸ್ಯಾಮ್ಸನ್ ಅವರಿಗೆ ನಾಯಕತ್ವ ನೀಡಲಿದೆಯಾ ಎಂಬ ಕುತೂಹಲ ಅಭಿಮಾನಿಗಳಲ್ಲಿತ್ತು. ಇದರೊಂದಿಗೆ ಮಹೇಂದ್ರ ಸಿಂಗ್ ಧೋನಿ ಕೊನೆಯ ಬಾರಿ ಸಿಎಸ್‌ಕೆ ತಂಡವನ್ನು ಮುನ್ನಡೆಸಲಿದ್ದಾರೆ ಎಂಬ ಮಾತುಗಳು ಕೂಡ ಕೇಳಿ ಬಂದಿದ್ದವು.

ಆದರೀಗ ರುತುರಾಜ್ ಗಾಯಕ್ವಾಡ್ ಅವರನ್ನೇ ನಾಯಕನನ್ನಾಗಿ ಮುಂದುವರೆಸುವುದಾಗಿ ಚೆನ್ನೈ ಸೂಪರ್ ಕಿಂಗ್ಸ್ ಫ್ರಾಂಚೈಸಿ ತಿಳಿಸಿದೆ. 2024 ರಲ್ಲಿ ಸಿಎಸ್‌ಕೆ ತಂಡದ ನಾಯಕನಾಗಿ ಆಯ್ಕೆಯಾಗಿದ್ದ ರುತುರಾಜ್ ಕಳೆದ ಸೀಸನ್‌ನಲ್ಲಿ ಗಾಯದ ಕಾರಣ ಕಣಕ್ಕಿಳಿದಿರಲಿಲ್ಲ. ಹೀಗಾಗಿ ಧೋನಿ ತಂಡವನ್ನು ಮುನ್ನಡೆಸಿದ್ದರು. ಆದರೆ ಐಪಿಎಲ್ 2026 ರಲ್ಲಿ ಧೋನಿ ನಾಯಕನಾಗಿ ಕಾಣಿಸಿಕೊಳ್ಳುವುದಿಲ್ಲ ಎಂದು ಸಿಎಸ್‌ಕೆ ತಿಳಿಸಿದೆ. ಅಷ್ಟೇ ಅಲ್ಲದೆ ಸಂಜು ಸ್ಯಾಮ್ಸನ್ ಅವರಿಗೂ ಕ್ಯಾಪ್ಟನ್ ಪಟ್ಟ ನೀಡಲಾಗುತ್ತಿಲ್ಲ ಎಂಬುದನ್ನು ಸಹ ಖಚಿತಪಡಿಸಿದೆ. ಇದರ ಜೊತೆಗೆ ರುತುರಾಜ್ ಗಾಯಕ್ವಾಡ್ ಅವರೇ ಐಪಿಎಲ್ 2026 ರಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಮುನ್ನಡೆಸಲಿದ್ದಾರೆ ಎಂದು ಸಿಎಸ್‌ಕೆ ಫ್ರಾಂಚೈಸಿಯು ಅಧಿಕೃತವಾಗಿ ತಿಳಿಸಿದೆ. 19ನೇ ಆವೃತ್ತಿಯ ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ರುತುರಾಜ್ ಗಾಯಕ್ವಾಡ್ ಚೆನ್ನೈ ಸೂಪರ್ ಕಿಂಗ್ಸ್ ಫ್ರಾಂಚೈಸಿಯ ನಾಯಕನಾಗಿ ಕಾಣಿಸಿಕೊಳ್ಳುವುದು ಖಚಿತವಾಗಿದೆ.



# ಭಾರತ ಟೆಸ್ಟ್ ತಂಡಕ್ಕೆ 'ಗಂಭೀರ' ನಷ್ಟ

ಗೌತಮ್ ಗಂಭೀರ್ ಕೋಚಿಂಗ್‌ನಲ್ಲಿ ಟೀಮ್ ಇಂಡಿಯಾ ಏಕದಿನ ಹಾಗೂ ಟಿ20 ಕ್ರಿಕೆಟ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದೆ. ಆದರೆ ಟೆಸ್ಟ್ ವಿಷಯಕ್ಕೆ ಬಂದರೆ ತೀರಾ ಕಳಪೆ ಮಟ್ಟದಲ್ಲಿದೆ. ಇದಕ್ಕೆ ಸಾಕ್ಷಿ ಗಂಭೀರ್ ಮುಂದಾಳತ್ವದಲ್ಲಿ ಭಾರತ ತಂಡವು 10 ಟೆಸ್ಟ್ ಪಂದ್ಯಗಳನ್ನು ಸೋತಿರುವುದು. ಟೀಮ್ ಇಂಡಿಯಾ ಕೋಚ್ ಗೌತಮ್ ಗಂಭೀರ್ ಗರಡಿಯಲ್ಲಿ ಭಾರತ ತಂಡವು ಈವರೆಗೆ 19 ಟೆಸ್ಟ್ ಪಂದ್ಯಗಳನ್ನಾಡಿದೆ. ಈ ಹತ್ತೊಂಬತ್ತು ಮ್ಯಾಚ್‌ಗಳಲ್ಲಿ ಟೀಮ್ ಇಂಡಿಯಾ ಗೆದ್ದಿರುವುದು ಕೇವಲ ಏಳು ಪಂದ್ಯಗಳಲ್ಲಿ ಎಂದರೆ ನಂಬಲೇಬೇಕು.


ಅಂದರೆ ಗಂಭೀರ್ ಗರಡಿಯಲ್ಲಿ ಭಾರತ ಟೆಸ್ಟ್ ತಂಡವು ಅಧಃಪತನದತ್ತ ಸಾಗುತ್ತಿದೆ. ಇದಕ್ಕೆ ಸಾಕ್ಷಿ ಈ ಅಂಕಿ ಅಂಶಗಳು...

2024 ರಲ್ಲಿ ಬೆಂಗಳೂರಿನಲ್ಲಿ ನಡೆದ ಮೊದಲ ಟೆಸ್ಟ್ ಪಂದ್ಯದಲ್ಲಿ ಟೀಮ್ ಇಂಡಿಯಾ ವಿರುದ್ಧ ನ್ಯೂಝಿಲೆಂಡ್ 8 ವಿಕೆಟ್‌ಗಳ ಗೆಲುವು ದಾಖಲಿಸಿತ್ತು. ಇದು 36 ವರ್ಷಗಳ ಬಳಿಕ ಭಾರತದಲ್ಲಿ ನ್ಯೂಝಿಲೆಂಡ್ ತಂಡಕ್ಕೆ ದಕ್ಕಿದ ಮೊದಲ ಟೆಸ್ಟ್ ಜಯ ಎಂಬುದು ವಿಶೇಷ. ಅಷ್ಟೇ ಅಲ್ಲದೆ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಕಳೆದ 19 ವರ್ಷಗಳಿಂದ ಗೆಲ್ಲುತ್ತಾ ಬಂದಿದ್ದ ಟೀಮ್ ಇಂಡಿಯಾದ ಗೆಲುವಿನ ನಾಗಾಲೋಟ ಕೂಡ ಇದರೊಂದಿಗೆ ಅಂತ್ಯವಾಗಿತ್ತು.

ಇನ್ನು ನ್ಯೂಝಿಲೆಂಡ್ ವಿರುದ್ಧದ ಮೊದಲ ಟೆಸ್ಟ್ ಪಂದ್ಯದಲ್ಲಿ ಟೀಮ್ ಇಂಡಿಯಾ ಕೇವಲ 46 ರನ್‌ಗಳಿಗೆ ಆಲೌಟ್ ಆಗಿತ್ತು. ಇದು ಟೆಸ್ಟ್ ಕ್ರಿಕೆಟ್ ಇತಿಹಾಸದಲ್ಲೇ ತವರಿನಲ್ಲಿ ಭಾರತ ತಂಡ ಕಲೆಹಾಕಿದ ಅತ್ಯಂತ ಕಡಿಮೆ ಸ್ಕೋರ್ ಎಂಬುದು ವಿಶೇಷ.

92 ವರ್ಷಗಳ ಟೆಸ್ಟ್ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಭಾರತ ತಂಡವು ನ್ಯೂಝಿಲೆಂಡ್ ವಿರುದ್ಧ ಸರಣಿ ಸೋತಿದೆ. ಅಂದರೆ ಗೌತಮ್ ಗಂಭೀರ್ ಕೋಚಿಂಗ್‌ನಲ್ಲಿ ಟೀಮ್ ಇಂಡಿಯಾ ಕಿವೀಸ್ ವಿರುದ್ಧದ 9 ದಶಕಗಳ ಪಾರುಪತ್ಯಕ್ಕೆ ತೆರೆ ಎಳೆದಿದೆ. ನ್ಯೂಝಿಲೆಂಡ್ ವಿರುದ್ಧದ ಸರಣಿ ಸೋಲಿನೊಂದಿಗೆ ತವರಿನಲ್ಲಿ ಭಾರತ ತಂಡದ 12 ವರ್ಷಗಳ ಗೆಲುವಿನ ನಾಗಾಲೋಟಕ್ಕೆ ಬ್ರೇಕ್ ಬಿದ್ದಂತಾಗಿದೆ. ಅಲ್ಲದೆ 12 ವರ್ಷಗಳ ಬಳಿಕ ಟೀಮ್ ಇಂಡಿಯಾ ಸತತ ಟೆಸ್ಟ್ ಪಂದ್ಯಗಳನ್ನು ಸೋತು ನಿರಾಸೆ ಮೂಡಿಸಿದೆ.

ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ 19 ವರ್ಷಗಳ ಟೆಸ್ಟ್ ಗೆಲುವಿನ ನಾಗಾಲೋಟಕ್ಕೆ ತೆರೆ ಎಳೆದಿದ್ದ ಟೀಮ್ ಇಂಡಿಯಾ, ಮುಂಬೈನ ವಾಂಖೆಡೆ ಸ್ಟೇಡಿಯಂನಲ್ಲೂ ನ್ಯೂಝಿಲೆಂಡ್ ವಿರುದ್ಧ ಸೋತು 12 ವರ್ಷಗಳ ಗೆಲುವಿನ ಪರಂಪರೆಯನ್ನು ಅಂತ್ಯಗೊಳಿಸಿತು.



Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966